ತ್ರೈವಾರ್ಷಿಕ ಯೋಜನೆಯ ಪುಸ್ತಕಮಾಲೆ - ೨೫.

ರಾ. ನರಸಿಂಹಾಚಾರ್ಯ

ಜೀವನ ಮತ್ತು ಕಾರ್ಯ

* ಎನ್. ಅನಂತರಂಗಾಚಾರ್

ತ್ರೈವಾರ್ಷಿಕ ಯೋಜನೆಯ ಪುಸ್ತಕಮಾಲೆ—೨೫

ರಾ. ನರಸಿಂಹಾಚಾರ್ಯ

(ಜೀವನ ಮತ್ತು ಕಾರ್ಯ)

ಎನ್. ಅನಂತರಂಗಾಚಾರ್

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು
೧೯೭೧

ಮೊದಲನೆಯ ಮುದ್ರಣ : ೧೯೬೧

ಎಲ್ಲ ಹಕ್ಕುಗಳನ್ನು ಕಾದಿರಿಸಿದೆ

ಬೆಲೆ : ರೂ. ೧–೨೫

ಮುದ್ರಕರು :

ಉಷಾ ಪ್ರೆಸ್, ಮೈಸೂರು–೧

ಪ್ರಸ್ತಾವನೆ

ಕನ್ನಡ ನಾಡು ನುಡಿ ಸಂಸ್ಕೃತಿಯ ಪುರೋಭಿವೃದ್ಧಿಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಾಭಿಮಾನಿಗಳ ಸಲಹೆ ಸಹಕಾರ ಪಡೆದು ತ್ರೈವಾರ್ಷಿಕ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯಲ್ಲಿ ಅಡಕವಾಗಿರುವ ಅಂಶಗಳನ್ನು ೧೯೮೦ ನೆಯ ಜನವರಿಯಿಂದ ಮೂರು ವರ್ಷಗಳ ಕಾಲಾವಧಿಯಲ್ಲಿ ಕಾರ್ಯಗತ ಮಾಡಬೇಕಾಗಿದ್ದು ಈ ಯೋಜನೆಗೆ ತಗಲುವ ವೆಚ್ಚವು ಇಪ್ಪತ್ತು ಲಕ್ಷ ರೂಪಾಯಿಗಳೆಂದು ಅಂದಾಜಾಗಿದೆ. ಈ ಮೊತ್ತದ ಮೂರನೆಯ ಒಂದು ಭಾಗದಷ್ಟು ಹಣವನ್ನು ಪುಸ್ತಕಗಳ ಪ್ರಕಟಣೆಗಾಗಿ ಯೋಜನೆಯಲ್ಲಿ ಮೀಸಲಾಗಿರಿಸಿದೆ.

ಪರಿಷತ್ತು ಪ್ರಾರಂಭವಾದ ತರುವಾಯ ಕನ್ನಡದಲ್ಲಿ ಅನೇಕ ವಿದ್ವತ್ಪೂರ್ಣ ಗ್ರಂಥಗಳನ್ನು ಪ್ರಕಟಿಸಿ ಅವು ಓದುಗರ ಮನ್ನಣೆಗೆ ಪಾತ್ರವಾಗಿವೆಯಷ್ಟೆ. ಇದರ ಜೊತೆಗೆ ಪರಿಷತ್ತಿನ ತ್ರೈವಾರ್ಷಿಕ ಯೋಜನೆಯ ಅವಧಿಯಲ್ಲಿ ಒಂದು ನೂರು ಪುಸ್ತಕಗಳನ್ನಾದರೂ ಹೊರತರಬೇಕೆಂದು ನಿಯೋಜಿಸಲಾಗಿದೆ. ಪುನರ್ಮುದ್ರಣವಾಗಬೇಕಾದ ಕೆಲವು ಪ್ರಾಚೀನ ಗ್ರಂಥಗಳನ್ನು ಪ್ರಕಟಿಸುವುದಲ್ಲದೆ ಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ ಮೊದಲಾದ ನಾನಾ ವಿಷಯಗಳನ್ನು ಕುರಿತ ಗ್ರಂಥಗಳನ್ನೂ ಭಾಷಾಂತರ ಕೃತಿಗಳನ್ನೂ ಜೊತೆಗೆ ವಿದ್ಯಾರ್ಥಿಗಳಿಗೂ ಜನಸಾಮಾನ್ಯರಿಗೂ ಹೆಚ್ಚು ಪ್ರಯೋಜನವಾಗುವಂತೆ ಒಂದು ಸಂಕ್ಷಿಪ್ತ ಶಬ್ದಕೋಶವನ್ನೂ ಅದಷ್ಟು ಜಾಗ್ರತೆ ಪ್ರಕಟಿಸಬೇಕೆಂದು ತೀರ್ಮಾನಿಸಿದೆ.

ಓದುಗರ ದೃಷ್ಟಿಯಿಂದ ಪುಸ್ತಕದ ಬೆಲೆ ದುಬಾರಿಯಾಗದಂತೆ ನೋಡಿಕೊಳ್ಳುವುದು, ಕೆಲವು ಪುಸ್ತಕಗಳನ್ನು ಸಹಾಯಧನ ಪಡೆದು ಕಡಮೆ ಬೆಲೆಗೆ ಮಾರಾಟ ಮಾಡುವುದು ಇವು ಪರಿಷತ್ತಿನ ಆಶಯಗಳಾಗಿವೆ.

ಪ್ರಕಟಣೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಪ್ರಕಟಣೆಯ ಕಾರ್ಯವನ್ನು ಕಾರ್ಯಗತ ಮಾಡಲು ಗ್ರಂಥಪ್ರಕಟಣ ಸಲಹಾ ಸಮಿತಿಯೊಂದನ್ನು ರಚಿಸಿದ್ದು ಆ ಸಮಿತಿಯಲ್ಲಿ ಡಾ|| ಹಾ. ಮಾ. ನಾಯಕ, ಡಾ|| ಜಿ. ಎಸ್. ಶಿವರುದ್ರಪ್ಪ, ಡಾ|| ಆರ್. ಸಿ. ಹಿರೇಮಠ, ಪ್ರೊ|| ಎಂ. ಮರಿ

ಯಪ್ಪ ಭಟ್ಟ, ಶ್ರೀ ಹೆಚ್. ಎಲ್. ನಾಗೇಗೌಡ ಮತ್ತು ಶ್ರೀ ಸಿದ್ಧಯ್ಯ ಪುರಾಣಿಕ ಇವರುಗಳು ಸದಸ್ಯರಾಗಿದ್ದಾರೆ. ಡಾ|| ದೇ. ಶ್ರೀ. ವಮಗಳೆಯವರು ಪ್ರಧಾನ ಸಂಪಾದಕತ್ವದ ಹೊಣೆ ಹೊತ್ತಿದ್ದಾರೆ. ಮತ್ತು ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶ ಸಾಂಗ್ಲಿ, ಶ್ರೀ ಹಂಪ. ನಾಗರಾಜಯ್ಯ ಅವರುಗಳು ಈ ಸಮಿತಿಯ ಕಾರ್ಯದರ್ಶಿಗಳಾಗಿದ್ದಾರೆ. ಇವರೆಲ್ಲರಿಗೂ ಪರಿಷತ್ತು ಆಭಾರಿಯಾಗಿದೆ.

ಈ ಸಮಿತಿಯ ಸಹಕಾರದಿಂದ ಪ್ರಕಟವಾಗುವ ಪರಿಷತ್ತಿನ ಪ್ರಕಟಣೆಗಳನ್ನು ಕನ್ನಡಾಭಿಮಾನಿಗಳು ಆದರದಿಂದ ಬರಮಾಡಿಕೊಂಡು ಆಸಕ್ತಿಯಿಂದ ಓದಬೇಕಾಗಿ ಪ್ರಾರ್ಥನೆ.

ದೇಶಹಳ್ಳಿ ಜಿ. ನಾರಾಯಣ
ಅಧ್ಯಕ್ಷ
ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು
೮-೧೨-೧೯೭೭

ಮುನ್ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನ ತ್ರೈವಾರ್ಷಿಕ ಯೋಜನೆಯಲ್ಲಿ ಪ್ರಕಟವಾಗುತ್ತಿರುವ ನಾಡು–ನುಡಿ ಸೇವಕರ ಜೀವನ ಚರಿತ್ರೆಯಲ್ಲಿ "ಪ್ರಾಕ್ತನ ವಿಮರ್ಶವಿಚಕ್ಷಣ ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ಯ—ಜೀವನ ಮತ್ತು ಕಾರ್ಯ" ಎಂಬುದು ನಾಲ್ಕನೆಯದು. ಆಚಾರ್ಯರ ಕನ್ನಡ ಸೇವೆ ಎಷ್ಟು ಮಹತ್ವದ್ದು ಎಂದು ಕನ್ನಡಿಗರಿಗೆ ವಿವರಿಸಿ ಹೇಳಬೇಕಾಗಿಲ್ಲ. ಕನ್ನಡ ನಾಡು–ನುಡಿಗಳು ಇರುವವರೆಗೆ ಅವರ ಹೆಸರು ಚಿರಸ್ಥಾಯಿಯಾಗಿ ನಿಲ್ಲುತ್ತದೆ.

ನಮ್ಮ ಪ್ರಾರ್ಥನೆಯನ್ನು ಮನ್ನಿಸಿ, ಸಂಶೋಧಕರೂ ವಿಮರ್ಶಕರೂ ನಿವೃತ್ತ ಕನ್ನಡ ಪ್ರಾಧ್ಯಾಪಕರೂ ಆದ ಶ್ರೀ ಎಸ್. ಅನಂತರಂಗಾಚಾರ್ಯರು ರಾ. ನರಸಿಂಹಾಚಾರ್ಯರ ಜೀವನ ಚರಿತ್ರೆಯನ್ನು ಸರಳ ಶೈಲಿಯಲ್ಲಿ ಬರೆದುಕೊಟ್ಟಿದ್ದಾರೆ. ಅವರಿಗೆ ಸಾಹಿತ್ಯಪರಿಷತ್ತಿನ ಪರವಾಗಿ ನಾವು ಹೃತ್ಪೂರ್ವಕವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ರಾ. ನರಸಿಂಹಾಚಾರ್ಯರ ಜೀವನ ಒಂದು ತಪಸ್ಸು. 'ಕರ್ಣಾಟಕ ಕವಿಚರಿತೆ' ಅವರ ತಪಸ್ಸಿನ ಫಲ. ಆ ತಪಸ್ಸಿನ ಒಂದು ಸುಳುಹು ಈ ಜೀವನ ಚರಿತ್ರೆಯಲ್ಲಿ ಪ್ರತಿಬಿಂಬಿಸಿವೆ. ಆಚಾರ್ಯರು ಈ ಸಾಧನೆಯಲ್ಲಿ ತೋರಿಸಿದ, ತಾಳ್ಮೆ, ಸಾಮರ್ಥ್ಯ, ವಿಚಕ್ಷಣತೆ, ಪಾಂಡಿತ್ಯ ಕನ್ನಡಿಗರಿಗೆ ಮೇಲ್ಪಂಕ್ತಿಯಾಗಿವೆ. ಕನ್ನಡಿಗರು ಇದನ್ನು ಆದರದಿಂದ ಬರಮಾಡಿಕೊಳ್ಳುವರೆಂದು ಭಾವಿಸಿದ್ದೇವೆ.

ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಉಷಾ ಮುದ್ರಣಾಲಯದವರಿಗೆ ನಮ್ಮ ವಂದನೆಗಳು.

ರಂ. ಶ್ರೀ. ಮುಗಳಿ,
ಪ್ರಧಾನ ಸಂಪಾದಕರು.

ಗ್ರಂಥಕರ್ತರ ವಿಜ್ಞಾಪನೆ

ಶ್ರೀಮಾನ್. ರಾ. ನರಸಿಂಹಾಚಾರ್ಯರು ಭಾರತಮಾತೆಯ ಸುಪುತ್ರರಲ್ಲಿ ಪ್ರಖ್ಯಾತರು. ಕರ್ನಾಟಕ ಮಾತೆಯ ಆರಾಧಕರಲ್ಲಿ ಅಗ್ರೇಸರರು. ಕನ್ನಡಕ್ಕೆ ಜನತೆಯಿಂದ ಯಾವ ಮಾನ್ಯತೆಯೂ ಇಲ್ಲದ ಕಾಲದಲ್ಲಿ ನಾಡನುಡಿಯ ಕೈಂಕರ್ಯದಲ್ಲಿ ಬದ್ಧಕಂಕಣರಾಗಿ ಜೀವಮಾನವನ್ನೆಲ್ಲಾ ಆ ಕಾರ್ಯಕ್ಕಾಗಿ ಮುಡಿಪಾಗಿಟ್ಟು ಕನ್ನಡ ಸಾಹಿತ್ಯದ ವಿಸ್ತಾರವನ್ನೂ ವೈಶಿಷ್ಟ್ಯವನ್ನೂ ಮೊತ್ತ ಮೊದಲನೆಯ ಸಲ ಪ್ರಕಟ ಮಾಡಿದ ಮಹಾನುಭಾವರು. ಅವರ ಅಖಂಡ ಜೀವನ ಸಾಹಿತ್ಯ ಸಾಧನೆಯ ಪ್ರತೀಕ. ಕನ್ನಡದಲ್ಲಿ ವಿದ್ವತ್ತೆಂದರೇನು, ವಿಮರ್ಶೆಯೆಂದರೇನು ಎಂಬುವುದನ್ನು ಪ್ರಪ್ರಥಮವಾಗಿ ತೋರಿಸಿಕೊಟ್ಟವರವರು. ಒಬ್ಬ ಗಣ್ಯಪಾಶ್ಚಾತ್ಯ ವಿದ್ವಾಂಸರು ಹೇಳುವಂತೆ 'ಸಂಶೋಧನೆಯೆಂಬುದು ಪಾಶ್ಚಾತ್ಯ ವಿದ್ವಾಂಸರ ಪ್ರತ್ಯೇಕ ಸ್ವತ್ತು' ಎಂಬಿದ್ದ ತಪ್ಪು ಭಾವನೆಯನ್ನು ಅವರು ಸುಳ್ಳಾಗಿಸಿದರು. ಕನ್ನಡ ಕ್ಷೇತ್ರದ ಯಾವ ಭಾಗದಲ್ಲಿಯಾದರೂ ಕೆಲಸ ಮಾಡುವವರು ಆಚಾರ್ಯರಿಗೆ ಋಣಿಯಾಗಿಲ್ಲದಿರಲು ಸಾಧ್ಯವೇ ಇಲ್ಲ.

ಇಂತಹ ಪಂಡಿತಪ್ರಕಾಂಡರಿಗೆ ಅವರ ಜೀವಂತಕಾಲದಲ್ಲಿಯೇ ಒಂದು ಸಂಭಾವನಾಗ್ರಂಥವನ್ನು ಅರ್ಪಿಸಬೇಕೆಂದು ದಿವಂಗತ ಡಾ॥ ಎಂ. ಎಚ್. ಕೃಷ್ಣ ಮತ್ತು ನಾನು ಬಹು ಪ್ರಯತ್ನಪಟ್ಟೆವು. ಅವರ ಕಾಲಾನಂತರ ಸ್ಮರಣ ಸಂಪುಟವನ್ನಾದರೂ ತರಬೇಕೆಂದು ನಾನು ಪ್ರಯತ್ನಪಟ್ಟೆ. ವಿಧಿಯು ಕೃಪಣತ ಎರಡಕ್ಕೂ ಅವಕಾಶವನ್ನು ಕೊಡಲಿಲ್ಲ. ನಾಡಿನ ಭಾಗ್ಯದಿಂದ ಕನ್ನಡ ಸಾಹಿತ್ಯ ಪರಿಷತ್ತಿನವರು ಈಗ ಅವರ ಜೀವನ ಮತ್ತು ಕಾರ್ಯದ ವಿಷಯದಲ್ಲಿ ಒಂದು ಹೊತ್ತಿಗೆಯನ್ನು ಪ್ರಕಟಿಸಲು ಮನಸ್ಸು ಮಾಡಿದರು. ಭಾಗ್ಯ ವಿಶೇಷದಿಂದ ಆಕಾರ್ಯ ನನ್ನ ಪಾಲಿಗೆ ಬಂದಿತು. ನಾನೂ ಅದನ್ನು ಸಾಧ್ಯವಾದಷ್ಟು ವಿಶದವಾಗಿ ಬರೆಯಬೇಕೆಂದು ಬಯಸಿದ್ದೆ. ಆದರೆ ಸಾಕಷ್ಟು ದಿವಸಗಳು ದೊರೆಯಲಿಲ್ಲ. ಇದ್ದುದರಲ್ಲಿ ಒಂದು ಲಘುಚಿತ್ರವನ್ನು ಕೊಡಲು ಪ್ರಯತ್ನಪಟ್ಟಿದ್ದೇನೆ. ಇಷ್ಟರಿಂದಲೇ ಅವರ ಅಮರ ವ್ಯಕ್ತಿತ್ವ ಪರಿಸ್ಫುಟವಾಗಿ ಪ್ರಕಾಶವಾಗುತ್ತದೆಂದು ಧೈರ್ಯವಾಗಿ ಹೇಳಬಲ್ಲೆ. ಈ ಕಾರ್ಯವನ್ನು ನನ್ನಿಂದ ಮಾಡಿ

ಸಿದ ಕನ್ನಡ ಸಾಹಿತ್ಯ ಪರಿಷತ್ತಿನವರಿಗೆ ನಾನು ಚಿರ ಋಣಿ. ಈ ಸಂದರ್ಭದಲ್ಲಿ ಸಾಧ್ಯವಾದ ಸಾಧನಸಾಮಗ್ರಿಗಳನ್ನೊದಗಿಸಿಕೊಟ್ಟ ಆಚಾರ್ಯರ ಪೌತ್ರರಾದ ಶ್ರೀ|| ರಾಮಸ್ವಾಮಯ್ಯಂಗಾರ್ಯರಿಗೂ ಆಚಾರ್ಯರ ಆಪ್ತವರ್ಗಕ್ಕೆ ಸೇರಿದ ಸುಪ್ರಖ್ಯಾತ ಪತ್ರಿಕಾಕರ್ತರಾದ ತಿರುಮಲೆ ತಾತಾಚಾರ್ಯ ಶರ್ಮರಿಗೂ ಕೃತಜ್ಞನಾಗಿದ್ದೇನೆ.

ಎಸ್. ಅನಂತರಂಗಾಚಾರ್

ಪರಿವಿಡಿ

ಪುಟ

೧. ಪ್ರವೇಶಿಕೆ ೧

೨. ಆಚಾರ್ಯರ ಬಾಲ್ಯ ಮತ್ತು ವಿದ್ಯಾಭ್ಯಾಸ ೩

೩. ಆಚಾರ್ಯರು ಉಪಾಧ್ಯಾಯರಾಗಿ ೬

೪. ಆಚಾರ್ಯರು ವಿದ್ಯಾ ಇಲಾಖೆಯಲ್ಲಿ
ಭಾಷಾಂತರಕಾರರಾಗಿ ೯

೫. ಪ್ರಾಚ್ಯವಸ್ತುಸಂಶೋಧನ ಇಲಾಖೆ (Archaeological Department) ಯಲ್ಲಿ
ಆಚಾರ್ಯರ ಕಾರ್ಯವೈಖರಿ ೧೧

೬. ಆಚಾರ್ಯರ ಮಿತ್ರವರ್ಗ ಮತ್ತು
ಅವರಿಂದ ಆಚಾರ್ಯರಿಗಾದ ಗುಣಗಾನ ೧೬

೭. ಆಚಾರ್ಯರ ಸಂಶೋಧನಾ ಲೇಖನಗಳು ೨೧

೮. ಆಚಾರ್ಯರ ಕೃತಿಗಳು ೩೩

೯. ಆಚಾರ್ಯರ ಶೀಲ ಸ್ವಭಾವಗಳು ೩೭

೧೦. ಆಚಾರ್ಯರ ನಿಧನ ಮತ್ತು ಅವರ ಜನ್ಮಸ್ಮರಣೆ ೪೧

೧೧. ಶ್ರೀ ಆರ್. ನರಸಿಂಹಾಚಾರ್ಯರ ಕೃತಿಗಳು ಮತ್ತು
ಸಂಶೋಧನಾ ಲೇಖನಗಳ ಪಟ್ಟಿ ೪೬

೧೨. ಶ್ರೀಮಾನ್ ಆರ್. ನರಸಿಂಹಾಚಾರ್ಯರ ವಿಷಯದಲ್ಲಿ
ಪ್ರಕಟವಾದ ಲೇಖನಗಳು ೪೯

ಆರ್. ನರಸಿಂಹಾಚಾರ್ಯರು: ಜೀವನ ಮತ್ತು ಕಾರ್ಯ

ಅವತರಣಿಕೆ

ಕ್ರಿ. ಶ. ಹತ್ತೊಂಬತ್ತನೆಯ ಶತಮಾನವು ಅದರಲ್ಲಿಯೂ ಅದರ ಉತ್ತರಾರ್ಧವು ಭಾರತದ ದೃಷ್ಟಿಯಿಂದ ಬಹುಮುಖ್ಯವಾದ ಕಾಲ. ಅದು ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಯುಗ. ಸುಮಾರು ಎರಡುನೂರು ವರ್ಷಗಳ ಕಾಲದ ಪರಕೀಯ ದಾಸ್ಯಮನೋಭಾವದಿಂದ ಉದಾಸೀನರಾಗಿದ್ದ ಭಾರತೀಯರು ಪರಕೀಯರ ಸಂಪರ್ಕದಿಂದಲೇ ತಮ್ಮ ದುಃಸ್ಥಿತಿಯನ್ನು ಅರಿತು ತಮ್ಮ ಸಾಹಿತ್ಯ ಸಂಸ್ಕೃತಿಗಳನ್ನು ಪುನರುದ್ಧಾರ ಮಾಡಲು ಬದ್ಧಕಂಕಣರಾದರು. ಆ ಕಾರ್ಯದಲ್ಲಿ ನಿರತರಾದವರು ಆ ಅರ್ಧ ಶತಮಾನದ ಕಾಲದಲ್ಲಿ ಅವತರಿಸಿದ ಶ್ರೀ ರಾಮಕೃಷ್ಣ ಪರಮಹಂಸ, ಶ್ರೀ ಸ್ವಾಮಿ ವಿವೇಕಾನಂದ, ಶ್ರೀ ರವೀಂದ್ರನಾಥ ಠಾಕೂರ, ಶ್ರೀ ಸರ್ವಪಲ್ಲಿ ರಾಧಾಕೃಷ್ಣನ್, ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಶ್ರೀ ಸಿ. ವಿ. ರಾಮನ್, ಶ್ರೀ ಮಹಾತ್ಮಗಾಂಧಿ, ಶ್ರೀ ಬಂಕಿಮಚಂದ್ರ, ಶ್ರೀ ವಿರೇಶಲಿಂಗಂ, ಶ್ರೀ ರಾಮಲಿಂಗಸ್ವಾಮಿಯರಂತಹ ಮಹಾಪುರುಷರು. ಇವರೊಬ್ಬೊಬ್ಬರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಅದ್ಭುತವಾದ ಕೆಲಸಗಳನ್ನು ನಡೆಸಿ ಭಾರತಮಾತೆಯ ಕೀರ್ತಿಯನ್ನು ದಿಗಂತ ವಿಶ್ರಾಂತವನ್ನಾಗಿಸಿದ್ದಾರೆ. ಅದೇ ಶ್ರೇಣಿಗೆ ಸೇರಿದವರು ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹದ್ದೂರ್ ಪ್ರಾಚ್ಯವಿದ್ಯಾವೈಭವ ಮಹಾಮಹೋಪಾಧ್ಯಾಯ ಆರ್. ನರಸಿಂಹಾಚಾರ್ಯರು. ಅವರ ಕಾರ್ಯಕ್ಷೇತ್ರದ ವಿಸ್ತಾರವನ್ನೂ ಅವರ ಸೇವೆಯ ಸಂಪೂರ್ಣ ವಿವರವನ್ನೂ ಯಥಾವತ್ತಾಗಿ ನಿರೂಪಿಸುವುದು ಆಗದ ಕೆಲಸ. ಆದರೂ ಭಾರತದ ಚರಿತ್ರೆಯಲ್ಲಿ ಅವರ ಸ್ಥಾನವನ್ನು ನಿರ್ದೇಶಿಸಲು ಬಹು ಸ್ಥೂಲವಾಗಿ ಇಲ್ಲಿ ಪ್ರಯತ್ನಿಸಿದೆ.

ಆಚಾರ್ಯರ ಬಾಲ್ಯ ಮತ್ತು ವಿದ್ಯಾಭ್ಯಾಸ

ಸುಮಾರು ೯೦೦ ವರ್ಷಗಳ ಹಿಂದೆ ಶ್ರೀ ರಂಗಪಟ್ಟಣದ ಸಮೀಪದಲ್ಲಿ ಲಕ್ಷ್ಮೀನೃಸಿಂಹಪುರ (ಕಿರಂಗೂರು) ದೇಶ ಗ್ರಾಮದಲ್ಲಿ ವಿಶಿಷ್ಟಾದ್ವೈತಸಿದ್ಧಾಂತ ಸ್ಥಾಪಕರಾದ ಶ್ರೀ ರಾಮಾನುಜಾಚಾರ್ಯರ ಪಟ್ಟ ಶಿಷ್ಯರೆನ್ನಿಸಿದ್ದ ಪ್ರಖ್ಯಾತ ವಿದ್ವಾಂಸರೂ ಭಾರದ್ವಾಜ ಗೋತ್ರೋತ್ಪನ್ನರೂ ಆದ ಅನಂತಾಚಾರ್ಯರೆಂಬುವರು ವಾಸಿಸುತ್ತಿದ್ದರು. ಅವರು ಕಿರಂಗೂರಿನಲ್ಲಿ ಇದ್ದು ವಿದ್ಯಾಭ್ಯಾಸಕ್ಕಾಗಿ ಶ್ರೀರಂಗಕ್ಕೆ ಹೋಗಿ ಶ್ರೀ ರಾಮಾನುಜರಲ್ಲಿ ವಿದ್ಯಾಭ್ಯಾಸಮಾಡಿ ಅವರ ೭೪ ಸಿಂಹಾಸನಾಧಿಪತಿಗಳಲ್ಲಿ ಒಬ್ಬರಾದರು. ರಾಮಾನುಜರ ಅಪ್ಪಣೆಯಂತೆ ತಿರುಮಲೆ (ತಿರುಪತಿ) ಯಲ್ಲಿ ನೆಲಸಿ ಶ್ರೀನಿವಾಸನ ಅಂತರಂಗ ಭಕ್ತರಾದರು. ಅವರ ಜನ್ಮವರ್ಷ ೧೦೫೩. ಅವರಿಗೆ ಶ್ರೀ ರಾಮಾನುಜರು 'ನೀನೇ ಸಾಹಸಿಯಾದ ಗಂಡಸು—ಆಣ್ ಪಿಳ್ಳೈ' ಎಂದು ಗೌರವಿಸಿದುದರಿಂದ ಅನಂತಾಣ್ ಪಿಳ್ಳೈ ಎಂದು ಪ್ರಸಿದ್ಧರಾದರು. ಅವರ ವಂಶಸ್ಥರು ಅದ್ಯಾಪಿ ತಿರುಮಲೆ, ಕನ್ನಂಬಾಡಿ, [illegible], ಹುಣಸೆ? ಮತ್ತು ಮಂಡಯಂ ಎಂಬ ಊರುಗಳ ಅಗ್ರಹಾರ ಸಮುದಾಯಗಳಿಗೆ ಸೇರಿದವರಾಗಿದ್ದಾರೆ.

ಅವರಿಂದ ಹತ್ತನೆಯ ತಲೆಮಾರಿನವರು ಶ್ರೀನಿವಾಸಾಚಾರ್ಯರೆಂಬ ಮಹಾಪ್ರೌಢ ಪಂಡಿತರಾಗಿದ್ದರು. ಅವರು ಕನ್ನಂಬಾಡಿ ಶಾಖೆಗೆ ಸೇರಿದವರು. ಅವರು ತಮ್ಮ ಗುರುಗಳೊಡನೆ ಮೈಸೂರು ಪ್ರಾಂತಕ್ಕೆ ಬಂದರು. ಈ ಗುರುಗಳು ಮೇಲುಕೋಟೆಯ ಯತಿರಾಜಮಠದಲ್ಲಿ ಶ್ರೀ ವೇದಾಂತ ರಾಮಾನುಜ ಜೀಯರ್ ಎಂಬ ಹೆಸರಿನ ಗುರುಗಳಾದರು. ಶ್ರೀನಿವಾಸಾಚಾರ್ಯರಿಗೆ ೧೫೩೮ ರಲ್ಲಿ ವಿಜಯನಗರದ (ಆನೆಗೊಂದಿ) ಸಂಸ್ಥಾನಾಧಿಪತಿಗಳಿಂದ [illegible]ಹಳ್ಳಿ (ಬೆಂಗಳೂರು ಜಿಲ್ಲಾ ಚನ್ನಪಟ್ಟಣ ತಾಲ್ಲೂಕಿಗೆ ಸೇರಿದುದು) ಎಂಬ ಗ್ರಾಮವು ಉಂಬಳಿಯಾಗಿ ಕೊಡಲ್ಪಟ್ಟಿತು. ಈ ಹಳ್ಳಿಗೆ ಶ್ರೀನಿವಾಸಾಚಾರ್ಯರು ರಾಮಾನುಜಪುರ ಎಂಬ ಹೆಸರಿಟ್ಟು ತಾವು ವಾಸಿಸುತ್ತಿದ್ದ ಗ್ರಾಮದಿಂದ ಇಲ್ಲಿಗೆ ಬಂದು ನೆಲಸಿದರು. ಈ ಸಮುದಾಯದವರು ಚನ್ನಪಟ್ಟಣದ ಹತ್ತಿರವಿರುವ ಮಳೂರಿನಲ್ಲಿಯೂ ಶ್ರೀರಂಗಪಟ್ಟಣದ ತಾಲ್ಲೂಕ್ ಅರಕೆರೆ ಬಳಿ ಇರುವ ಮಂಡ್ಯದ ಕೊಪ್ಪಲಿನಲ್ಲಿಯೂ ಮನೆಗಳನ್ನು ಸ್ಥಾಪಿಸಿದರು. ಮೇಲೆಯೇ ತಿಳಿಸಿರುವಂತೆ ಅನಂತಾಚಾರ್ಯ ಸ್ವಾಮಿಯವರ

ಪರಂಪರೆಗೆ ಸೇರಿದ ಇವರ ವಂಶಕ್ಕೆ ಆನಂದಾಳ್ವಾನ್ ಪಿಳ್ಳೆಯ ವಂಶವೆಂಬುದು ಪ್ರಸಿದ್ಧವಾಗಿತ್ತು. ಈ ವಂಶದ ತಿರುನಾರಾಯಣಸ್ವಾಮಿಯಂಗಾರ್ ಎಂಬುವರಿಗೆ ಕ್ರಿ.ಶ. ೧೮೬೦ ನೆಯ ವರ್ಷದ ಏಪ್ರಿಲ್ ತಿಂಗಳಲ್ಲಿ ಅಂದರೆ ರೌದ್ರಿ ಸಂವತ್ಸರದ ಚೈತ್ರ ಶುದ್ಧ ಬಿದಿಗೆ ಅಶ್ವಿನಿ ನಕ್ಷತ್ರದಲ್ಲಿ ಶ್ರೀ ನರಸಿಂಹಾಚಾರ್ಯರು ಜನಿಸಿದರು. ಇವರ ತಾಯಿಯ ಹೆಸರು ರಂಗಮ್ಮಾಳ್ ಎಂದು. ಆಚಾರ್ಯರು ತಾಯಿಗೆ ಮೂರನೆಯ ಮಕ್ಕಳಾಗಿ ಜನಿಸಿದರು.

ಆಚಾರ್ಯರು ಕಾವೇರಿಯ ತೀರದ ಶ್ರೀರಂಗಪಟ್ಟಣದ ಸಮೀಪದಲ್ಲಿರುವ ಮಂಡ್ಯದ ಕೊಪ್ಪಲಿನಲ್ಲಿ ಬಾಲ್ಯವನ್ನು ಕಳೆದರು. ಆಚಾರ್ಯರೇ ತಮ್ಮ ಕಾಲದ ಹಳ್ಳಿ ವಿದ್ಯಾಶಾಲೆಗಳ ವಿಷಯವನ್ನು ವಿವರವಾಗಿ ತಿಳಿಸಿದ್ದಾರೆ. ಆ ಕಾಲದಲ್ಲಿ ಸಾರ್ವಜನಿಕ ಶಾಲೆಗಳಿರಲಿಲ್ಲ. ಸ್ವತಂತ್ರವಾದ ಕೂಲಿಮಠಗಳಿರುತ್ತಿದ್ದುವು. ವಂಶಪಾರಂಪರ್ಯದಿಂದ ಉಪಾಧ್ಯಾಯ ವೃತ್ತಿಯನ್ನವಲಂಬಿಸಿದ್ದ ಜೋಯಿಸರುಗಳೆಂಬುವರು ಪ್ರತಿಹಳ್ಳಿಯಲ್ಲಿಯೂ ಮಠಗಳನ್ನು (ಶಾಲೆ) ನಡೆಸುತ್ತಿದ್ದರು. ಅಲ್ಲಿ ವಿದ್ಯಾರ್ಥಿಗಳನ್ನು ತರಗತಿಗಳನ್ನಾಗಿ ವಿಭಾಗಿಸುತ್ತಿರಲಿಲ್ಲ. ಮರಳು, ಹಲಗೆ, ಕಾಗದದ ಮೇಲೆ ಬರೆಯುವುದರ ಆಧಾರದ ಮೇಲೆ ವಿದ್ಯಾರ್ಥಿಗಳು ವಿಭಾಗಿಸಲ್ಪಡುತ್ತಿದ್ದರು. ಉಪಾಧ್ಯಾಯರು ಸಕಾಲಕ್ಕೆ ಬರಬೇಕಾದ ನಿರ್ಬಂಧವಿರಲಿಲ್ಲ. ವಿದ್ಯಾರ್ಥಿಗಳಿಗೆ ಮಾತ್ರ ಸಕಾಲಕ್ಕೆ ಬಂದವರ ಕೈಯ ಮೇಲೆ ಮಾನ್ಯತೆಯ ಗುರುತೂ ಕಾಲಮೀರಿ ಬಂದವರಿಗೆ ಬೆತ್ತದ ಸೇವೆಯೂ ಲಭಿಸುತ್ತಿತ್ತು. ಬಸ್ಕಿ ಹೊಡೆಸುವುದು, ಕೋದಂಡ ಹಾಕುವುದೂ ಇತರ ಸಾಮಾನ್ಯ ದಂಡನೆಗಳಾಗುತ್ತಿದ್ದುವು. ‘ಬೆತ್ತವನ್ನು ಬೀಸದಿದ್ದರೆ ಭೀಮನೂ ಬೆಪ್ಪನಾಗುತ್ತಾನೆ’ ಎಂಬುದು ಅಂದು ಪಾಲಿಸುತ್ತಿದ್ದ ಪಾಠಶಾಲೆಯ ಪರಿಪಾಠ. ತರಗತಿಗಳು ಯಾವಾಗಲೂ ವಿಶೇಷ ಗಲಭೆಯಿಂದ ಕೂಡಿರುತ್ತಿತ್ತು. ಉಪಾಧ್ಯಾಯರಿಗೆ ನಿಶ್ಚಿತವಾದ ಸಂಬಳವಿರಲಿಲ್ಲ. ಪ್ರತಿವಿದ್ಯಾರ್ಥಿಯಿಂದಲೂ ತಿಂಗಳಿಗೆ ಧಾನ್ಯರೂಪದಿಂದಲೋ ದ್ರವ್ಯರೂಪದಿಂದಲೋ ಶುಲ್ಕ ಸಲ್ಲುತ್ತಿತ್ತು. ನವರಾತ್ರಿಯ ಕಾಲದಲ್ಲಿ ಉಪಾಧ್ಯಾಯರು ವಿದ್ಯಾರ್ಥಿಗಳನ್ನು ಹೊಸವಸ್ತ್ರಗಳಿಂದ ಅಲಂಕರಿಸಿ ಗ್ರಾಮದ ಪ್ರತಿಮನೆಗೂ ಹೋಗಿ ಸರಸ್ವತಿಯ ಹಾಡನ್ನು ಹಾಡಿಸಿ ಕೋಲಾಟಗಳನ್ನಾಡಿಸಿ ತಮಗೆ ಬಹುಮಾನವನ್ನೂ ಬಾಲಕರಿಗೆ ಕೊಬ್ಬರಿ ಬೆಲ್ಲವನ್ನೂ ಸಂಪಾದಿಸುತ್ತಿದ್ದರು. ಸುಲಭವಾಗಿ ದಾನಮಾಡದವನ ಮುಂದೆ ಜಿಪುಣನ ಪದ

ವನ್ನು ಹೇಳಿ, ಅವರು ನಾಚಿಕೊಳ್ಳುವ ಹಾಗೆ ಮಾಡಿ ಯಥೋಚಿತ ಸಂಭಾವನೆಯನ್ನು ಗಳಿಸುತ್ತಿದ್ದರು. ಮಹಾಸ್ವಾಮಿ ಚೌಪದಗಳಲ್ಲಿ ಗ್ರಾಮದ ಎಲ್ಲ ಕಸುಬಿನವರಿಗೂ ಸಂಬಂಧಿಸಿದಂತೆ ಹಲಕೆಲವು ಪದಗಳಿದ್ದುದರಿಂದ ಅದರ ಹಾಡುಗಾರಿಕೆಯಿಂದ ಎಲ್ಲರೂ ತೃಪ್ತರಾಗಿ ಸೂಕ್ತ ಸಂಭಾವನೆಗಳನ್ನು ಕೊಡುತ್ತಿದ್ದರು. ಇಂತಹ ಶಾಲೆಯೊಂದರಲ್ಲಿ ಆಚಾರ್ಯರ ಅಕ್ಷರಾಭ್ಯಾಸವಾಯಿತು. ೧೮೬೮ ರಿಂದ ಮುಂದಕ್ಕೆ ಬಿ. ಎಲ್. ರೈಸರವರಿಂದ ಈ ಶಾಲೆಗಳೆಲ್ಲ ಪರಿಷ್ಕೃತವಾಗಿ ಹೋಬಳಿ ಶಾಲೆಗಳಾಗಿ ಪರಿವರ್ತಿತವಾದುವು. ಆಚಾರ್ಯರು ಕನ್ನಡವನ್ನು ಇಲ್ಲಿ ಕಲಿತರೂ ಸಂಸ್ಕೃತವನ್ನೂ ಇತರ ಭಾಷಾಸಂಸ್ಕಾರಗಳನ್ನೂ ತಮ್ಮ ತಂದೆಯವರಲ್ಲಿ ಅಭ್ಯಸಿಸಿದರು.

ನರಸಿಂಹಾಚಾರ್ಯರಿಗೆ ಅವರ ೧೩ನೆಯ ವಯಸ್ಸಿನಲ್ಲಿ ತಿರುಪತಿಯಲ್ಲಿ ಮದುವೆಯಾಯಿತು. ಅವರ ಮಾವನವರು ಮದ್ರಾಸಿನವರಾದುದರಿಂದ ಆಚಾರ್ಯರೂ ಅಲ್ಲಿಗೆ ಹೋಗಿ ಅಲ್ಲಿಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದಿ ೧೮೭೭ನೆಯ ವರ್ಷದಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ತಮಿಳನ್ನೇ ಐಚ್ಛಿಕ ವಿಷಯವನ್ನಾಗಿ ಆರಿಸಿಕೊಂಡು ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾದರು.

ಮುಂದೆ ಆಚಾರ್ಯರು ಮೈಸೂರಿಗೆ ಹಿಂತಿರುಗಿದರು. ಆ ಕಾಲದ ಪ್ರಾಚೀನ ಇಂಗ್ಲೀಷ್ ಶಾಲೆಯೆಂದರೆ ಮೈಸೂರಿನ ರಾಜಾ ಕಾಲೇಜು. ಬ್ರಿಟಿಷ್ ರೆಸಿಡೆಂಟರಾಗಿದ್ದ ಫ್ರೇಸರ್ ಅವರ ಸೂಚನೆಯ ಮೇರೆಗೆ ಮುಮ್ಮಡಿ ಕೃಷ್ಣರಾಜ ಒಡೆಯರವರಿಂದ ೧೮೩೩ ರಲ್ಲಿ ಸ್ಥಾಪಿತವಾಯಿತು. ಇದೇ ಇಂದಿನ ಮಹಾರಾಜಾ ಕಾಲೇಜು ಎಂಬುದು. ಕಾಲಕ್ರಮದಿಂದ ಮುಂದಿನದು ಬೆಂಗಳೂರಿನಲ್ಲಿ ವೆಸ್ಲಿಯನ್ ಮಿಷನ್ ಸೊಸೈಟಿಯಿಂದ ಸ್ಥಾಪಿತವಾದ ರೀತಿಯ ವಿದ್ಯಾಸಂಸ್ಥೆ. ಇದಕ್ಕೆ ಸರ್ಕಾರದಿಂದ ವರ್ಷಕ್ಕೆ ೬೦೦ ರೂಪಾಯಿಗಳ ಅನುದಾನವಾದ ಸಹಾಯ ದ್ರವ್ಯ ಸಿಗುತ್ತಿತ್ತು. ಜೆ. ಗ್ಯಾರೆಟ್ ಇದರ ಮುಖ್ಯಸ್ಥರಾಗಿದ್ದರು. ೧೮೫೮ ರ ವರೆಗೆ ಬೆಂಗಳೂರಿನಲ್ಲಿ ಇದೊಂದೇ ಇಂಗ್ಲೀಷ್ ಶಾಲೆಯಿದ್ದುದು. ಅಲ್ಲಿಯೆ ಸಾಹಿತ್ಯವನ್ನು ಬೋಧಿಸುವುದು ಅವರ ವೈಶಿಷ್ಟ್ಯವಾಗಿದ್ದಿತು. ಆ ವರುಷದಲ್ಲಿ ಜೆ. ಗ್ಯಾರೆಟ್ ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತುದರಿಂದ ಅಲ್ಲಿ ಅವರ ವಿದ್ಯಾರ್ಥಿಗಳಾಗಿದ್ದವರೂ ಅವರ ಪ್ರೋತ್ಸಾಹಕರೂ ಒಂದು ಸರ್ಕಾರಿ ಶಾಲೆಯನ್ನು ಸ್ಥಾಪಿಸಬೇಕೆಂದು ಸರ್ಕಾರವನ್ನು ಪ್ರಾರ್ಥಿಸಿದರು. ಅದರ ಫಲವಾಗಿ ೧೮೫೮ ರಲ್ಲಿ ಬೆಂಗಳೂರು ಹೈಸ್ಕೂಲ್ ಪ್ರಾರಂಭವಾಯಿತು. ಗ್ಯಾರೆಟ್ಟೇ ಅದರ ಮೊದಲನೆಯ ಅಧ್ಯಕ್ಷರಾದರು. ಹೈಸ್ಕೂಲ್

ಎಂದು ಹೆಸರಿದ್ದರೂ ಅದರಲ್ಲಿ ಬಿ.ಎ. ಪರೀಕ್ಷೆವರೆಗಿನ ಪಾಠಗಳು ನಡೆಯುತ್ತಿದ್ದು ಮದ್ರಾಸ್ ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟಿತ್ತು. ಇದು ಪ್ರಧಾನವಾಗಿ ವಿಜ್ಞಾನಬೋಧಕ ಶಾಲೆಯಾಗಿತ್ತು. ಗ್ಯಾರೆಟ್ ಕನ್ನಡಭಾಷಾಂತರಕಾರರಾಗಿದ್ದುದರಿಂದ 'ಕನ್ನಡ ಇಂಗ್ಲೀಷ್ ಕೋಶ', 'ಕಥಾಸಪ್ತತಿ', 'ಕಥಾಮಂಜರಿ' ಮತ್ತು ಅನೇಕ ಪಠ್ಯಪುಸ್ತಕಗಳನ್ನು ರಚಿಸಿದರು. ಇವರು ಸರ್ಕಾರದ ವಿದ್ಯಾಧಿಕಾರಿಯಾಗಿ ನೇಮಕವಾದ ತರುವಾಯ ರೈಸ್ ಈ ಶಾಲೆಯ ಅಧ್ಯಕ್ಷರಾದರು. ಇಲ್ಲಿ ಅನೇಕ ಸರ್ಕಾರಿ ವಿದ್ಯಾರ್ಥಿವೇತನಗಳೂ ಅಲ್ಲದೆ ೭ ರೂಪಾಯಿ ಮೌಲ್ಯದ ಡಾಬ್ಸ್ ವಿದ್ಯಾರ್ಥಿವೇತನವೂ ಇತ್ತು. ಇದು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತಮ ವರ್ಗದಲ್ಲಿ ತೇರ್ಗಡೆ ಹೊಂದಿದವರಿಗೆ ಮೀಸಲಾಗಿದ್ದಿತು. ಮುಂದೆ ರೈಸ್ ವಿದ್ಯಾಧಿಕಾರಿಯಾದಮೇಲೆ ಬ್ಲಾಕ್ ಮೋರ್, ಛಾರಲ್ಸ್ ವಾಟರ್ಸ್ ಎಂಬುವರು ಕ್ರಮವಾಗಿ ಈ ಶಾಲೆಯ ಅಧ್ಯಕ್ಷ ಪೀಠವನ್ನಲಂಕರಿಸಿದರು. ೧೮೭೫ರಲ್ಲಿ ಈ ಹೈಸ್ಕೂಲ್ ಸೆಂಟ್ರಲ್ ಕಾಲೇಜೆಂಬ ಹೊಸ ಅಭಿಧಾನವನ್ನು ಪಡೆದು ಮದ್ರಾಸ್ ವಿಶ್ವವಿದ್ಯಾನಿಲಯದ ಅಧೀನವಾದ ಪ್ರಥಮ ವರ್ಗದ ಪ್ರೌಢಶಾಲೆಯಾಯಿತು.

ಆಚಾರ್ಯರು ೧೮೭೮ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಮುಂದಿನ ವ್ಯಾಸಂಗಕ್ಕೆ ಸೆಂಟ್ರಲ್ ಕಾಲೇಜಿಗೆ ಬಂದು ಸೇರಿದರು. ಈ ಕಾಲೇಜಿನಲ್ಲಿ ಅಧ್ಯಕ್ಷರಾದ ವಾಟರ್ಸ್ ಅಲ್ಲದೆ ಬಾಬಾ, ಕಿಂಗ್, ಅಡಾಲ್ಫಸ್, ಆರ್. ವೆಂಕಟರಾಮಯ್ಯ, ಎಸ್. ಕೃಷ್ಣಸ್ವಾಮಯ್ಯರ್, ಮಲ್ಹಾರಿರಾವ್, ಜಿ. ಕೃಷ್ಣರಾವ್, ಸಿ. ಕೃಷ್ಣರಾವ್, ಟಿ. ವಾಸುದೇವಯ್ಯ ಮೊದಲಾದವರು ಬೋಧಕ ವರ್ಗದಲ್ಲಿದ್ದರು. ತೆಲುಗುವಿನಾ ಉಳಿದ ದೇಶಭಾಷೆಗಳೆಲ್ಲ ಉಪದೇಶಿಸಲ್ಪಡುತ್ತಿದ್ದವು. ತರಗತಿಗಳು ಚಿಕ್ಕವಾಗಿರುತ್ತಿದ್ದವು. ಪರೀಕ್ಷೆಗಳನ್ನು ಭಾಗಗಳಾಗಿ ಪಾಸ್ ಮಾಡಲು ಅವಕಾಶವಿರಲಿಲ್ಲ.

ಆಚಾರ್ಯರು ೧೮೭೮ರಲ್ಲಿ ಕಾಲೇಜನ್ನು ಸೇರಿದಾಗ ಅಧ್ಯಕ್ಷರಾದ ವಾಟರ್ಸ್ ಅವರು ಮೆಟ್ರಿಕ್ಯುಲೇಷನ್ನಿನಲ್ಲಿ ಆಚಾರ್ಯರ ಇಂಗ್ಲೀಷ್ ಅಂಕಗಳನ್ನು ನೋಡಿ ಬಹಳ ಸಂತೋಷಪಟ್ಟು ಅವರನ್ನು ಶುಲ್ಕವಿಲ್ಲದ ಉಚಿತ ವಿದ್ಯಾರ್ಥಿಯನ್ನಾಗಿ ಸೇರಿಸಿಕೊಂಡುದಲ್ಲದೆ ಮೂರು ರೂಪಾಯಿನ ವಿದ್ಯಾರ್ಥಿವೇತನವೊಂದನ್ನೂ ೭ ರೂಪಾಯಿನ ಡಾಬ್ಸ್ ವಿದ್ಯಾರ್ಥಿವೇತನವನ್ನೂ ಕೊಡಿಸಿದರು. ೧೮೮೦ರಲ್ಲಿ ಆಚಾರ್ಯರು ಎಫ್. ಎ. ಪರೀಕ್ಷೆಯನ್ನು ಉಚ್ಚ ಪ್ರಥಮ ತರಗತಿಯಲ್ಲಿ ತೇರ್ಗಡೆ ಹೊಂದಿದಾಗ

ವಾಟ್ಸನ್ ಅವರು ಸಂತೋಷಾಧಿಕ್ಯದಿಂದ ತಮ್ಮ ಹ್ಯಾಟನ್ನು ಮೇಲಕ್ಕೆ ಹಾರಿಸಿ ಕುಣಿದಾಡಿಬಿಟ್ಟರಂತೆ. ವಾಟ್ಸನ್ ಸ್ವಭಾವತಃ ಮುಂಗೋಪಿಗಳು. ಹಾಗೆಯೇ ಸಂತೋಷವಾದಾಗ ಅದನ್ನು ವಿಶೇಷತಃ ಪ್ರದರ್ಶಿಸುತ್ತಿದ್ದವರು. ವಿದ್ಯಾರ್ಥಿಗಳಲ್ಲಿ ಅವರಿಗೆ ವಿಶೇಷ ಪ್ರೇಮ. ಆಚಾರ್ಯರಿಗಿಂತ ಒಂದು ವರ್ಷ ಮೇಲಿನ ತರಗತಿಯಲ್ಲಿದ್ದ ಮೋಕ್ಷಗೊಂಡಂ ವಿಶ್ವೇಶ್ವರಯ್ಯ ಅವರ ಅತ್ಯಂತ ಪ್ರಿಯವಿದ್ಯಾರ್ಥಿ. ಬಾಬಾ ಅವರು ಆಚಾರ್ಯರಿಗೆ ತರ್ಕಶಾಸ್ತ್ರ ಮತ್ತು ನೀತಿಶಾಸ್ತ್ರಗಳನ್ನು ಕಲಿಸುತ್ತಿದ್ದರು. ಯಾವಾಗಲೂ ಬಹು ಚುರುಕಾಗಿದ್ದ 'ಹೊಗೆಸೊಪ್ಪಿನ ರಾಮಸ್ವಾಮಿ' ಮತ್ತು ಬಹು ಸ್ಥೂಲಕಾಯರೂ ನೇತ್ರ ಹಸ್ತರೂ ಆದ ನಾರಾಯಣರಾಯರೂ ಅವರ ಇತರ ಉಪಾಧ್ಯಾಯರುಗಳು. ಆಚಾರ್ಯರು ಗಣಿತದಲ್ಲಿ ಬಿ.ಎ. ಪದವೀಧರರಾಗುವ ವೇಳೆಗೆ ವಾಟ್ಸನ್ ಕಾಲೇಜನ್ನು ಬಿಟ್ಟಿದ್ದರಿಂದ ಅವರ ಉತ್ತರಾಧಿಕಾರಿಗಳಾದ ಕುಕ್ಸ್‌ರವರಿಂದ ಆಚಾರ್ಯರು ತಮ್ಮ ಪಾರಿತೋಷಕಗಳನ್ನೆಲ್ಲ ಸ್ವೀಕರಿಸಿದರು. ಶಾಲೆಯನ್ನು ಬಿಡುವಾಗ ಉಪಾಧ್ಯಕ್ಷರಾಗಿದ್ದ ಬಾಬಾ ಅವರು ಇವರನ್ನು ಕುರಿತು 'ಈತನು ಪ್ರತಿಯೊಂದು ತರಗತಿಯಲ್ಲಿಯೂ ವಿದ್ಯಾರ್ಥಿವೇತನವನ್ನೂ ಬಹುಮಾನಗಳನ್ನೂ ಗಳಿಸಿದ್ದಾನೆ. ಈತನ ವಿದ್ಯಾರ್ಥಿಜೀವನ ಬಹು ಉಪಯುಕ್ತವಾಗಿದೆ. ಈತ ಬಹು ಪ್ರಾಮಾಣಿಕ ಮತ್ತು ಶ್ರದ್ಧಾಳು' ಎಂದೂ ವಾಟ್ಸನ್ ಅವರು 'ಈತ ಎಫ್.ಎ. ಪರೀಕ್ಷೆಯ ಕಲಾಭಾಗದಲ್ಲಿ ಪ್ರಥಮಸ್ಥಾನವನ್ನು ಬಿ.ಎ. ಪರೀಕ್ಷೆಯಲ್ಲಿ ಅನೇಕ ಪಾರಿತೋಷಕಗಳನ್ನು ಸಂಪಾದಿಸಿದ್ದಾನೆ. ಉತ್ತಮ ಇಂಗ್ಲೀಷ್ ಪಂಡಿತ' ಎಂದೂ ಪ್ರಶಂಸಿಸಿದ್ದಾರೆ.

ಆಚಾರ್ಯರು ಉಪಾಧ್ಯಾಯರಾಗಿ

ಪದವೀಧರರಾದನಂತರ ಆಚಾರ್ಯರು ಮೈಸೂರು ದೇಶದ ವಿವಿಧ ಶಾಲೆಗಳಲ್ಲಿ ಉಪಾಧ್ಯಾಯರಾಗಿದ್ದರು. ಮೊದಲು ನಾಲ್ಕು ವರ್ಷಗಳ ಕಾಲ ಅವರು ಚಿಕ್ಕಮಗಳೂರಿನ ಪ್ರೌಢಶಾಲೆಯಲ್ಲಿ ಪ್ರಥಮ ಸಹಾಯಕ ಉಪಾಧ್ಯಾಯರಾಗಿದ್ದರು. ಅಲ್ಲಿಂದ ಬಿಟ್ಟು ಬರುವಾಗ ಅಲ್ಲಿಯ ಮುಖ್ಯೋಪಾಧ್ಯಾಯರಾಗಿದ್ದ ಸಾಮ್ಯುಯಲ್ ಕ್ರಿಸ್ ಅವರು ಇವರನ್ನು ಕುರಿತು 'ಆರ್ ನರಸಿಂಹಾಚಾರ್ಯರು ಸಂಪೂರ್ಣ ತೃಪ್ತಿಕರವಾಗಿ ಕರ್ತವ್ಯನಿರ್ವಹಣೆ ಮಾಡುತ್ತಾರೆ ಎಂದು ತಿಳಿಸಲು ವಿಶೇಷ ಸಂತೋಷಿಸುತ್ತೇನೆ. ಅವರ ಅಭಿವೃದ್ಧಿಗೆ ಅಡ್ಡಿಯಾಗಿ ಬರಲು ನನಗೆ ದುಃಖವಾಗುತ್ತದೆ. ಅವರು ಬಹು ಶ್ರಮಪಟ್ಟು ಕೆಲಸಮಾಡುವವರು. ತಮ್ಮ ಕೆಲಸದಲ್ಲಿ ವಿಶೇಷ ಆಸಕ್ತಿಯುಳ್ಳವರು. ಅವರ ಹಾಜರಿ ಯಾವಾಗಲೂ ಬಹು ಕ್ರಮಬದ್ಧವಾಗಿದ್ದುದರಿಂದ ಅವರು ತಮ್ಮ ವಿದ್ಯಾರ್ಥಿಗಳ ಮುಂದೆ ಉತ್ತಮ ಆದರ್ಶವನ್ನು ಇಟ್ಟಿದ್ದಾರೆ' ಎಂದು ಪ್ರಶಂಸಿಸಿದರು.

ಮುಂದೆ ಇವರು ಮೈಸೂರಿನ ಮಹಾರಾಜ ಮತ್ತು ಮಹಾರಾಣಿಯವರ ಕಾಲೇಜುಗಳಲ್ಲಿ ಕೆಲಸ ಮಾಡಿದರು. ಮಹಾರಾಜಾ ಕಾಲೇಜಿನ ಮುಖ್ಯೋಪಾಧ್ಯಾಯರಾಗಿದ್ದ ಹೆಚ್. ಜೆ. ಭಾಭಾ ಅವರು ಆಚಾರ್ಯರನ್ನು ಕುರಿತು 'ಇವರು ವಿಶೇಷ ಪರಿಶ್ರಮಿ; ಶ್ರಮಶೀಲ ಮತ್ತು ನಿಷ್ಕೃಷ್ಟವಾದ ಪಠನಶಕ್ತಿಯುಳ್ಳವರು. ಅವರ ಶಿಕ್ಷಣದಲ್ಲಿ ತರಗತಿಯು ಬಹುಮಟ್ಟಿನ ಅಭಿವೃದ್ಧಿಗೆ ಬಂದಿದೆ. ಅವರಿಗೆ ಕನ್ನಡ ಸಂಸ್ಕೃತಗಳಲ್ಲಿ ಪಾಂಡಿತ್ಯವಿದೆ ಎಂದು ಕೊಂಡಾಡಿದರು. ಇದೇ ಅಭಿಪ್ರಾಯವನ್ನೇ ಪುಷ್ಟೀಕರಿಸಿದರು ಮಹಾರಾಣಿಯವರ ಕಾಲೇಜಿನ ಅಧಿಕಾರಿಗಳಾಗಿದ್ದ ಎ. ನರಸಿಂಹಯ್ಯಂಗಾರ್ಯರು. ಶಿವಮೊಗ್ಗ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಕಿಂಗ್ ಅವರಿಗೆ ಆಚಾರ್ಯರಲ್ಲಿ ವಿಶೇಷ ಮೆಚ್ಚಿಗೆ. ಅವರು ಇವರನ್ನು ಕುರಿತು 'ನಮ್ಮ ಪ್ರಧಾನ ಸಹಾಯಕೋಪಾಧ್ಯಾಯರಾದ ಆರ್ ನರಸಿಂಹಾಚಾರ್ಯರು ತಮ್ಮ ಸಹೋಪಾಧ್ಯಾಯರುಗಳಿಂದಲೂ ವಿದ್ಯಾರ್ಥಿವೃಂದದಿಂದಲೂ ವಿಶೇಷ ಗೌರವಿಸಲ್ಪಟ್ಟಿದ್ದಾರೆಂದು ತಿಳಿಸಲು ಬಹು ಸಂತೋಷಪಡುತ್ತೇನೆ. ಅವರು ನಮ್ಮೊಡನಿದ್ದ ಕಾಲದಲ್ಲಿ ತಮ್ಮ ಕಾರ್ಯ ನಿರ್ವಹಣೆಯಲ್ಲಿ ಸಂಪೂರ್ಣ

ಶ್ರದ್ಧೆ, ಸಂತೋಷ ಮತ್ತು ಪರಿಪೂರ್ಣತೆಯನ್ನು ಪ್ರದರ್ಶಿಸಿದ್ದಾರೆ.

ಅವರಿಗಿದ್ದ ಕನ್ನಡ ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಗಳ ವಿಶೇಷಜ್ಞಾನದಿಂದ ಅವರು ಭಾಷಾಂತರ ಶಾಖೆಯಲ್ಲಿ ಅಮೌಲ್ಯವಾದ ಸಹಾಯಕರಾಗಿದ್ದರು. ಅವರು ಯಾವಾಗಲೂ ಹಸನ್ಮುಖಿಗಳೂ ಶಾಂತಚಿತ್ತರೂ ಆಡಂಬರರಹಿತರೂ ವಿಶೇಷ ಗೌರವಯುತರೂ ಸಹನಶೀಲರೂ ವಿದ್ವಾಂಸರೂ ಆಗಿ ತಾವು ಸಂಬಂಧಪಡೆದ ಎಲ್ಲ ವ್ಯಕ್ತಿಗಳಿಂದಲೂ ಗೌರವಿಸಲ್ಪಟ್ಟಿದ್ದಾರೆ ಎಂದು ಮುಕ್ತಕಂಠದಿಂದ ಹೊಗಳಿದರು.

ಆಚಾರ್ಯರ ಸಂಸ್ಕೃತ ಜ್ಞಾನದ ವಿಷಯವಾಗಿ ಮೈಸೂರಿನ ಸದ್ವಿದ್ಯಾಶಾಲಾಧ್ಯಕ್ಷರಾದ ಪೆರಿಯ ಸ್ವಾಮಿ ತಿರುಮಲಾಚಾರ್ಯರು ಈ ರೀತಿ ನಿರೂಪಿಸಿದ್ದಾರೆ. 'ಅಯಂ ಶ್ರೀ ನರಸಿಂಹಾಚಾರ್ಯಃ ಆಬಾಲ್ಯಾದಧೀತಸಂಸ್ಕೃತವಿದ್ಯಃ ಕಾವ್ಯನಾಟಕಾದಿಷು ವ್ಯುತ್ಪನ್ನಃ ಸಂಸ್ಕೃತ ಭಾಷಯಾ ಪತ್ರಿಕಾಲೇಖನೇ, ಪರಿವರ್ತನೇ, ಕವಿತಾಕರಣೇ ಚ ವಿಚಕ್ಷಣಶ್ಚ ವಿಶೇಷತೋ ಮಯಾ ಪ್ರತ್ಯಕ್ಷೀಕ್ರಿಯತೇ. ಅತೋಽಯಂ ಸಂಸ್ಕೃತ ಭಾಷಾಸಂಬಂಧಿಕಾರ್ಯನಿರ್ವಹಣೇ ನಿಪುಣಃ ಇತಿ ವಿಸ್ರಂಭಾಮಹೇ' ಎಂದಿದ್ದಾರೆ.

ಆಚಾರ್ಯರ ಮಾತೃಭಾಷೆಯೂ ವಿಶೇಷವಾಗಿ ಅಭ್ಯಾಸಮಾಡಿದ ಭಾಷೆಯೂ ತಮಿಳೇ ಆದರೂ ಅವರಿಗೆ ಕನ್ನಡದಲ್ಲಿ ವಿಶೇಷ ಅಭಿಮಾನವಿತ್ತು. ಕನ್ನಡ ನಾಡಿನಲ್ಲಿ ಕನ್ನಡಿಗರೊಡನೆ ಕನ್ನಡ ವಿದ್ಯಾರ್ಥಿಗಳ ಮಧ್ಯದಲ್ಲಿ ಕೆಲಸಮಾಡುತ್ತಿದ್ದಾಗ ಯಥೋಚಿತವಾದ ಕನ್ನಡಸೇವೆಯನ್ನು ಮಾಡುತ್ತಲೇ ಇದ್ದರು. ಉಪಾಧ್ಯಾಯರಾಗಿದ್ದ ಕಾಲದಲ್ಲಿ ಕನ್ನಡ ಭಾಷಾ ಸಾಹಿತ್ಯಗಳ ಜ್ಞಾನವನ್ನು ವಿಶೇಷವಾಗಿ ಬೆಳಸಿಕೊಂಡರು. ತಮ್ಮ ಕಾರ್ಯಕ್ಷೇತ್ರಕ್ಕೆ ಕನ್ನಡದ ವಿಶೇಷವ್ಯಾಸಂಗವು ಅತ್ಯಾವಶ್ಯಕವೆಂದು ತಿಳಿದು ೧೮೯೩ನೆಯ ವರ್ಷದಲ್ಲಿ ಕನ್ನಡವನ್ನು ಪ್ರಧಾನ ಭಾಗವನ್ನಾಗಿಯೂ ತಮಿಳನ್ನು ಸಹಾಯಕ ಭಾಗವನ್ನಾಗಿಯೂ ಆರಿಸಿಕೊಂಡು ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿತ ಭಾಷೆಗಳನ್ನು ತೆಗೆದುಕೊಂಡು ಎಂ. ಎ. ಪರೀಕ್ಷೆಕೊಟ್ಟವರಲ್ಲಿ ಇವರೇ ಮೊದಲಿಗರಾದರು. ಇದನ್ನು ಪರಿಗಣಿಸಿದ ಮೈಸೂರಿನ ದೇವರಾಜಬಹದ್ದೂರ್ ಸಹಾಯಕನಿಧಿಯವರು ಆಚಾರ್ಯರಿಗೆ ಆ ನಿಧಿಯಿಂದ ೩೦೦ ರೂಪಾಯಿಗಳನ್ನು ಪಾರಿತೋಷಕವನ್ನಾಗಿ ಕೊಟ್ಟರು.

ಆಚಾರ್ಯರು ವಿದ್ಯಾಇಲಾಖೆಯಲ್ಲಿ ಭಾಷಾಂತರಕಾರರಾಗಿ

೧೮೮೪ ರಲ್ಲಿ ಆಚಾರ್ಯರು ವಿದ್ಯಾ ಇಲಾಖೆಯಲ್ಲಿ ಭಾಷಾಂತರಕಾರರಾಗಿ ನೇಮಕವಾದರು. ಇಲ್ಲಿಯೂ ಇವರ ಕಾರ್ಯವು ಬಹುಸಮರ್ಪಕವಾಗಿತ್ತೆಂದು ಅವರ ಅಧಿಕಾರಿಗಳು ಕೊಂಡಾಡಿದ್ದಾರೆ. ಅವರು ಮಹಾರಾಣಿಯವರ ಕಾಲೇಜಿನಲ್ಲಿದ್ದಾಗಲೇ 'ನೀತಿವಾಕ್ಯಮಂಜರಿ' ಎಂಬ ಕಿರುಹೊತ್ತಗೆಯನ್ನೂ 'ಶಬ್ದರೂಪಾವಳಿ'ಯ ಸಂಶೋಧಿತ ಮುದ್ರಣವನ್ನೂ 'ಚಂಪೂ ರಾಮಾಯಣ'ದ ಕೆಲವು ಭಾಗಗಳನ್ನೂ ಪ್ರಕಟಿಸಿದ್ದರು. ಸಂಗೀತಶಾಸ್ತ್ರವಿಷಯವಾಗಿ ಹಲವು ಲೇಖನಗಳನ್ನು ರಚಿಸಿ 'ಜ್ಞಾನಬೋಧಿನಿ' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಭಾಷಾಂತರಕಾರರಾದಮೇಲೆ ವಸ್ತುಪಾಠಗಳ ಮೇಲೆ ಎರಡು ಪುಸ್ತಕಗಳನ್ನೂ 'ಬಣ್ಣಗಳೂ ಆಕಾರಗಳೂ' ಎಂಬ ಶಿರೋನಾಮೆಯುಳ್ಳ ಮತ್ತೊಂದು ಪುಸ್ತಕವನ್ನೂ ಎಂಟು ಪಾಠಪುಸ್ತಕಗಳನ್ನೂ ಇಲಾಖೆಗಾಗಿ ರಚಿಸಿಕೊಟ್ಟರು. ವಿದ್ಯಾಇಲಾಖೆಯ ಅನೇಕ ಪ್ರಕಟಣೆಗಳನ್ನು ಸಂಶೋಧಿಸಿ ಪ್ರಕಟಿಸಿದರು.

ಆಚಾರ್ಯರ ಕಾರ್ಯದಕ್ಷತೆಯನ್ನೂ ಪಾಂಡಿತ್ಯವನ್ನೂ ನೋಡಿ ಪ್ರಾಚ್ಯ ವಿದ್ಯಾಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ ರೈಸರು ಅವರನ್ನು ೧೮೯೦ ರಲ್ಲಿ ತಮ್ಮ ಸಹಾಯಾಧಿಕಾರಿಗಳನ್ನಾಗಿ ನೇಮಿಸಿಕೊಂಡರು. ೧೮೯೧ ರಿಂದ ಆಚಾರ್ಯರು ರೈಸರು ಸಂಶೋಧಿಸುತ್ತಿದ್ದ 'ಪಂಪಭಾರತ'ದ ಪರಿಷ್ಕರಣ ಕಾರ್ಯದಲ್ಲಿ ಬಹುಮಟ್ಟಿಗೆ ಸಹಾಯ ಮಾಡಿದರು. ಆ ವಿಷಯದಲ್ಲಿ ರೈಸರು ತಮ್ಮ ೨೨-೮-೯೫ ರ ಪತ್ರದಲ್ಲಿ ನರಸಿಂಹಾಚಾರ್ಯರು ಕರಡು ಪ್ರತಿಗಳನ್ನು ತಿದ್ದುವುದರಲ್ಲಿ ತೋರುತ್ತಿದ್ದ ಪರಿಪೂರ್ಣತೆಗೂ ಆಗಾಗ ಸಂಸ್ಕರಣ ಕಾರ್ಯದಲ್ಲಿ ಅವರು ಕೊಡುತ್ತಿದ್ದ ಸಲಹೆಗಳಿಗಾಗಿಯೂ ವಿಶೇಷ ಪ್ರಶಂಸಿಸಿದ್ದಾರೆ. ಇಲಾಖೆಗೆ ಸೇರಿದ ತಕ್ಷಣ ಎರಡನೆಯ ನಾಗವರ್ಮನ ಶ್ರೇಷ್ಠ ಕೃತಿಯಾದ 'ಕಾವ್ಯಾವಲೋಕನ' ಮತ್ತು 'ಭಾಷಾಭೂಷಣ' ವೆಂಬ ಕನ್ನಡ ಲಕ್ಷಣಗ್ರಂಥಗಳನ್ನು ಸಂಶೋಧಿಸುವುದೂ ರೈಸರಿಗೆ ತಮಿಳು ಶಾಸನಗಳನ್ನು ಅಧ್ಯಯನ ಮಾಡುವುದರಲ್ಲಿ ಸಹಾಯ ಮಾಡುವುದೂ ಆಚಾರ್ಯರ ಕೆಲಸವಾಯಿತು. 'ತಮಿಳು ಶಾಸನಗಳು' ಎಪಿಗ್ರಾಫಿಯಾ ಕರ್ನಾ

ಟೀಕೆಯ ಭಾಗವಾಗಿ ಪ್ರಕಟವಾಯಿತು. ಈ ಭಾಗದಲ್ಲಿ ಆಚಾರ್ಯರಿಂದ ತಮಗೆ ವಿಶೇಷ ಸಹಾಯವಾಯಿತೆಂದೂ ಅವರ ಸಹಾಯವಿಲ್ಲದಿದ್ದರೆ ಅನೇಕ ಅಪದ್ಧಗಳಾಗುತ್ತಿದ್ದುವೆಂದೂ ರೈಸರೇ ತಿಳಿಸಿದ್ದಾರೆ. 'ಕಾವ್ಯಾವಲೋಕನ' 'ಭಾಷಾಭೂಷಣ'ಗಳು ಸುಸಂಪಾದಿತವಾಗಿ ಬಹುದೀರ್ಘವೂ ಪಾಂಡಿತ್ಯಪೂರ್ಣವೂ ಆದ ಪ್ರಸ್ತಾವನೆಯೊಡನೆ ೧೯೦೩ ರಲ್ಲಿ ಪ್ರಕಟವಾದುವು. ಉಪೋದ್ಘಾತ ರೂಪವಾಗಿರುವ ಪ್ರಬಂಧವು ಆಚಾರ್ಯರ ವಿದ್ವತ್ತಿನ ಮಟ್ಟವನ್ನೂ ಸಂಶೋಧನಾ ಪ್ರತಿಭೆಯನ್ನೂ ವಿಶದಪಡಿಸುತ್ತದೆ. ಅಲ್ಲಿ ರೈಸರು ತಮ್ಮ ಕರ್ಣಾಟಕ ಶಿಲಾಶಾಸನಗಳನ್ನು ಪ್ರಾಚ್ಯವಿದ್ಯಾ ಸಂಶೋಧನಾಲಯದ ಎಸ್. ಜಿ. ನರಸಿಂಹಾಚಾರ್ಯರ ಸಹಾಯದಿಂದ ಸಿದ್ಧಪಡಿಸುತ್ತಿದ್ದೇನೆಂದು ಘಂಟಾಘೋಷವಾಗಿ ಘೋಷಿಸಿ ತಮ್ಮ ನಿಷ್ಪಕ್ಷಪಾತ ಮನೋಭಾವವನ್ನು ವಿಶದಗೊಳಿಸಿದ್ದಾರೆ. ಈ ಗ್ರಂಥವನ್ನು ಕುರಿತು ರೈಸರು 'ಇವರು ಗ್ರಂಥವನ್ನು ಬಹುತೃಪ್ತಿಕರವಾಗಿ ಮುಗಿಸಿದ್ದಾರೆ' ಎಂದೂ, ರಾವ್ ಬಹದ್ದೂರ್ ಎಸ್. ಮಂಗೇಶ ರಾಯರು 'ನಾನು ಗ್ರಂಥದ ಕೆಲವು ಭಾಗಗಳನ್ನೂ ಅವತರಣಿಕೆಯನ್ನೂ ಅವಲೋಕಿಸಿದ್ದೇನೆ. ಇವು ಮತ್ತಾವ ಕನ್ನಡ ಗ್ರಂಥಗಳ ಸಂಶೋಧನೆಯಲ್ಲಿಯೂ ಕಾಣಬಾರದ ವಿದ್ವತ್ತನ್ನೂ ಸಂಶೋಧನೆಯನ್ನೂ ಪ್ರದರ್ಶಿಸುತ್ತವೆ. ಕಾಲನಿರ್ಣಯದಲ್ಲಿ, ಆಕರಗಳನ್ನು ನಿಶ್ಚಯಿಸುವುದರಲ್ಲಿ, ಸರಿಯಾದ ಪಾಠಗಳ ನಿರ್ಣಯದಲ್ಲಿ, ಅನುಬಂಧಗಳನ್ನು ಸಿದ್ಧಪಡಿಸುವುದರಲ್ಲಿ, ಉಪಯುಕ್ತವಾಗಿರುವ ಶ್ರಮವು ಅದ್ಭುತವಾಗಿದೆ' ಎಂದೂ ಹೆಚ್. ನಾರಾಯಣರಾಯರು 'ಈ ಗ್ರಂಥದ ಪ್ರತಿಪುಟದಲ್ಲಿಯೂ ಕಂಡು ಬರುವ ಅಗಾಧಪಾಂಡಿತ್ಯವನ್ನೂ ಸಂಶೋಧನೆಯ ಸಂಪೂರ್ಣತೆಯನ್ನೂ ನೋಡಿ ನಾನು ಮೂಕನಾಗಿದ್ದೇನೆ' ಎಂದೂ ಪ್ರಶಂಸಿಸಿದರು.

ಪ್ರಾಚ್ಯ ಸಂಶೋಧನಾಲಯದಲ್ಲಿ ಆಚಾರ್ಯರ ಕಾರ್ಯವೈಭವ

೧೯೦೬ ನೆಯ ವರ್ಷದಲ್ಲಿ ಆಚಾರ್ಯರು ಆ ಇಲಾಖೆಯ ಮುಖ್ಯಾಧಿಕಾರಿಗಳಾಗಿ ೧೯೨೨ ರಲ್ಲಿ ತಮ್ಮ ಕೆಲಸದಿಂದ ವಿಶ್ರಾಂತರಾದರು. ಹೀಗೆ ಸುಮಾರು ಅರ್ಧಶತಮಾನಕಾಲ ತಮ್ಮ ಕ್ಷೇತ್ರದಲ್ಲಿ ಬಹುಸ್ತುತ್ಯಸೇವೆ ಸಲ್ಲಿಸಿ ಕರ್ನಾಟಕ ವಾಸ್ತುಶಿಲ್ಪಗಳ ಪರಿಶೀಲನೆ, ಕನ್ನಡ ಗ್ರಂಥಸಂಸ್ಕರಣ, ಶಾಸನಸಂಗ್ರಹ ಮೊದಲಾದ ಕಾರ್ಯಗಳಲ್ಲಿ ವಿಶೇಷ ಕೃತಕೃತ್ಯರಾಗಿ 'ಎಪಿಗ್ರಾಫಿಯ ಕರ್ನಾಟಿಕದ' ಸಂಪುಟಗಳನ್ನು ಪ್ರಾರಂಭಿಸಿ ಬಹುದೂರ ಸಾಗಿದ್ದರು. ಈ ಕಾರ್ಯವನ್ನು ಆಚಾರ್ಯರು ಯಶಸ್ವಿಯಾಗಿ ಮುಂದುವರಿಸಿ ಬಹು ಶ್ಲಾಘ್ಯವಾದ ಸಾಧನೆಯನ್ನು ಗಳಿಸಿದರು. ತಮ್ಮ ೧೬ ವರ್ಷಗಳ ಅಧಿಕಾರಾವಧಿಯಲ್ಲಿ ತಾವು ನಡೆಸಿದ ಕಾರ್ಯವನ್ನು ಸಂಗ್ರಹವಾಗಿ ಅವರೇ ತಮ್ಮ ೧೯೨೨ ನೆಯ ವರ್ಷದ ವರದಿಯ ಕೊನೆಯಲ್ಲಿ ಕೊಟ್ಟಿದ್ದಾರೆ. ಅವರ ನೇತೃತ್ವದಲ್ಲಿ ಈ ಕಾಲದಲ್ಲಿ ಸುಮಾರು ೫೦೦೦ ಹೊಸ ಶಾಸನಗಳು ಕಂಡು ಹಿಡಿಯಲ್ಪಟ್ಟವು. ಹಿಂದೂ, ಜೈನ ಮತ್ತು ಮಹಮ್ಮದೀಯರಿಗೆ ಸಂಬಂಧಪಟ್ಟ ಸುಮಾರು ೧೦೦೦ ಕಟ್ಟಡಗಳು ಪರೀಕ್ಷಿಸಲ್ಪಟ್ಟವು. ೪೧೦೦ ನಾಣ್ಯಗಳು ಸಂಶೋಧಿತವಾದುವು. ೧೫೫೦ ಛಾಯಾಚಿತ್ರಗಳೂ ೧೫೦ ನಕ್ಷೆಗಳೂ ತಯಾರಿಸಲ್ಪಟ್ಟವು. ೧೫೫ ಪ್ರಾಚೀನ ಕನ್ನಡ ಸಂಸ್ಕೃತ ಗ್ರಂಥಗಳನ್ನೊಳಗೊಂಡ ೧೦೦ ಸಂಪುಟಗಳು ಪ್ರತಿಮಾಡಲ್ಪಟ್ಟು ಪ್ರಾಚ್ಯಕೋಶಾಗಾರಕ್ಕೆ ಕಳುಹಿಸಲ್ಪಟ್ಟವು. 'ಎಪಿಗ್ರಾಫಿಯಾ ಕರ್ನಾಟಿಕ'ದ ವಿಸ್ತಾರವಾದ ಅಕಾರಾದಿಯೂ ಇಲಾಖಾ ವರದಿಗಳ ಅಕಾರಾದಿಯೂ ಐತಿಹಾಸಿಕ ಮತ್ತು ಸಾಹಿತ್ಯಕ ಪ್ರಾಮುಖ್ಯವನ್ನುಳ್ಳ 'ಶಾಸನಗಳ ಸಂಗ್ರಹ'ವೂ ಸಿದ್ಧವಾದುವು. 'ಶ್ರವಣ ಬೆಳುಗೊಳದ ಶಾಸನ'ಗಳ ಸಂಶೋಧಿತ ಪುನರ್ಮುದ್ರಣವು ಪ್ರಕಟವಾಯಿತು. ಸೋಮನಾಥಪುರದ ಕೇಶವ, ಬೇಲೂರಿನ ಚೆನ್ನಕೇಶವ, ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮೀ ದೇವಾಲಯಗಳ ಶಿಲ್ಪಗಳನ್ನು ಸಂಬಂಧಪಡುವ ಕೈಪಿಡಿಗಳು ಪ್ರಕಾಶಿತವಾದುವು. ಸುಪ್ರಸಿದ್ಧವಾದ ಭಟ್ಟಾಕಳಂಕನ 'ಶಬ್ದಾನುಶಾಸನ'ವೆಂಬ ಬೃಹತ್ಕೃತಿಯ ಸಂಶೋಧಿತ ಪುನರ್ಮುದ್ರಣವೂ ಹಳೆಬೀಡು ಮತ್ತು ಅದರ ದೇವಾಲಯಗಳ ವಿಷಯವಾಗಿ

ಪಟೇಲ್ ಶಿವನಂಜೇಗೌಡರಿಂದ ರಚಿತವಾದ ಕನ್ನಡ ಕೃತಿಯೂ ಪ್ರಕಟವಾದುವು. ಮೈಸೂರು 'ಗೆಜೆಟಿಯರ್'ಗಾಗಿ 'ಕನ್ನಡ ಭಾಷಾಸಾಹಿತ್ಯ' ಮತ್ತು ಮೈಸೂರಿನ ಶಾಸನಗಳು ಮತ್ತು ವಾಸ್ತು ಶಿಲ್ಪಗಳನ್ನು ಕುರಿತ ಲೇಖನವು ರಚಿತವಾಯಿತು. ಇಂಪೀರಿಯಲ್ ಗೆಜೆಟಿಯರ್‌ಗಾಗಿ ಮೈಸೂರು ಮತ್ತು ಕೊಡಗಿಗೆ ಸಂಬಂಧಪಟ್ಟ ಲೇಖನವು ಮದರಾಸ್ ಗೌರ್ನಮೆಂಟ್ ಪ್ರೆಸ್ ಮೂಲಕ ಅಚ್ಚಾಯಿತು. ಮಹಾರಾಜರವರ ಕಾರ್ಯದರ್ಶಿಗಳಿಂದಲೂ ವಿದ್ಯಾ ಇಲಾಖೆಯಿಂದಲೂ ಕಳುಹಿಸಲ್ಪಟ್ಟ ಸುಮಾರು ೨೫೦ ಗ್ರಂಥಗಳು ವಿಮರ್ಶಿತವಾದುವು. ಚಿತ್ರದುರ್ಗ (ಚಂದ್ರವಳ್ಳಿ) ತಲಕಾಡು ಮತ್ತು ಹಳೇಬೀಡುಗಳಲ್ಲಿ ಭೂಶೋಧನೆಗಳು ನಡೆದುವು, ಮಡಕೆಯ ಚೂರು ಮತ್ತು ಪ್ರಾಚೀನ ವಸ್ತುಗಳು ಸಂಗ್ರಹೀತವಾದುವು.

ಹೊಸದಾಗಿ ಕಂಡುಹಿಡಿದ ಶಾಸನಗಳು ಕದಂಬರು, ರಾಷ್ಟ್ರಕೂಟರು, ಚಾಳುಕ್ಯರು, ಚೋಳರು, ಸಂತಾರರು, ಕೊಂಗಾಳ್ವರು, ಚಂಗಾಳ್ವರು, ಪುನ್ನಾಡು, ವಿಜಯನಗರ ಮತ್ತು ಮೈಸೂರರಸುಗಳು, ಅನತಿ, ಬೇಲೂರು, ಹದಿನಾಡು, ಹೊಳೆನರಸೀಪುರ, ಹುಲಿಕಲ್, ಕುಗಟೂರು, ಉಮ್ಮತ್ತೂರ್ ನಾಯಕರು ಇವರುಗಳ ವಿಷಯವಾಗಿ ಇದುವರೆಗೆ ತಿಳಿಯದಿದ್ದ ಅನೇಕ ವಿಚಾರಗಳನ್ನು ಬೆಳಕಿಗೆ ತಂದಿವೆ. ಇವುಗಳಿಂದ ಇಲ್ಲಿಯವರೆಗೆ ಬಹು ಅನಿರ್ದಿಷ್ಟವಾಗಿದ್ದ ಗಂಗರ ಇತಿಹಾಸವನ್ನು ಸ್ಪಷ್ಟವಾಗಿ ನಿರ್ಣಯಿಸಲು ಸಾಧ್ಯವಾಗಿದೆ. ಈ ಶಾಖೆಯಲ್ಲಿ ಇಲಾಖೆಯಿಂದ ನಡೆದ ಕಾರ್ಯವನ್ನು ಕುರಿತು ಅನೇಕ ವಿದ್ವಾಂಸರು ವಿಶೇಷವಾಗಿ ಶ್ಲಾಘಿಸಿದ್ದಾರೆ. ಅವರಲ್ಲೊಬ್ಬ ಇಂಗ್ಲೀಷ್ ಪಂಡಿತರು 'ಗಂಗವಂಶದ ವಿಷಯವಾಗಿ ಮೈಸೂರು ಪುರಾತತ್ವ ಇಲಾಖೆಯಿಂದ ನಡೆದ ಸಂಶೋಧನೆಗಳು ಚಿರಸ್ಮರಣೀಯವಾಗಿರುತ್ತವೆ' ಎಂದಿದ್ದಾರೆ. ಹೊಸದಾಗಿ ಕಂಡುಹಿಡಿದ ಶಾಸನಗಳಲ್ಲಿ ೩೫೦ ಶಾಸನಗಳು ಶ್ರವಣ ಬೆಳಗೊಳದ ಸಂಪುಟದಲ್ಲಿ ಅಡಕವಾಗಿವೆ. ಉಳಿದುವುಗಳು ಮೈಸೂರು, ತುಮಕೂರು, ಹಾಸನ, ಬೆಂಗಳೂರು, ಕೋಲಾರ ಸಂಪುಟಗಳ ಅನುಬಂಧಗಳಾಗಿ ಪ್ರಕಟವಾಗಲು ಸಿದ್ಧವಾದುವು. ಮೈಸೂರು, ಹಾಸನ ಅನುಬಂಧಗಳ ಕನ್ನಡ ಭಾಗವು ಸಿದ್ಧವಾಗಿ ಸಂಶೋಧಿತವಾಗಿ ಪ್ರಕಟಣೆಗೆ ಅಣಿಮಾಡಲ್ಪಟ್ಟವು. ಬೆಂಗಳೂರು, ತುಮಕೂರು ಅನುಬಂಧಗಳು ಮುದ್ರಣಾಲಯಕ್ಕೆ ಕಳುಹಿಸಲ್ಪಟ್ಟವು. ಕೋಲಾರದ ಅನುಬಂಧವು ಮುದ್ರಣಕ್ಕೆ ಸಿದ್ಧವಾಯಿತು. ಇವೆಲ್ಲವೂ ಮುಂದೆ ಡಾ. ಆರ್. ಶಾಮಶಾಸ್ತ್ರಿಗಳಿಂದಲೂ ಡಾ. ಎಂ. ಎಚ್. ಕೃಷ್ಣ ಅವ

ರಿಂದಲೂ ಸಮುದ್ರಿತವಾಗಿ ಪ್ರಕಟವಾಗಿವೆ.

ಅದುವರೆಗೆ ಪರಿಚಿತವಾಗಿಲ್ಲದ ದ್ರಾವಿಡ ಮತ್ತು ಹೊಯ್ಸಳ ರೀತಿಯ ಶಿಲ್ಪಗಳನ್ನು ಪ್ರದರ್ಶಿಸುವ ಅನೇಕ ದೇವಾಲಯಗಳು ಸಚಿತ್ರವಾಗಿ ವಿವೃತವಾಗಿವೆ. ಪ್ರತ್ಯೇಕ ಕಲಾಕೃತಿಗಳು, ಕೃತಿಕಾರರ ನಾಮಾಂಕಿತವಾದ ವಿಗ್ರಹಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ನಾಗರಕಲ್ಲುಗಳು ಮೊತ್ತಮೊದಲನೆಯ ಸಲ ಪ್ರಕಟಿತವಾಗಿವೆ. ಇವುಗಳಿಂದ ಆಕರ್ಷಿತರಾದ ಪೌರಾತ್ಯ ಪಾಶ್ಚಾತ್ಯ ಕಲಾವಿದರು ಹೊಯ್ಸಳರ ವಾಸ್ತುಶಿಲ್ಪದಲ್ಲಿ ಹೆಚ್ಚು ಆಸಕ್ತರಾದುದಲ್ಲದೆ ಅದರ ಮೇಲ್ಮೆಯ ವಿಷಯದಲ್ಲಿ ಮುಗ್ಧರಾಗಿದ್ದಾರೆ. ವಿನ್ಸೆಂಟ್. ಎ. ಸ್ಮಿತ್ ಎಂಬ ಪ್ರಖ್ಯಾತ ವಿದ್ವಾಂಸನು ೧೯೧೫ ನೆಯ ವರ್ಷದ ಇಂಡಿಯನ್ ಆಂಟಿಕ್ವೆರಿ ಪತ್ರಿಕೆಯಲ್ಲಿ ನರಸಿಂಹಾಚಾರ್ಯರ ವಿಷಯದಲ್ಲಿ ಹೀಗೆಂದಿದ್ದಾನೆ. 'ನರಸಿಂಹಾಚಾರ್ಯರ ಪರಿಷ್ಕೃತೋದಾಹರಣೆಗಳಿಂದ ಕೂಡಿದ ವರದಿಗಳು ಹೊಯ್ಸಳ ದೇವಾಲಯಗಳ ವಾಸ್ತುಶಿಲ್ಪದ ವಿವರಣೆಗೆ ಸಂಬಂಧಪಟ್ಟಹಾಗೆ ಅತ್ಯಂತ ನವೀನವಾದ ಆಸಾರ ವಿಷಯಗಳನ್ನು ಒದಗಿಸುತ್ತವೆ. ನನ್ನ 'ಇಂಡಿಯ ಮತ್ತು ಸಿಂಹಳ ದ್ವೀಪದ ಲಲಿತಕಲೆಗಳ ಇತಿಹಾಸ' ಎಂಬ ಪುಸ್ತಕದ ೫೧೫-೫೨೬ನೆಯ ಪುಟಗಳಲ್ಲಿ ದೇವಾಲಯಗಳನ್ನು ಅಲಂಕರಿಸುವ ಪ್ರತ್ಯೇಕ ಮೂರ್ತಿಗಳು ಕಲಾವಿದರ ನಾಮಾಂಕಿತವಾಗಿವೆ' ಎಂಬ ಆಕರ್ಷಕ ವಿಷಯವು ಸೂಚಿತವಾಗಿದೆ. ಆದರೆ ಆ ಕಾಲದಲ್ಲಿ ಇಂತಹ ಮೂರ್ತಿಗಳ ಉದಾಹರಣೆಗಳು ಉಪಲಬ್ಧವಾಗಿರಲಿಲ್ಲ. ಅಲ್ಲದೆ ಇಷ್ಟು ವಿಸ್ತಾರವಾಗಿ ಕೆತ್ತನೆಯ ಕೆಲಸಗಳನ್ನು ನಿರ್ಮಿಸಿದ ಕಲಾವಿದರು ಪ್ರತ್ಯೇಕ ಮೂರ್ತಿಶಿಲ್ಪಗಳಿಗಿಂತಲೂ ಬಹು ಉತ್ಕೃಷ್ಟ ವರ್ಗದ ಸಂಕೀರ್ಣಶಿಲ್ಪಗಳಿಂದ ಅದರ ವೈಭವದ ಸರ್ವೋತ್ಕೃಷ್ಟ ಪ್ರಮಾಣವನ್ನು ಪ್ರದರ್ಶನ ಮಾಡಲು ಯತ್ನಿಸಿದ್ದರೆಂದೂ ಹೇಳಿದ್ದೇನೆ. ಆದರೂ ಸಹಜವಾಗಿರುವಂತೆಯೇ ಇರುವ ಅನೇಕಂತಹ ಪ್ರತ್ಯೇಕ ಶಿಲ್ಪಗಳು ವಿಶದವಾದ ವೈಯಕ್ತಿಕ ಪರೀಕ್ಷೆಗೆ ಯೋಗ್ಯವಾಗಿವೆ. ನರಸಿಂಹಾಚಾರ್ಯರು ಈಗ ಕೃತಿಕಾರರ ಹೆಸರುಗಳಿಂದ ಕೂಡಿದ ಅನೇಕ ವಿಗ್ರಹಗಳನ್ನು ಪ್ರಕಟಿಸಿದ್ದಾರೆ. ಈಗ ದೊರೆತಿರುವ ಸಂಪೂರ್ಣ ಜ್ಞಾನದಿಂದ ೧೯೧೧ರಲ್ಲಿ ಮಾಡಿರುವ ಟೀಕೆಗಳು ಅಸಮರ್ಪಕವೂ ಅಸಂಪೂರ್ಣವೂ ಆಗುತ್ತದೆ. ಆದುದರಿಂದ ನನ್ನ ಪುಸ್ತಕದ ಪುನರಾವೃತ್ತಿಯಾಗುವ ಸಂಭವವಿದ್ದರೆ ಹೊಯ್ಸಳ ಶಿಲ್ಪದ ವಿಷಯಕ್ಕಾಗಿ ಪ್ರತ್ಯೇಕ ಪ್ರಕರಣವನ್ನೇ ಮೀಸಲಿಟ್ಟು ಅವರ ಮೇಲ್ಮೆಯ ವಿಷಯ

ದಲ್ಲಿ ಸೂಕ್ತ ಅಭಿಪ್ರಾಯವನ್ನು ಬರೆಯಬೇಕಾಗುತ್ತದೆ' ಎಂದಿದ್ದಾನೆ. ಒಂದು ಮಾತಿನಲ್ಲಿ ಹೇಳುವುದಾದರೆ ಚಾಳುಕ್ಯಶಿಲ್ಪದ ಅನುವರ್ತಿಯೆಂದು ಭಾವಿಸಲ್ಪಟ್ಟಿದ್ದ ಮೈಸೂರು ಶಿಲ್ಪಕ್ಕೆ 'ಹೊಯ್ಸಳ ಶಿಲ್ಪ'ವೆಂದು ಪ್ರತ್ಯೇಕ ನಾಮಕರಣ ಮಾಡಿ ಅವುಗಳ ವೈಶಿಷ್ಟ್ಯವನ್ನು ಸ್ಪಷ್ಟಪಡಿಸಿದ ಕೀರ್ತಿ ನರಸಿಂಹಾಚಾರ್ಯರಿಗೇ ಸಲ್ಲತಕ್ಕದ್ದು.

ನಾಣ್ಯಶಾಸ್ತ್ರ ವಿಷಯಕವಾಗಿ ನರಸಿಂಹಾಚಾರ್ಯರು ನಡೆಸಿದ ಸಂಶೋಧನೆ ಅಲ್ಪವೇನೂ ಅಲ್ಲ. ಚಂದ್ರವಳ್ಳಿಯ ಭೂಶೋಧನೆಯಲ್ಲಿ ಆಂಧ್ರರ, ರೋಮನ್ನರ ಮತ್ತು ಚೀನೀಯರ ನಾಣ್ಯಗಳೂ ಹಳೆಯಬೀಡಿನಲ್ಲಿ ಹೊಯ್ಸಳರ ನಾಣ್ಯಗಳೂ ಅವರಿಂದ ಸಂಗ್ರಹೀತವಾದುವು. ಆಂಧ್ರರ ನಾಣ್ಯಗಳು ಆಂಧ್ರಭೃತ್ಯ ದೊರೆಗಳಾದ ಮುದಾನಂದ ಮತ್ತು ಚುಟುಕಡಾನಂದರಿಗೂ ಅವರ ಪ್ರತಿನಿಧಿಗಳಿಗೂ ಮಹಾರಠಿಯೆಂದಾದ ಬಿರುದಾಂಕಿತರು ಮತ್ತು ಸ್ವಾಮಿ ಚಕೋರರಿಗೂ ಸಂಬಂಧಪಟ್ಟವು. ರೋಮನ್ ನಾಣ್ಯಗಳಲ್ಲಿ ಬೆಳ್ಳಿಯ ದೀನಾರಗಳು. ಅಗಸ್ಟಸ್ ಚಕ್ರವರ್ತಿಯ ಕಾಲಕ್ಕೆ ಸಂಬಂಧಪಟ್ಟವು. ಚೀನಾ ನಾಣ್ಯಗಳು ಚಕ್ರವರ್ತಿಯಾಗಿದ್ದ ಹನ್-ವಾ-ತಿ ಎಂಬುವನಿಂದ ಪ್ರಚಾರಿತವಾಗಿರಬೇಕು. ಹೊಯ್ಸಳರ ಚಿನ್ನದ ನಾಣ್ಯಗಳು ಇದುವರೆಗೆ ಅಪರಿಚಿತವಾಗಿದ್ದ 'ಹಣಗಳು'. ಚಿತ್ರದುರ್ಗದ ಸಮೀಪದಲ್ಲಿ ನಾಣ್ಯಗಳನ್ನು ಶೋಧನೆಯಿಂದ ಹೊರಗೆ ತೆಗೆದಾಗ ನಾಣ್ಯ ಶಾಸ್ತ್ರದಲ್ಲಿ ಉದ್ದಾಮ ಪಂಡಿತನಾದ ರೆವ. ಹ್ಯಾಸ್ಟನ್ನನು ಆಚಾರ್ಯರಿಗೆ ಈ ರೀತಿ ಪತ್ರ ಬರೆದನು:—'ಮೈಸೂರಿನಲ್ಲಿ ಕಂಡುಬಂದಿದ ರೋಮನ್ನರ ಬೆಳ್ಳಿಯ ನಾಣ್ಯಗಳಲ್ಲಿಯೂ ಆಂಧ್ರರ ಸೀಸದ ನಾಣ್ಯಗಳಲ್ಲಿಯೂ ಹಾಗೆಯೇ ಅಲ್ಲಿ ಸಿಕ್ಕಿದ ಮಡಿಕೆಯ ಚೂರುಗಳಲ್ಲಿಯೂ ನಾನು ವಿಶೇಷ ಆಸಕ್ತನಾಗಿದ್ದೇನೆ. ಕಾಲ ನಿಷ್ಕರ್ಷೆ ಮಾಡುವುದಕ್ಕೆ ಸಹಾಯಕವಾಗಿರುವ ಈ ಸಂಶೋಧನೆ ಐತಿಹಾಸಿಕ ದೃಷ್ಟಿಯಿಂದ ಬಹುಮುಖ್ಯವಾದುದಾಗಿದೆ. ನೀವು ಸ್ಪಷ್ಟಪಡಿಸಿರುವಂತೆ ಈಗ ಸಿಕ್ಕಿರುವ ನಿಮ್ಮ ಹೊಸ ಮಾದರಿಯ ನಾಣ್ಯಗಳ ಆಧಾರದ ಮೇಲೆ ಡಾ. ಪ್ಲೀಟ್ ಅವರು ಮರಾಠಿ ನಾಣ್ಯಗಳ ವಿಷಯವಾಗಿ ಸೂಚಿಸಿರುವ ಕಾಲವನ್ನು ತಿದ್ದಿಕೊಳ್ಳಬೇಕಾಗುತ್ತದೆ. ಹಾಗೆಯೇ ನೀವು ಹೇಳುವ ಹಾಗೆ ನಿಮ್ಮ ರೋಮನ್ ನಾಣ್ಯಗಳು ಇತರ ಎಲ್ಲವುಗಳೊಡನೆಯೇ ಸಿಕ್ಕಿದ್ದ ಪಕ್ಷದಲ್ಲಿ ಅವುಗಳ ಕಾಲದ ವಿಷಯವಾಗಿ ನಾನು ಸಂದೇಹಾಸ್ಪದನೆಂದು ಬಿಟ್ಟಿರುವ ವಿಷಯವನ್ನೂ ಅವು ಸಿದ್ಧಾಂತಪಡಿಸುತ್ತವೆ' ಆಚಾ

ದ್ದರು. ಬೆಂಗಳೂರು ಸರ್ವವಸ್ತುಸಂಗ್ರಹಾಲಯ (Museum) ದಲ್ಲಿದ್ದ ಬೆಳ್ಳಿಯ ನಾಣ್ಯಗಳನ್ನೆಲ್ಲ ಪರೀಕ್ಷಿಸಿದರು. ಅವುಗಳಲ್ಲಿ ಬ್ಯಾಕ್ಟ್ರಿಯ, ಪಾರ್ಸಿ, ಬದನೂರ್, ಸಯೂಪರ್, ದೇಶೀಯ ಸಂಸ್ಥಾನಗಳಾದ ಮೈಸೂರು, ಹೈದರಾಬಾದ್, ಬರೋಡ ಮತ್ತು ಈಸ್ಟ್ ಇಂಡಿಯ ಕಂಪನಿಗಳಿಗೆ ಸಂಬಂಧಪಟ್ಟ ಅನೇಕ ನಾಣ್ಯಗಳಿದ್ದುವು. ತಮ್ಮ ಸಂಶೋಧನಾಲಯದಲ್ಲಿಯೇ ವಿವಿಧ ದೇಶ, ಕಾಲ, ಮನೆತನಗಳಿಗೆ ಸೇರಿದ ಚಿನ್ನ, ಬೆಳ್ಳಿ, ತಾಮ್ರ ಮತ್ತು ಸೀಸದ ನಾಣ್ಯಗಳನ್ನು ಪ್ರದರ್ಶನಮಾಡುವುದಕ್ಕಾಗಿ ಒಂದು ಪ್ರದರ್ಶನಪೆಟ್ಟಿಗೆಯನ್ನು ಇವರು ನಿರ್ಮಿಸಿದ್ದಾರೆ.

ಆಚಾರ್ಯರು ತಮ್ಮ ಅಧಿಕಾರಾವಧಿಯಲ್ಲಿ ಸಾವಿರಾರು ಸಂಸ್ಕೃತ ಮತ್ತು ಕನ್ನಡ ಕೈ ಬರಹದ ಓಲೆಯ ಮತ್ತು ಕಾಗದದ ಪ್ರತಿಗಳನ್ನು ಅವಲೋಕಿಸಿದರು. ಅವುಗಳಲ್ಲಿ ತಿರುವಾಂಕೂರಿನ ಗಣಪತಿಶಾಸ್ತ್ರಿಗಳು ಕಂಡು ಹಿಡಿಯುವುದಕ್ಕಿಂತ ಮೊದಲು ಇವರು ಕಂಡುಹಿಡಿದ ಭಾಸನ 'ಸ್ವಪ್ನವಾಸವದತ್ತ' ಮತ್ತು 'ಪ್ರತಿಜ್ಞಾಯೌಗಂಧರಾಯಣ' ಎಂಬ ನಾಟಕಗಳು ಗಮನಾರ್ಹವಾದುವು. ಪಲ್ಲವನರಸಿಂಹವರ್ಮನ ೨೨ನೆಯ ವರ್ಷವು ಶಕವರ್ಷ ೩೮೦ ಎಂದು ತಿಳಿಸುವ 'ಲೋಕವಿಭಾಗ' ವೆಂಬ ಜೈನಗ್ರಂಥವು ಇತಿಹಾಸ ದೃಷ್ಟಿಯಿಂದ ಗಣ್ಯವಾಗಿದೆ. ರಾಷ್ಟ್ರಕೂಟ ಅಮೋಘವರ್ಷ ಮತ್ತು ಚಾಳುಕ್ಯ ವಿಷ್ಣುವರ್ಧನರ ಸಮಕಾಲೀನನಾದ ಉಗ್ರಾದಿತ್ಯಕೃತ 'ಕಲ್ಯಾಣಕಾರಕ' ವೆಂಬ ವೈದ್ಯಗ್ರಂಥವು ಗಮನೀಯವಾದುದು. ಸಾಯಣಾಚಾರ್ಯರ ತಮ್ಮಂದಿರಾದ ಭೋಗನಾಥ ಮತ್ತು ಇಮ್ಮಡಿ ಸಂಗಮರ ವಿಷಯವನ್ನು ಪ್ರತಿಪಾದಿಸುವ ಸಾಯಣಾಚಾರ್ಯರ 'ಅಲಂಕಾರಸುಧಾನಿಧಿ' ಯು ಆಚಾರ್ಯರಿಂದ ಕಂಡುಹಿಡಿಯಲ್ಪಟ್ಟ ಗ್ರಂಥಗಳಲ್ಲಿ ಸಂಭಾವನೀಯವಾಗಿದೆ.

ಆಚಾರ್ಯರ ಮಿತ್ರವರ್ಗ ಮತ್ತು ಅವರಿಂದ ಆಚಾರ್ಯರ ಗುಣಗಾನ

ಸಂಸ್ಕೃತ, ತಮಿಳು, ಕನ್ನಡ, ಇತಿಹಾಸ, ಕಲೆ, ಮತ್ತು ಇತರ ಪ್ರಾಚೀನ ವಿದ್ಯೆಗಳಲ್ಲಿ ಪೂರ್ಣ ಪಂಡಿತರಾಗಿ ಅನವರತವೂ ಸಂಶೋಧನೆಯಲ್ಲಿಯೇ ನಿರತರಾದ ಆಚಾರ್ಯರ ಮಿತ್ರವರ್ಗ ಬಹು ಗಣ್ಯವಾದುದು. ಮೇಲೆ ಹೇಳಿದ ಎಲ್ಲ ಶಾಖೆಗಳಲ್ಲಿಯೂ ಸಂಶೋಧನೆಯನ್ನು ನಡೆಸುತ್ತಿದ್ದ ಅವರ ಸಮಕಾಲೀನರಾದ ಎಲ್ಲ ದೇಶವಿದೇಶಗಳ ಪ್ರಖ್ಯಾತ ವಿದ್ವಾಂಸರು ಅವರ ಮಿತ್ರರು. ಭಾರತದಲ್ಲಿಯೇ ಅಲ್ಲದೆ ಯೂರೋಪ್, ಅಮೆರಿಕಾದೇಶಗಳ ಅನೇಕ ವಿದ್ವಾಂಸರು ಆಚಾರ್ಯರ ಸಂಬಂಧವನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಪಡೆದಿದ್ದರು. ಪ್ರತ್ಯಕ್ಷ ಸಂಬಂಧವನ್ನು ಪಡೆದವರೆಲ್ಲರನ್ನೂ ಇಲ್ಲಿ ಉಲ್ಲೇಖಿಸಲು ಸಾಧ್ಯವಿಲ್ಲ. ಕೆಲವರನ್ನು ಸೂಚಿಸುವುದಾದರೆ ಸರ್ ಜಾನ್ ಮಾರ್ಷಲ್, ಡಾ. ಜೆ. ಎಫ್. ಫ್ಲೀಟ್ (ಲಂಡನ್), ಡಾ. ವಿನ್ಸೆಂಟ್ ಎ. ಸ್ಮಿತ್ (ಆಕ್ಸ್‌ಫರ್ಡ್), ಡಾ. ಜೆ. ಬರ್ಗೆಸ್ (ಎಡಿನ್‌ಬರೊ) ಸರ್ ರಿಚರ್ಡ್ ಟೆಂಪಲ್ ಬಾರ್ಟ್ (ವರ್ಸೆಸ್ಟರ್), ಆರ್. ಸಿವೆಲ್ (ಲಂಡನ್), ಡಾ. ಇ. ಹುಲ್ಟ್ಜ್ (ಹಲ್ಲೆ), ಡಾ. ಎ. ಎಫ್. ರುಡಾಲ್ಫ್ ಹಾರ್ನೆಲ್ (ಆಕ್ಸ್‌ಫರ್ಡ್), ಪ್ರೊ. ಇ. ಜೆ. ರಾಪ್ಸನ್ (ಕೇಂಬ್ರಿಜ್), ಪ್ರೊ. ಸಿಲ್ವೈನ್ ಲೆವಿ (ಪ್ಯಾರಿಸ್), ಎಲ್. ರೈಸ್ (ಲಂಡನ್), ಡಾ. ಎಫ್. ಡಬ್ಲ್ಯು. ಥಾಮಸ್ (ಲಂಡನ್), ಪ್ರೊ. ಸ್ಟೆನ್ ಕೊನೊ (ಕ್ರಿಸ್ತಿಯಾನಿಯಾ), ಪ್ರೊ. ಹೆಚ್. ಕೆರ್ನ್ (ಉಟ್ರೆಕ್ಟ್), ಡಾ. ಎ. ವೆನಿಸ್ (ಬೆನಾರಸ್), ಪ್ರೊ. ಎ. ಲಕೋಟೆ (ಲಿಯಾನ್ಸ್), ಪ್ರೊ. ಎ. ಎ. ಮೆಕ್ಡೊನಾಲ್ಡ್ (ಆಕ್ಸ್‌ಫರ್ಡ್), ಡಾ. ಎಲ್. ಡಿ. ಬಾರ್ನೆಟ್ (ಲಂಡನ್), ಇ. ಬಿ. ಹ್ಯಾವೆಲ್ (ಡನಿಸ್ಫರ್ಡ್), ಸರ್. ಜಾರ್ಜ್ ಗ್ರಿಯರ್ಸನ್ (ಸರ್ರೆ), ಪ್ರೊ. ಜೆ. ಎಫ್. ವೊಗೆಲ್ (ಲೀಡನ್), ಸರ್. ಸಿ. ಹರ್ಕ್ಯುಲಿಸ್ ರೀಡ್ (ಬ್ರಿಟಿಷ್ ಮ್ಯೂಸಿಯಂ, ಲಂಡನ್), ಪ್ರೊ. ವಾಲ್ಟರ್. ಇ. ಕ್ಲಾರ್ಕ್ (ಷಿಕಾಗೊ-ಅಮೆರಿಕ), ಪ್ರೊ. ಇ. ಡಬ್ಲ್ಯು. ಹಾಪ್ಕಿನ್ಸ್ (ಯು. ಎಸ್. ಎ), ಡಾ. ಎಚ್. ಆಂಡರ್‌ಸನ್

(ನ್ಯೂಯಾರ್ಕ್), ಡಾ. ಆನಂದ ಕುಮಾರಸ್ವಾಮಿ, ಪ್ರೊ. ಎ. ವ್ಯಾನ್ ಬರ್ಕೆವರ್ (ಜಿನೀವ), ಎ. ಬೆರ್ರಿಡೇಲ್ ಕೀತ್ (ಎಡಿನ್‌ಬರೊ), ಡಾ. ಜಿ. ಎಲ್. ಫರ್ ಕುಹರ್ (ಆಕ್ಸ್‌ಫರ್ಡ್), ಮ್ಯೂಸ್ಸಿಯುರ್, ಎ. ವೋರ್ಟಿನೊ (ಪ್ಯಾರಿಸ್), ಪ್ರೊ. ಎ. ಫೌಚರ್ (ಕಾಶ್ಮೀರ್), ಲಾರ್ಡ್ ಕರ್ಜನ್ (ಲಂಡನ್), ಡಿ. ಆ. ಪಿ. ಪ್ರೈಸ್, ಸರ್. ಹ್ಯೂ. ಡ್ಯಾಲಿ, ಮ. ಮ. ಹರಪ್ರಸಾದ ಶಾಸ್ತ್ರಿ (ಕಲ್ಕತ್ತ), ಡಿ. ಎ. ಎಂ. ಟ್ಯಾಬರ್ಡ್ (ಬೆಂಗಳೂರು), ಸರ್. ಪಿ. ಅರುಣಾಚಲಂ (ಕೊಲಂಬೊ), ಡಾ. ಸ್ಟೆ. ಕೊನೊ (ನಾಂಡಲಿ), ಡಾ. ಸಿ. ಜೌವ್ರೊ ಡುಬ್ರೈಲ್ (ಪಾಂಡಿಚೇರಿ), ಡಿ. ಆರ್ಥರ್ ಸ್ಟೈನ್, ಮ. ಮ. ಸತೀಶ ಚಂದ್ರ ವಿದ್ಯಾಭೂಷಣ, ಎಫ್. ಜೆ. ರಿಚರ್ಡ್ಸ್ (ಮದರಾಸ್), ಜಿ. ಯಾಜ್ದಾನಿ (ಹೈದರಾಬಾದ್), ರಮೇಶ ಚಂದ್ರಸರ್ಕಾರ್ (ಕೃಷ್ಣಪುರ್-ಬೆಂಗಾಲ್), ಜಿ. ಎಸ್. ಚಕ್ರವರ್ತಿ, ಜೆ. ನಾರಾಯಣರಾವ್ (ಬೊಂಬಾಯಿ), ಬೆನಗಲ್ ರಾಮರಾವ್ (ಮದರಾಸ್), ರಾವ್ ಬಹದ್ದೂರ್ ಎಸ್ ಮಂಗೇಶರಾವ್ (ಮಂಗಳೂರು), ವಿ. ಎಲ್. ನರಸಿಂಹಯ್ಯಂಗಾರ್ (ಮೈಸೂರು), ಸರ್. ಪಿ. ಎಲ್. ಕೃಷ್ಣಮೂರ್ತಿ (ಬೆಂಗಳೂರು), ರಾವ್‌ಬಹದ್ದೂರ್ ಜೆ. ಕೃಷ್ಣಶಾಸ್ತ್ರಿ (ಮದರಾಸ್)— ಈ ಕೆಲವರನ್ನು ಹೆಸರಿಸಬಹುದು. ಒಬ್ಬೊಬ್ಬರೂ ತಮ್ಮ ಕ್ಷೇತ್ರದಲ್ಲಿ ಉದ್ದಾಮ ಪಂಡಿತರು. ಅಧಿಕಾರವಾಣಿಯಿಂದ ಆಡಬಲ್ಲವರು. ಗಣ್ಯಾತಿಗಣ್ಯರೂ ವಿಶಿಷ್ಟರು. ಅಂಥಹವರಲ್ಲಿ ಆಚಾರ್ಯರ ಪಾಂಡಿತ್ಯವನ್ನು ಕುರಿತು ಹಾಡಿದವರು ಕೆಲವರು. ಅವರ ಕಾರ್ಯದ ಪ್ರಮಾಣವನ್ನು ನೋಡಿ ಬೆರಗಾದವರು ಇನ್ನೂ ಕೆಲವರು. ತಮ್ಮ ಸಂದೇಹಗಳ ಪರಿಹಾರಕ್ಕೆ ಪ್ರಶ್ನೆ ಮಾಡಿದವರು ಮತ್ತೆ ಕೆಲವರು. ತಮ್ಮ ತಪ್ಪುಗಳನ್ನು ತಿದ್ದಿಕೊಂಡವರು ಹಲವರು. ಆಚಾರ್ಯರ ನಂದಿಗಳನ್ನು ಹೊಗಳಿದವರು ಬಹುಮಂದಿ. ಅವರ ವಿಚಾರ ಶೀಲತೆಯನ್ನೂ ಬುದ್ಧಿ ಶಕ್ತಿಯನ್ನೂ ಕೊಂಡಾಡಿದವರು ಹಲವಾರು ಮಂದಿ. ಶಿಲ್ಪಗಳನ್ನು ಪರಿಚಯಮಾಡಿಕೊಡುವುದರಲ್ಲಿ ಅವರಿಗಿದ್ದ ನೈಪುಣ್ಯದಿಂದ ಮುಗ್ಧರಾದವರು ಅಸಂಖ್ಯಾತರು. ಅವರು ತಮ್ಮ ಸಂಸ್ಥೆಯ ಸದಸ್ಯರಾಗಿರುವುದು ತಮ್ಮ ಸಂಸ್ಥೆಗೆ ಭೂಷಣವೆಂದು ಭಾವಿಸಿದವರು ಹಲವಾರು ಜನ. ಸಹಾಯವನ್ನು ಅಪೇಕ್ಷಿಸಿದವರೂ ಕೃತಜ್ಞತೆಯನ್ನು ಸೂಚಿಸಿದವರೂ ಅವರ ಅಭಿವೃದ್ಧಿಯಲ್ಲಿ ಸಂತೋಷಗೊಂಡವರೂ ಅನೇಕ ಮಂದಿ. ಅವರು ಸ್ಥಾನದಿಂದ ನಿವೃತ್ತರಾಗಿ ಹೋದರೆ ಅಥವಾ ವರ್ಗವಾದರೆ ಇಲಾಖೆಯ ಕಾರ್ಯಕ್ಕೆ

ವಿಶೇಷವಾಗಿ ನಷ್ಟವಾಗುವುದೆಂದು ಹೇಳಬೇಕಾದುದೂ ಇಲ್ಲವಿಲ್ಲ. ಅವರ ಅಭಿಪ್ರಾಯಗಳನ್ನೆಲ್ಲ ಸಂಗ್ರಹಿಸಿ ಪ್ರಕಟಿಸಿದರೆ ಪ್ರಾಚ್ಯ ವಿದ್ಯಾಸಂಬಂಧ ಪ್ರತ್ಯೇಕ ಸಂಭಾವನಾ ಗ್ರಂಥವಾಗುವುದರಲ್ಲಿ ಸಂದೇಹವಿಲ್ಲ. ಅವುಗಳಲ್ಲಿ ಕೆಲವನ್ನು ಮುಂದೆ ಕೊಡಬಹುದು. ನೀವು ನಿಮ್ಮ ಕೆಲಸವನ್ನು ನಿರ್ವಹಿಸಲು ಬಹು ಸಮರ್ಥರಾಗಿದ್ದೀರಿ (ಸ್ಟೆನ್. ಕೊನೊ). ನಿಮ್ಮ ಕೆಲಸದಲ್ಲಿ ನೀವು ತೋರಿಸುತ್ತಿರುವ ಶಬ್ದವ್ಯುತ್ಪತ್ತಿಗಳನ್ನು ನಿಮ್ಮ ವರದಿಗಳು ಸ್ಪಷ್ಟವಾಗಿ ಪ್ರಕಾಶಪಡಿಸುತ್ತಿವೆ (ಎಲ್.ಡಿ. ಬಾರ್ನೆಟ್). ನಿಮ್ಮಂತಹ ಪಂಡಿತರಿಂದ ನನ್ನ ದೋಷಗಳನ್ನು ತಿದ್ದಿಕೊಳ್ಳುವುದು ಬಹು ಸಂತೋಷದ ಸಂಗತಿ (ಎಲ್. ಡಿ. ಬಾರ್ನೆಟ್). ನಿಮ್ಮ ಸಹಾಯವಿಲ್ಲದಿದ್ದರೆ ನನ್ನ ಕೆಲವು ಶಾಸನಗಳಲ್ಲಿ ಇನ್ನೂ ಹೆಚ್ಚಿನ ತಪ್ಪುಗಳಿರುತ್ತಿದ್ದವು (ಎಫ್. ಫ್ಲೀಟ್). ನೀವು ಅಲ್ಲೂರ್ ಶಾಸನದಲ್ಲಿ ಬರುವ 'ಮಸುಗೆಯು ಕಳಲ್' ಎಂಬ ಶಬ್ದಗಳಿಗೆ ಕೊಟ್ಟಿರುವ ಅರ್ಥವನ್ನು ನೋಡಿ ಬಹಳ ಸಂತೋಷವಾಯಿತು. ನಿಮ್ಮಿಂದ ಕಂಡುಹಿಡಿಯಲ್ಪಟ್ಟ ಶಾಸನಗಳ ಪಟ್ಟಿಯನ್ನು ನೋಡಿದಾಗ ಆಶ್ಚರ್ಯವಾಗುತ್ತದೆ. ನೀವು ಚಿತ್ರದುರ್ಗದಲ್ಲಿ ಅಶೋಕನ ಶಾಸನಗಳನ್ನು ಪತ್ತೆಹಿಡಿದು ಭಾಗ್ಯಶಾಲಿಗಳಾಗಿದ್ದೀರಿ. ನಾನೇನೋ ಇನ್ನು ಶಾಸನಗಳನ್ನು ಕಂಡು ಹಿಡಿಯಲು ಅದೃಷ್ಟಶಾಲಿಗಳೂ ಆಗಿದ್ದೀರಿ (ಎಫ್. ಫ್ಲೀಟ್). ನೀವು ಕನ್ನಡ ಸಾಹಿತ್ಯದ ವಿಷಯವಾಗಿ ಕಳುಹಿಸಿರುವ ಟಿಪ್ಪಣಿಗಳಿಗಾಗಿ ನಾನು ನಿಮ್ಮನ್ನು ವಂದಿಸುತ್ತೇನೆ (ಎಫ್. ಫ್ಲೀಟ್). ನೀವು 'ಹೊಯ್ಸಳ ವಂಶ' ಎಂಬ ವಿಷಯದಲ್ಲಿ ಕೊಟ್ಟಿರುವ ತಿದ್ದುಪಡಿಯನ್ನು ನಾನು ಸಂಪೂರ್ಣವಾಗಿ ಸ್ವೀಕರಿಸುತ್ತೇನೆ. ಈ ವಿಷಯದಲ್ಲಿ ನಾನು ನನ್ನನ್ನು ಅದಕ್ಕೆ ಖಂಡಿತ ತಿದ್ದಿಕೊಳ್ಳುತ್ತೇನೆ. ನೀವು 'ಸಹಾದಲಕ್ಷ್ಮೀಶ'ದ ವಿಷಯವಾಗಿ ಕೊಟ್ಟಿರುವ ಸೂಚನೆ ಬಹು ಆಕರ್ಷಕವಾಗಿದೆ. ನೀವು ಅಂಕೇಶರಿಯ 'ಸಹಾದಲಕ್ಷ್ಮಿ'ಯನ್ನು ಯಾವ ದೇಶದೊಡನೆ ಸಮನ್ವಯ ಮಾಡುತ್ತೀರೆಂಬುದನ್ನು ದಯವಿಟ್ಟು ತಿಳಿಸುತ್ತೀರಾ? (ಡಿ. ಆರ್. ಭಂಡಾರಕರ್). ನಿಮ್ಮ ವರದಿಗಳೆಲ್ಲ ಅತ್ಯಂತ ಆಕರ್ಷಕವಾಗಿರುವುದಲ್ಲದೆ ಬಹು ಸುಂದರವಾಗಿ ರಚಿತವಾಗಿವೆ (ಸಿಲ್ವೇನ್. ಲೆವಿ). ನಿಮ್ಮ ವರದಿಗಳು ಪ್ರಾಚ್ಯವಿದ್ಯೆ, ಶಾಸನವಿದ್ಯೆ ಮತ್ತು ನಾಣ್ಯ ವಿದ್ಯೆಗಳಿಗೆ ಸಂಬಂಧಪಟ್ಟ ಅತ್ಯಮೂಲ್ಯವಾದ ವಿಷಯ ರಾಶಿಯಿಂದ ತುಂಬಿವೆ. ನೀವು ಕೊಟ್ಟಿರುವ ಅನುವಾದಿತವಾದ ಪಟಗಳು ಬಹು ಉಪಯುಕ್ತವಾಗಿವೆ (ಡಾ. ಇ. ಹುಲ್ಷ್). ನಿಮ್ಮ

ವರದಿಗಳು ಎಲ್ಲ ಶಾಖೆಗಳಿಗೂ ಸಂಬಂಧಪಟ್ಟಂತೆ ವಿದ್ವತ್ಪೂರ್ಣವೂ ಆಕರ್ಷಕವೂ ಆದ ವಿಷಯಗಳಿಂದ ತುಂಬಿವೆ. ಛಾಯಾಚಿತ್ರಗಳು ಅತ್ಯುತ್ಕೃಷ್ಟವಾಗಿವೆ (ಎಫ್. ಡಬ್ಲ್ಯು. ಥಾಮಸ್). ನಿಮ್ಮ ವರದಿಗಳು ಭವ್ಯವಾಗಿ ಸಂಪಾದಿತವಾಗಿವೆ ಮತ್ತು ಸುಂದರವಾಗಿ ಮುದ್ರಿತವಾಗಿವೆ (ಪ್ರೊ. ಇ. ವಾಲ್ಟರ್. ಕ್ಲಾರ್ಕ್). ನಿಮ್ಮ ವರದಿಗಳು ದಕ್ಷಿಣ ದೇಶದ ಚರಿತ್ರೆಗೆ ಊಹಿಸುವುದಕ್ಕೂ ಆಗದಷ್ಟು ಅಗಾಧ ರಾಶಿಯ ಸಾಮಗ್ರಿಯನ್ನು ಒದಗಿಸುತ್ತವೆ. ಅವು ಇಲಾಖೆಗೆ ಕೀರ್ತಿ ತರುವ ವಿದ್ವತ್ಪೂರ್ಣವಾದ ರೀತಿಯನ್ನೂ ಅಸಾಧಾರಣವಾದ ದುಡಿಮೆಯನ್ನೂ ಹೊರಗೆಡಹುತ್ತಿವೆ. ಭಾರತದಿಂದ ಪ್ರಕಾಶಿತವಾಗುತ್ತಿರುವ ಸಂಪೂರ್ಣವೂ ಸಾರಭೂತವೂ ಆದ ಅದ್ಭುತವಾದ ದುಡಿಮೆಯ ಫಲವೆಂಬುದನ್ನು ಪ್ರದರ್ಶನ ಮಾಡುತ್ತಿವೆ. ಅಲ್ಲದೆ ಇತರೆಡೆಗಳಲ್ಲಿ ವಿಶೇಷ ಜ್ಞಾನವನ್ನೂ ಧನವನ್ನೂ ದಂಡಮಾಡುವ ಗ್ರಂಥಪ್ರಕಾಶನಕಾರ್ಯದಿಂದ ದೂರವಾಗಿವೆ (ವಿ. ಎ. ಸ್ಮಿತ್). ಭಾರತೀಯ ವಿದ್ವಾಂಸರು ಅವಶ್ಯವಾಗಿ ಅತ್ಯಂತ ಆಸಕ್ತಿವಹಿಸಬೇಕಾಗಿರುವ ಎಲ್ಲ ವಿಷಯಗಳ ಮೇಲೆ ನಿಮ್ಮ ವರದಿಗಳು ಶ್ರೀಮಂತವೂ ವೈವಿಧ್ಯಪೂರ್ಣವೂ ಅಮೋಘವೂ ಆದ ವಿಷಯಗಳನ್ನು ಹೊಂದಿವೆ (ಮ. ಮ. ಹರಪ್ರಸಾದಶಾಸ್ತ್ರಿ). ನಾನು ನಿಮ್ಮ ವರದಿಯನ್ನು ಆದಿಯಿಂದ ಅಂತ್ಯದವರೆಗೆ ಓದಿದ್ದೇನೆ. ಅದರ ಆಕರ್ಷಕಶಕ್ತಿ ಕೊನೆಯವರೆಗೆ ಒಂದೇ ಸಮನಾಗಿದೆ. ೧೯೧೯ನೆಯ ವರ್ಷದ ಕೊನೆಯ ಭಾಗವನ್ನು ಓದಿದಾಗ ನೀವು ಕಳೆದ ೧೩ ವರ್ಷಗಳಿಂದ ವರ್ಷವರ್ಷವೂ ಅಖಿಲ ಪ್ರಪಂಚದ ಪುರಾತತ್ತ್ವ ಶಾಖೆಯ ವಿದ್ವಾಂಸರ ಪ್ರಯೋಜನಕ್ಕಾಗಿ ನಿಮ್ಮ ಆ ದೊಡ್ಡ ಶಾಸ್ತ್ರದ ಎಲ್ಲ ಶಾಖೆಗಳಿಗೂ ಸಂಬಂಧಪಟ್ಟಂತೆ ಎಂತಹ ಸಾಧನ ರಾಶಿಯನ್ನು ಶೇಖರಿಸುತ್ತಿದ್ದೀರೆಂಬುದು ಮನವರಿಕೆಯಾಯಿತು. ನಿಮ್ಮನ್ನು ಸ್ತೋತ್ರ ಮಾಡಲು ಇಚ್ಛಿಸುವುದಿಲ್ಲ. ಆದರೂ ನಿಮ್ಮಲ್ಲಿಯೇ ನೀವು ಒಂದು ಸಂಸ್ಥೆಯಾಗಿ ಬಿಟ್ಟಿರುವುದಕ್ಕಾಗಿ ನಿಮ್ಮನ್ನು ಅಭಿನಂದಿಸಬೇಕು (ರೆ. ಎಫ್. ಡಬ್ಲ್ಯು. ಥಾಮಸ್). ನೀವು ನಮ್ಮ ಸಂಸ್ಥೆಯ ಗೌರವಸದಸ್ಯರಾಗಲು ಒಪ್ಪಿದರೆ ನಾವು ವಿಶೇಷ ಬಹುಮಾನಿತರಾಗುತ್ತೇವೆ (ಎ. ಎ. ಬಾಸನ್. ಉಪಕಾರ್ಯದರ್ಶಿ. ಡಿ. ಎಲ್. ಓರಿಯಂಟ್, ಪ್ಯಾರಿಸ್). ನನ್ನ ಕನ್ನಡ ಸಾಹಿತ್ಯ ಚರಿತ್ರೆಯ ಎರಡನೆಯ ಆವೃತ್ತಿಯನ್ನು ನಿಮಗೆ ಅಂಕಿತಮಾಡಲು ಅಪ್ಪಣೆಯನ್ನು ಕೊಟ್ಟರೆ ನಾನು ನಿಮಗೆ ವಿಶೇಷ ಋಣಿಯಾಗಿರುತ್ತೇನೆ (ಇ. ಪಿ. ರೈಸ್). ನಿಮ್ಮ ವ್ಯಕ್ತಿ ಸಂ

ಚಯ ಮಾಡಿಕೊಳ್ಳುವುದು ವಿಶೇಷ ಆನಂದಕರ (ಎಫ್. ಡಬ್ಲ್ಯು. ಥಾಮಸ್). ಖ್ಯಾತಿ ಲಾಭಗಳು ವಿಶೇಷ ಅರ್ಹರಾದವರಿಗೆ ಸಲ್ಲುವುದು ಬಹು ಅಪೂರ್ವ. ನಿಮ್ಮ ಕಾರ್ಯವು ಶ್ರಮಸಾಧ್ಯವೂ ಶಾಂತವೂ ಆದ ದುಡಿಮೆಯ ಫಲ. ಆದುದರಿಂದ ನಮ್ಮ ಶ್ರೀಮನ್ಮಹಾರಾಜರವರು ತಮಗೆ ದಯಪಾಲಿಸಿರುವ ಪ್ರಶಸ್ತಿಯನ್ನು ಸಾರ್ಥಕಗೊಳಿಸಿದೆ. ಮದರಾಸ್ ಸರ್ಕಾರದಲ್ಲಿ ಕೆಲಸ ಸಿಕ್ಕಿರುವುದು ಸಹಜವೇ? ಮೈಸೂರು ತಮ್ಮಂತಹವರನ್ನು ಕಳೆದುಕೊಳ್ಳುವುದೆ? (ವಿ. ಎಸ್. ನರಸಿಂಹಯ್ಯಂಗಾರ್). ಕೇಶವ ದೇವಸ್ಥಾನದ ವಿಷಯಕವಾದ ತಮ್ಮ ಪ್ರಬಂಧ ಸುಂದರವಾಗಿದೆ. ಮುದ್ರಣ, ಕಾಗದ, ಪಟಗಳು ಉತ್ತಮ ಗುಣಗಳಿಂದ ಕೂಡಿವೆ. ಕಟ್ಟಡಗಳ ವಿಷಯವಾಗಿಯೂ ಶಿಲ್ಪಗಳ ವಿಷಯವಾಗಿಯೂ ಕೊಟ್ಟಿರುವ ವಿವರಣೆಗಳು ಯಥೋಚಿತವಾಗಿವೆ. ನಾನು ಅದರಲ್ಲಿ ಒಂದು ದೋಷವನ್ನೂ ಕಂಡಿಲ್ಲ (ವಿ. ಎ. ಸ್ಮಿತ್). ಸೋಮನಾಥಪುರದ ಕೇಶವ ದೇವಾಲಯದ ಪ್ರಬಂಧವು ಆಶ್ಚರ್ಯಕರವಾಗಿದೆ. ಶಿಲ್ಪಗಳೆಲ್ಲ ಅತ್ಯಂತ ಸುಂದರವಾಗಿವೆ. ಛಾಯಾಚಿತ್ರಗಳೆಲ್ಲ ಗಂಧರ್ವ ಲೋಕದವಂತಿವೆ. (ಎಫ್. ಜಿ. ರಿಚರ್ಡ್ಸ್). ದೊಡ್ಡ ಗದ್ದವಳ್ಳಿಯ ಮಹಾಲಕ್ಷ್ಮೀ ದೇವಿಯ ದೇವಾಲಯದ ವಿಷಯಕವಾದ ಕೃತಿಯು ಎಲ್ಲ ದೃಷ್ಟಿಯಿಂದಲೂ ಬಹು ಸಮರ್ಪಕವಾಗಿದೆ. ವಿವರಣೆಗಳೆಲ್ಲ ಸರ್ವೋತ್ಕೃಷ್ಟವಾಗಿವೆ. (ಎಲ್. ರೈಸ್). ಬರ್ಮಾ ಕ್ಷೇತ್ರದಲ್ಲಿಯೂ ಇಂತಹ ಪ್ರಬಂಧಗಳನ್ನು ಪ್ರಕಟಿಸಬೇಕೆಂಬ ಯೋಚನೆಯಿದೆ. ಹಾಗೆ ಮಾಡುವಾಗ ನಿಮ್ಮ ವಿದ್ವತ್ಪೂರ್ಣವಾದ ಈ ಪ್ರಬಂಧಗಳು ನಮ್ಮ ಸಂಶೋಧನೆಗಳ ವಿಷಯದಲ್ಲಿ ಅಪೂರ್ವವಾದ ಬೆಳಕನ್ನು ಚೆಲ್ಲುವುದರಲ್ಲಿ ಸಂದೇಹವಿಲ್ಲ (ಟಾ. ಸೇ. ಕೊ). ಮೈಸೂರಿನ ಅಂಧಕಾರ ಯುಗದ ಇತಿಹಾಸವನ್ನು ಎಂದಾದರೂ ಬರೆಯಬೇಕಾದರೆ ಗಂಗರ ಚರಿತ್ರೆಯು ಪ್ರಧಾನವಾದ ಸ್ಥಾನವನ್ನಾಕ್ರಮಿಸಬೇಕಾಗುತ್ತದೆ. ಆಗ ಮೈಸೂರು ದೇಶದ ಅನೇಕ ಸ್ಥಳಗಳಿಗೆ ಸಂಬಂಧಪಟ್ಟ ಕೃತಕವಲ್ಲದ ಸತ್ಯಪೂರ್ಣವಾದ ಗಂಗ ಶಾಸನಗಳನ್ನು ಕಂಡುಹಿಡಿದ ಕೀರ್ತಿ ತಮಗೇ ಸಲ್ಲತಕ್ಕದ್ದಾಗುತ್ತದೆ. ಡಾ. ಫ್ಲೀಟ್ ಈಗ ಜೀವಂತವಾಗಿದ್ದರೆ ಗಂಗಶಾಸನಗಳ ಕೃತಕತೆಯ ವಿಷಯದಲ್ಲಿ ಆತನಿಗಿದ್ದ ಅಭಿಪ್ರಾಯವನ್ನು ಆತನು ಬದಲಾಯಿಸಿಕೊಳ್ಳುತ್ತಿದ್ದನೆಂಬ ತಮ್ಮ ಅಭಿಪ್ರಾಯವನ್ನು ನಾನು ಪೂರ್ಣವಾಗಿ ಒಪ್ಪುತ್ತೇನೆ. ಆತನ ವಾದವು ಬಹುಕಾಲ ಪ್ರಚಲಿತವಾಗಿದ್ದು ಮೈಸೂರಿನ ಇತಿಹಾಸ ವಿಷಯಕವಾದ ಸಂಶೋಧಕರನ್ನು ತಪ್ಪುದಾರಿಯಲ್ಲಿರಿಸಿತ್ತು.

ಆಚಾರ್ಯರ ಸಂಶೋಧನಾ ಲೇಖನಗಳು

ಆಚಾರ್ಯರು ಇಲಾಖೆಯ ವರದಿಗಳನ್ನೇ ಅಲ್ಲದೆ ಅದಕ್ಕೆ ಸಂಬಂಧ ಪಟ್ಟ ಹಾಗೆ ಅನೇಕ ವಿದ್ವಾಂಸರ ಒತ್ತಾಯದ ಸೂಚನೆಯ ಮೇಲೆ ವರದಿಗಳಿಗೆ ಅನುಬಂಧಗಳಂತಿರುವ ಅನೇಕ ಲಘು ಟಿಪ್ಪಣಿಗಳನ್ನೂ ಲೇಖನಗಳನ್ನೂ ಇಂಡಿಯನ್ ಆಂಟಿಕ್ವರಿ ' ' ಮಿಥಿಕ್ ಸೊಸೈಟಿ ಪತ್ರಿಕೆ ' ಗಳಲ್ಲಿ ಪ್ರಕಟ ಪಡಿಸಿದ್ದಾರೆ. ಅವುಗಳೆಲ್ಲ ಪಾಶ್ಚಾತ್ಯ ವಿದ್ವಾಂಸರ ಸೂಚನೆಯ ಮೇಲೆಯೇ ರಚಿತವಾದುದರಿಂದ ಇಂಗ್ಲೀಷ್ ಭಾಷೆಯಲ್ಲಿಯೇ ರಚಿತವಾಗಿವೆ. ಅವುಗಳ ಸಂಗ್ರಹವಾದ ಪರಿಚಯವನ್ನು ಮುಂದೆ ಕಾಣಬಹುದು.

೧ **ಚಿತ್ರದುರ್ಗದಲ್ಲಿ ಸಿಕ್ಕಿದ ಆಂಧ್ರ ಮತ್ತು ರೋಮನ್ ದೇಶದ ನಾಣ್ಯಗಳು :—** Andhra and Roman coins in Chitaldroog (ಮಿಥಿಕ್ ಸೊಸೈಟಿಯ ತ್ರೈಮಾಸಿಕ ಪತ್ರಿಕೆ ೧–೩೪೭) ಇದು ಚಿತ್ರದುರ್ಗದ ಸಮೀಪದ ಚಂದ್ರವಳ್ಳಿಯ ನಿವೇಶನದಲ್ಲಿ ನಡೆದ ಭೂಶೋಧನೆಯಲ್ಲಿ ಸಿಕ್ಕಿದ ರೋಮನ್ ಮತ್ತು ಆಂಧ್ರ ನಾಣ್ಯಗಳ ವಿಷಯಕವಾದ ಒಂದು ಟಿಪ್ಪಣಿ. ಇಲ್ಲಿ ಸಿಕ್ಕಿರುವ ನಾಣ್ಯಗಳಲ್ಲಿ ೭ ಸೀಸದ್ದು ಒಂದು ಬೆಳ್ಳಿಯದು. ಬೆಳ್ಳಿಯ ನಾಣ್ಯವು ಆಗಸ್ಟಸ್ ಚಕ್ರವರ್ತಿಯ ಕಾಲಕ್ಕೆ ಸೇರಿದ ದೀನಾರಗಳು, ಸೀಸದವು ಮುಡಾನಂದ ಮತ್ತು ಚುಟುಕಡಾನಂದ ಎಂಬ ರಾಜರಿಗೂ ಅವರ ಪ್ರತಿನಿಧಿಗಳಿಗೂ ಸೇರಿದುವು. ಬರವಣಿಗೆಯು ಬ್ರಾಹ್ಮೀ ಲಿಪಿಯಲ್ಲಿ ಪ್ರಾಕೃತ ಭಾಷೆಯಲ್ಲಿದೆ. ಸುಮಾರು ೨೦೦೦ ವರ್ಷಕ್ಕೆ ಹಿಂದಿನವು. ಚಂದ್ರವಳ್ಳಿಯ ಪರಮ ಪ್ರಾಚೀನತೆಯನ್ನು ಪ್ರದರ್ಶಿಸುತ್ತವೆ

೨ **ತಲಕಾಡು :—**(Talkad) (ಮಿ. ಸೊ. ತ್ರೈಮಾ. ಸಂಪುಟ ೩). ಸದರಿ ಪತ್ರಿಕೆಯ ಎರಡನೆಯ ಸಂಪುಟದ ೧೩೧ ರಿಂದ ೧೪೦ನೆಯ ಪುಟಗಳಲ್ಲಿ ಕೊಬರ್ನ್ ಅವರು ತಲಕಾಡಿನ ವಿಷಯವಾಗಿ ಅಲ್ಲಿಯ ಸ್ಥಳ ಪುರಾಣ ಮತ್ತು ಪವಿತ್ರತೆಯನ್ನು ಕುರಿತು ಬರೆದಿದ್ದರು. ಆಚಾರ್ಯರು ಅದಕ್ಕೆ ಅನುಬಂಧವಾಗಿ ಈ ಲೇಖನದಲ್ಲಿ ಅಲ್ಲಿಯ ಸುತ್ತು ಮುತ್ತಲಿನ ವಿಷಯಗಳನ್ನು ಅಂದರೆ ಅಲ್ಲಿಯೇ ಇರುವ ವೈದ್ಯೇಶ್ವರ, ಪಾತಾಳೇಶ್ವರ, ಮರಳೇಶ್ವರ ದೇವಾಲಯಗಳ

ವಿವರಣೆಗಳನ್ನೂ ಕೀರ್ತಿ ನಾರಾಯಣಸ್ವಾಮಿ ದೇವಾಲಯದ ಬಳಿ ನಡೆದ ಭೂಶೋಧನೆಯ ವಿವರವನ್ನೂ ಅಲ್ಲಿ ಸಿಕ್ಕಿದ ಶಾಸನಗಳ ಸಾರಾಂಶವನ್ನೂ ಅಲ್ಲಿಯೇ ಇರುವ ಕೊಪ್ಪಲು ಮಠದ ಸ್ವಾಮಿಗಳ ಪರಂಪರೆ ಮತ್ತು ಸನ್ನದುಗಳನ್ನೂ ಆ ಮಠದಲ್ಲಿ ಸಿಕ್ಕಿದ ತಲಕಾಡಿನ ಸ್ಥಳಪುರಾಣದ ಸಂಗ್ರಹವನ್ನೂ ಮಾಧವಮಂತ್ರಿ ಆಣೆಕಟ್ಟೆ, ಮಾಧವಮಂತ್ರಿ ನಾಲಾ, ತಲಕಾಡಿನ ಬಂದರಪನ್ನನ ಛತ್ರ, ಮುಡುಕತೊರೆ, ಟಿ. ನರಸೀಪುರ, ತಿರುಮಕೂಡ್ಲು ದೇವಾಲಯಗಳನ್ನೂ ಬನ್ನೂರು ಹೇಮಾದ್ರಮ್ಮನ ಛತ್ರ ಮೊದಲಾದುವುಗಳನ್ನೂ ಕುರಿತು ಪ್ರಸ್ತಾಪ ಮಾಡಿದ್ದಾರೆ.

೩. ಮಾಗಡಿ ಮತ್ತು ಅದರ ಪರಿಸರ :— (Magadi and its neighbourhood) ಇದರಲ್ಲಿ ಮಾಗಡಿಯ ಸ್ಥಳಪುರಾಣ, ಅಲ್ಲಿಯ ತಿರುಮಲೆ, ಸೋಮೇಶ್ವರ ದೇವಾಲಯಗಳೂ ಜೈನಶಾಸ್ತ್ರ, ಸಾವನದುರ್ಗ, ಕಲ್ಯ, ಸಾತನೂರು, ಕೆಂಪುಸಾಗರ ಮೊದಲಾದುವುಗಳ ವಿವರಗಳೂ ನಿರೂಪಿತವಾಗಿವೆ.

೪. ಬಾಬಾಬುಡನ್‌ಗಿರಿ :— (Bababudangiri) ಇದರಲ್ಲಿ ಬಾಬಾಬುಡನ್‌ಗಿರಿಯ ಗುಹೆ, ಸ್ಥಳಪುರಾಣ, ದತ್ತಾತ್ರೇಯ ಪೀಠ, ಗೋರಿಗಳು, ಅಲ್ಲಿಯ ಸ್ವಾಮಿಗಳು ಮತ್ತು ಅವರ ಜಹಗೀರುಗಳು, ಭಂಡಾರಖಾನ, ಗದಾತೀರ್ಥ ಕಾಮನತೀರ್ಥ ಮತ್ತು ನೆಲ್ಲಿಕಾಯಿ ತೀರ್ಥಗಳೆಂಬ ತೀರ್ಥತ್ರಯಗಳು, ಅಲ್ಲಿಯ ಕಾಫಿಬೆಳೆಯ ಚರಿತ್ರೆ, ಕಾಫಿ ಬೆಳೆಗಾರರಿಗೆ ದೊರೆತ ಸನ್ನದು ಮೊದಲಾದುವು ವರ್ಣಿತವಾಗಿವೆ.

೫. ವಿ. ಸುಬ್ರಹ್ಮಣ್ಯಯ್ಯರವರ ಲೇಖನಕ್ಕೆ ಉತ್ತರ :— (A reply to V. Subrahmanya Iyer's article) ಆಚಾರ್ಯರು ಇಂಡಿಯನ್ ಆಂಟಿಕ್ವೆರಿಯ ಪತ್ರಿಕೆಯಲ್ಲಿ ೧೯೧೬ನೆಯ ಫೆಬ್ರವರಿ ಮತ್ತು ಸೆಪ್ಟೆಂಬರ್ ಸಂಚಿಕೆಗಳಲ್ಲಿ (Madavacharya and his younger brothers) ಎಂಬ ಲೇಖನದಲ್ಲಿ ವಿದ್ಯಾರಣ್ಯರೂ ಮಾಧವಮಂತ್ರಿಯೂ ಭಿನ್ನವ್ಯಕ್ತಿಗಳೆಂದು ಸಿದ್ಧಾಂತಮಾಡಿದ್ದರು. ಅದರ ಮೇಲೆ ವಿ. ಸುಬ್ರಹ್ಮಣ್ಯ ಅಯ್ಯರವರು ಇದೇ ಮಿಥಿಕ್ ಸೊಸೈಟಿಯ ತ್ರೈಮಾಸಿಕ ಪತ್ರಿಕೆಯ ಏಳನೆಯ ಸಂಪುಟದ ೩೧೮–೩೦ನೆಯ ಪುಟಗಳಲ್ಲಿ ಮೇಲೆ ಹೇಳಿದ ಇಬ್ಬರೂ ಏಕವ್ಯಕ್ತಿಗಳೇ ಇರಬೇಕು, ಗೋತ್ರ ಮತ್ತು ತಾಯಿತಂದೆಗಳ ಹೆಸರುಗಳು ಮುಂದಿನವರಿಂದ ಅಪಾರ್ಥವಾಗದ

ಬೇಕು—ಎಂದು ವಾದ ಮಾಡಿದ್ದರು. ಅದಕ್ಕೆ ಕೋಟಿಯಾಗಿ ಆಚಾರ್ಯರು ಈ ಉತ್ತರದಲ್ಲಿ ತಮ್ಮ ಪೂರ್ವಸಿದ್ಧಾಂತಕ್ಕನುಗುಣವಾಗಿ ಈ ವ್ಯಕ್ತಿಗಳಿಬ್ಬರೂ ಭಿನ್ನವ್ಯಕ್ತಿಗಳೆಂದು ಸಾಧಾರವಾಗಿ ಸಿದ್ಧಾಂತ ಮಾಡಿದ್ದಾರೆ.

೬. **ಮೈಸೂರಿನ ರಾಜಚಿಹ್ನೆ :—** (The Mysore Royal Insignia) ಆಚಾರ್ಯರು ಇದರಲ್ಲಿ ಮೈಸೂರಿನ ರಾಜ್ಯಚಿಹ್ನೆವಾದ ಗಂಡಭೇರುಂಡದ ಇತಿಹಾಸವನ್ನು ಕ್ರಿ.ಪೂ. ೧೦೦೦ ಕ್ಕೆ ಸೇರಿದ ಪಶ್ಚಿಮ ಏಷ್ಯದ ಹಿಟ್ಟೈಟ್ ಶಿಲ್ಪಗಳಿಂದ ಇಲ್ಲಿಯವರೆಗೆ ವಿಚಾರಮಾಡಿದ್ದಾರೆ.

೭. **ಕನ್ನಡ ಸಾಹಿತ್ಯದಲ್ಲಿ ಜೀವಂಧರನ ಕಥೆ :—** (The Story of Jivandhara in Kannada Leterature) ಇದೇ ಪತ್ರಿಕೆಯ ಹನ್ನೆರಡನೆಯ ಸಂಪುಟದಲ್ಲಿ ೩೧೬-೩೦ ನೆಯ ಪುಟಗಳಲ್ಲಿ ಡಾ. ಹುಲ್ಷ್ ಅವರು ತಮಿಳು ಮತ್ತು ಸಂಸ್ಕೃತ ಸಾಹಿತ್ಯಗಳಲ್ಲಿ ಬರುವ ಜೀವಂಧರನ ಕಥೆಯನ್ನು ಕುರಿತ ಗ್ರಂಥಗಳನ್ನು ವಿಚಾರ ಮಾಡಿದ್ದರು. ಇಲ್ಲಿ ಆಚಾರ್ಯರು ಅದಕ್ಕೆ ಸಂಬಂಧಪಟ್ಟಂತೆ ಕನ್ನಡದ 'ಜೀವಂಧರ ಚರಿತೆ' (ಭಾಸ್ಕರ ೧೪೨೪) 'ಜೀವಂಧರ ಸಾಂಗತ್ಯ' (ಬೊಮ್ಮರಸ—೧೪೮೫) ಮತ್ತು 'ಜೀವಂಧರ ಷಟ್ಪದಿ' (ಕೋಟೀಶ್ವರ—೧೫೦೦ ?) ಎಂಬ ಗ್ರಂಥಗಳ ವಿವರಗಳನ್ನು ಕೊಟ್ಟಿದ್ದಾರೆ.

೮. **ತಲಕಾಡಿನ ಪಶ್ಚಿಮ ಗಂಗರು** (The Weslern Gangs of Talkad) ಇದು ಮಿಥಿಕ್ ಸೊಸೈಟಿಯಲ್ಲಿ ಮಾಡಿದ ಭಾಷಣದ ಸಾರಾಂಶ. ಕ್ರಿ.ಶ. ೯೬೩ಕ್ಕೆ ಸೇರಿದ ಮಾರಸಿಂಹನ ಕೂಡ್ಲೂರ್ ಶಾಸನದ ಆಧಾರದ ಮೇಲೆ ರಚಿತವಾದುದು. (ಈ ಮಾರಸಿಂಹನ ಶಾಸನವೂ ಕೆರೆಗೋಡು ರಂಗಾಪುರ, ನರಸಾಪುರ, ಗಟ್ಟವಾಡಿ ಮತ್ತು ಸೂಡಿ ಶಾಸನಗಳ ಮಾದರಿಯದು) ಇದರಲ್ಲಿ ಆಚಾರ್ಯರು ಗಂಗರ ತಾಮ್ರಪಟಗಳೆಲ್ಲ ಕೃತಕವಲ್ಲ; ಸತ್ಯವಾದುವು ಎಂದು ಸಿದ್ಧಾಂತ ಮಾಡಿದ್ದಾರೆ. ಅದರ ಸಂಗ್ರಹ ವಿವರಣೆ ಹೀಗಿದೆ : ಭಾರತೀಯ ಪ್ರಾಚ್ಯವಿದ್ಯಾ ಸಂಶೋಧಕರಿಗೆಲ್ಲ ಗಂಗರ ತಾಮ್ರ ಶಾಸನಗಳ ವಿಷಯವಾಗಿ ಇಂಡಿಯನ್ ಆಂಟಿಕ್ವೆರಿ ಮತ್ತು ಎಪಿಗ್ರಾಫಿಯ ಕರ್ನಾಟಿಕಗಳಲ್ಲಿ ರೈಸರಿಗೂ ಫ್ಲೀಟರಿಗೂ ನಡೆಯುತ್ತಿರುವ ವಾಗ್ವಾದಗಳು ಸುವಿದಿತವಾಗಿವೆ. ಫ್ಲೀಟರು ಗಂಗರ ಶಾಸನ ಸಮೂಹವನ್ನೆಲ್ಲ (ಕೆಲವನ್ನು ಬಹು ಕ್ಷುಲ್ಲಕ ಕಾರಣಗಳಿಂದ) ಕೃತಕವೆಂದು ತೀರ್ಮಾನಿಸಿಬಿಟ್ಟರು. ಇತರ ವಿದ್ವಾಂಸರನೇಕರು ಅವರನ್ನೇ ಅನುಸರಿಸಿದರು. ಅಲ್ಲದೆ ಫ್ಲೀಟರು ಆ

ಶಾಸನಗಳಲ್ಲಿ ಉಕ್ತವಾಗಿರುವ ವಂಶಾವಳಿಗಳೆಲ್ಲ ಕಟ್ಟುಕಥೆಗಳೆಂದರು. ಅದೃಷ್ಟವಶಾತ್ ಗಂಗರ ಪೆನುಗೊಂಡೆಯ ಶಾಸನ ಸಿಕ್ಕಿತು. ಫ್ಲೀಟರು 'ಅದು ಕೃತಕವಲ್ಲ. ಕೊನೆಗೆ ಸತ್ಯವಾದ ಒಂದು ಗಂಗ ಶಾಸನ ಸಿಕ್ಕಿತು' ಎಂದು ಉದ್ಗಾರ ತೆಗೆದರು. (ಜೆ. ಆರ್. ಎ. ಎಸ್ 1915. ಪು. 472) ಈ ಶಾಸನದಲ್ಲಿ ಇತರ ಎಲ್ಲ ಶಾಸನಗಳಲ್ಲಿ ಸಿಕ್ಕುವ ಮೊದಲು ಮೂರು ತಲೆ ಮೊರೆಗಳು ಸ್ವೀಕೃತವಾದುವು. ಪಲ್ಲವ ಸಿಂಹವರ್ಮನ ರಾಜ್ಯಾಧಿಕಾರ ಕಾಲ ಶಕ ೪೩೭ ಎಂದು ಆರ್. ನರಸಿಂಹಾಚಾರ್ಯರಿಂದ ಕಂಡು ಹಿಡಿಯಲ್ಪಟ್ಟಮೇಲೆ ಲಿಪಿದೃಷ್ಟಿಯಿಂದ ಪೆನುಗೊಂಡೆಯ ತಾಮ್ರಶಾಸನದ ಕಾಲ ಕ್ರಿ.ಶ ೪೮೫ ಎಂದು ಫ್ಲೀಟರು ಅಂಗೀಕಾರ ಮಾಡಬೇಕಾಯಿತು. ಒಂದನೆಯ ರಾಜಮಲ್ಲನ ವಳ್ಳಿಮಲೆಯ ಶಿಲಾಶಾಸನವೂ (ಕೆಲವು ವಿವರಗಳನ್ನು ಬಿಟ್ಟರೆ) ಒಂದನೆಯ ಶಿವಮಾರನಿಂದ ನಾಲ್ಕು ತಲೆಮೊರೆಗಳನ್ನು ದೃಢೀಕರಿಸಿತು. ಲಿಪಿದೃಷ್ಟಿಯಿಂದ ವಳ್ಳಿಮಲೆಯ ಶಾಸನವನ್ನು ಈ ಕಾಲಕ್ಕೆ ಹಾಕಬಹುದು. ಶಿವಮಾರನ ತಂದೆಯಾದ ಶ್ರೀವಿಕ್ರಮನ ಶಾಸನವೊಂದು ಆಚಾರ್ಯರಿಂದ ಕಂಡು ಹಿಡಿಯಲ್ಪಟ್ಟಿದೆ (M.A.R. 1917). ಇದರಲ್ಲಿರುವ ಮುದ್ರಿಕೆಯ ಪ್ರಕಾರ ರಾಜಮಲ್ಲನ ರಾಜ್ಯಾಧಿಕಾರದ ಪ್ರಾರಂಭ ೮೧೭ ಎಂದು ತಿಳಿದುಬರುವುದು. (M.A.R. 1910). ೧೯೧೦ ರಿಂದ ಮುಂದೆ ಆಚಾರ್ಯರು ಗಂಗರ ಅನೇಕ ನಿಜವಾದ ಶಾಸನಗಳನ್ನು ಕಂಡು ಹಿಡಿದರು. ಅದರಲ್ಲಿ ದುರ್ವಿನೀತನ ಎರಡು ಶಾಸನಗಳು (M.A.R. 1912) ಬಹು ಮುಖ್ಯವಾದುವು. ಇಷ್ಟಾದರೂ ಫ್ಲೀಟರು ಇವುಗಳ ಸತ್ಯಾಂಶವನ್ನು ಪೂರ್ಣವಾಗಿ ಒಪ್ಪದಿದ್ದರೂ ತಮ್ಮ ಸಿದ್ಧಾಂತವನ್ನು ಸ್ವಲ್ಪಸ್ವಲ್ಪವಾಗಿ ಬದಲಾಯಿಸಲು ಯತ್ನಿಸಿದರು. ಅವರ ಮರಣಾನಂತರ ಕೃತಕಗಳಲ್ಲದ ಕೃಷ್ಣ ವರ್ಮನ ಬಂಡಗನಹಳ್ಳಿ ಶಾಸನ, ದುರ್ವಿನೀತನ ಉತ್ತನೂರು ಶಾಸನ, ಪೊಲವೀರನ ತಗರೆ ತಾಮ್ರಪಟ, ಇಮ್ಮಡಿ ರಾಜಮಲ್ಲನ ಕೆರೆಗೋಡು ರಂಗಾಪುರ ತಾಮ್ರ ಶಾಸನ, ಶ್ರೀಪುರುಷನ ನರಸಿಂಹರಾಜಪುರದ ಶಾಸನ (M.A.R. 1916), ಮಾರಸಿಂಹನ ಕಡೂರು ಶಾಸನ, (M.A.R. 1918) ಮೊದಲಾದುವು ಬೆಳಕಿಗೆ ಬಂದಿವೆ. ಫ್ಲೀಟರು ಜೀವಿಸಿದ್ದರೆ ಇವುಗಳ ಸತ್ಯಾಂಶವನ್ನೆಲ್ಲ ಒಪ್ಪಿಕೊಂಡು ತಮ್ಮ ಸಿದ್ಧಾಂತವನ್ನು ಬದಲಾಯಿಸಿ ಕೊಳ್ಳುತ್ತಿದ್ದರು. ಈ ವಿಷಯವನ್ನು ಡಾ. ಹಾಷ್ಟೆಲ್ ಮೊದಲಾದವರು ಅಂಗೀಕಾರ ಮಾಡಿದ್ದಾರೆ. ಸ್ಟೆನ್. ಕೊನೆ, ಪಾಠಕ್ ಮೊದಲಾದವರು ಶಾಸನಗಳಲ್ಲಿ ಕಂಡು ಬರುವ ಅಕ್ಷ

ರಸ್ಸಾಲಿತ್ಯಗಳ ದೃಷ್ಟಿಯಿಂದ ಕೃತಕವಿರಬಹುದೆಂದು ವಾದಿಸಿದ್ದಾರೆ. ಆದರೆ ಅಸ್ಸಂಸ್ಸಾಲಿತ್ಯಗಳು ರಾಷ್ಟ್ರಕೂಟರ ಮೊದಲಾದವರ ಶಾಸನಗಳಲ್ಲಿಯೂ ಇದ್ದೇ ಇರುತ್ತವೆ. ಆದುದರಿಂದ ಈ ಶಾಸನಗಳೆಲ್ಲ ಸತ್ಯವಾದುವು. ಆದರೆ ಹರಿವರ್ಮನ ಶಾಸನ ಮರಕೆರೆ ಶಾಸನಗಳಂತಹವು ಇಲ್ಲದೇ ಇಲ್ಲ. ಅಂತಹವುಗಳನ್ನು ಎಚ್ಚರಿಕೆಯಿಂದ ವಿಮರ್ಶಿಸಬೇಕು. ಮದ್ರಾಸಿನಲ್ಲಿ ಕಂಡು ಹಿಡಿಯಲ್ಪಟ್ಟ ಅವಂತಿಸುಂದರಿ ಕಥೆಯಲ್ಲಿ ದುರ್ವಿನೀತನ ಆಸ್ಥಾನದಲ್ಲಿ ಭಾರವಿಯಿದ್ದನೆಂದು ಹೇಳುವುದರಿಂದ ಅವನ ಕಾಲಕ್ಕೆ ಅದು ದೃಢವಾದ ಆಧಾರ. ಈತನು ಚಾಳುಕ್ಯ ವಿಷ್ಣುವರ್ಧನ, ಪಲ್ಲವ ಸಿಂಹವಿಷ್ಣು ಇವರಿಗೆ ಸಮಕಾಲೀನ. ಈ ವಿಷಯವು ದುರ್ವಿನೀತನು ಕಿರಾತಾರ್ಜುನೀಯದ ೧೫ ನೆಯ ಸರ್ಗಕ್ಕೆ ವ್ಯಾಖ್ಯಾನವನ್ನು ರಚಿಸಿದನೆಂಬುದನ್ನು ಸಮರ್ಥಿಸುತ್ತದೆ. ದುರ್ವಿನೀತನ ಕಾಲವು ಏಳನೆಯ ಶತಮಾನದ ಪೂರ್ವಾರ್ಧ. ಈ ಆಧಾರದ ಮೇಲೆ ಪೂರ್ವ ರಾಜರುಗಳ ಕಾಲವನ್ನು ಸುಲಭವಾಗಿ ನಿಷ್ಕರ್ಷೆ ಮಾಡಬಹುದು. ಇದರ ಪ್ರಕಾರ ಶ್ರೀ ಪುರುಷನ ಶಾಸನದ ೭೨೫ ಅವನ ೭೨ ನೆಯ ವರ್ಷದ ಆಳ್ವಿಕೆಯಾಗುತ್ತದೆ. ಇದು ಅಸಂಭವವೇನೂ ಅಲ್ಲ. ಈ ಕಾರಣಗಳಿಂದ ಜೆವ್ರೊ ಡೂಬ್ರೈಲ್ ತನ್ನ 'Anisent History of Deccan' ಎಂಬ ಗ್ರಂಥದಲ್ಲಿ ಸೂಚಿಸಿರುವ ಸಂಶಯಪಕ್ಷವನ್ನು ಅಂಗೀಕಾರಮಾಡಬಹುದು. ಒಟ್ಟಿನಲ್ಲಿ ಹೇಳುವುದಾದರೆ ಗಂಗರ ಶಾಸನಗಳು ಸತ್ಯವಾದುವು: ಕೃತಕವಲ್ಲ'

೯. ಕ್ರಿ.ಶ. ೮೧೦ ನೆಯ ವರ್ಷದ ರಾಷ್ಟ್ರಕೂಟರ ಒಂದು ಹೊಸ ತಾಮ್ರ ಶಾಸನ :—(A new Rashtra Kuta Copper-plate grant of 810-AD.—ಮಿಥಿಕ್ ಸೊಸೈಟಿ ಪತ್ರಿಕೆ—ಪುಟ೬೩). ಇದು ಆಚಾರ್ಯರು ವಿಶ್ರಾಂತರಾದ ಮೇಲೆ ೧೯೩೩-೩೪ ರಲ್ಲಿ ಸಂಶೋಧಿಸಿ ಪ್ರಕಟಿಸಿದ ಲೇಖನ. ಈ ಶಾಸನವನ್ನು ಡೆಪ್ಯುಟಿ ಕಮೀಷನರ್ ಬಿ. ವೆಂಕೋಬರಾಯರು ನೆಲಮಂಗಲದ ಪುರಾಣವಯ್ಯನಿಂದ ತೆಗೆದು ಕಳುಹಿಸಿದುದು. ಇದರಲ್ಲಿ ಶಾಕಿರಾಜನೆಂಬುವನು ಕುರುವಲ್ಲಿ ಜಿಲ್ಲೆಯ ಸಂಗಾಮಿಯೆಂಬ ಗ್ರಾಮವನ್ನು ದಾಮೋದರನೆಂಬುವನಿಗೆ ದಾನ ಮಾಡಿರುವುದು ಸೂಚಿತವಾಗಿದೆ.

೧೦. ಶೃಂಗೇರಿ (Sringeri) (Mythic Society Journal Vol. VII P. 10-33) ಇದರಲ್ಲಿ ಆಚಾರ್ಯರು ಶೃಂಗೇರಿ ಮಠಕ್ಕೆ ಸಂಬಂಧಪಟ್ಟ

ಶಾಸನಗಳು ಸನ್ನದುಗಳು, ದತ್ತಿಗಳು, ಗುರುಪರಂಪರೆ, ಗ್ರಂಥಭಂಡಾರ ಮೊದಲಾದುವುಗಳನ್ನು ಬಹು ಎಚ್ಚರಿಕೆಯಿಂದ ವಿಮರ್ಶೆಮಾಡಿ ರಾಜಮನೆತನಗಳಿಗೂ ಮಠಕ್ಕೂ ಇದ್ದ ಸಂಬಂಧವನ್ನೂ ಗುರುಗಳ ಪಾರಂಪರ್ಯವನ್ನೂ, ವಿಜಯನಗರದ ಆದಿರಾಜರಿಗೂ ಶೃಂಗೇರಿ ಮಠದ ಆದಿಗುರುಗಳಿಗೂ ಇದ್ದ ಶಿಷ್ಯಗುರುಭಾವವನ್ನೂ ಅದಕ್ಕಿಂತ ಹೆಚ್ಚಾಗಿ ಹೈದರ್ ಮತ್ತು ಟಿಪ್ಪುಸುಲ್ತಾನರ ಹೃದಯವೈಶಾಲ್ಯವನ್ನೂ ತಿಳಿದುಪಡಿಸಿರುವುದಲ್ಲದೆ ಶೃಂಗೇರಿಯಲ್ಲಿರುವ ವಿದ್ಯಾಶಂಕರ ದೇವಾಲಯದ ಶಿಲ್ಪವೈಶಿಷ್ಟ್ಯವನ್ನೂ ಕಲಾವೈಭವವನ್ನೂ ಬಹುಹೃದಯಂಗಮವಾಗಿ ವರ್ಣಿಸಿದ್ದಾರೆ.

ಆಚಾರ್ಯರ ಇವಿಷ್ಟು ಲೇಖನಗಳೂ ಮಿಥಿಕ್ ಸೊಸೈಟಿಯ ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಗಿರುವುದು. ಹಾಗೆಯೇ ಅವರ ಇನ್ನೂ ಕೆಲವು ಲೇಖನಗಳು 'ಇಂಡಿಯನ್ ಆಂಟಿಕ್ವೆರಿ' ಯಲ್ಲಿಯೂ ಪ್ರಕಟವಾಗಿವೆ. ಅವುಗಳನ್ನು ಮುಂದೆ ಯಥೋಚಿತವಾಗಿ ಪರಿಚಯಮಾಡಿಕೊಳ್ಳಬಹುದು.

೧. ಚೈತ್ರ—ಪವಿತ್ರ (Chaitra-Pavitra) (Ind. Ant. 38–Page 52) ಅನೇಕ ಶಾಸನಗಳಲ್ಲಿ ಉಕ್ತವಾಗಿರುವ ಚೈತ್ರಪವಿತ್ರೋತ್ಸವಗಳಿಗಾಗಿ ಬಿಟ್ಟಿರುವ ದತ್ತಿ ಎಂಬುದರ 'ಚೈತ್ರ ಪವಿತ್ರ' ಎಂಬ ಶಬ್ದಕ್ಕೆ ಡಾ|| ಫ್ಲೀಟ್, ಹುಲ್ಷ್, ರೈಸ್ ಮೊದಲಾದವರು ಚೈತ್ರಮಾಸದಲ್ಲಿ ಬರುವ ಪವಿತ್ರವಾದ ಚೈತ್ರೋತ್ಸವ ಎಂದು ಅರ್ಥಮಾಡಿಕೊಂಡಿದ್ದರು. ಆಚಾರ್ಯರು 'ಈಶ್ವರಸಂಹಿತೆ' ಮತ್ತು 'ಪಾದ್ಮಸಂಹಿತೆ'ಗಳ ಆಧಾರದ ಮೇಲೆ ಈ ಶಬ್ದವು ತತ್ಪುರುಷವಲ್ಲ; ದ್ವಂದ್ವ: ಇದು ಒಂದನ್ನಲ್ಲ. ಚೈತ್ರೋತ್ಸವ ಮತ್ತು ಪವಿತ್ರೋತ್ಸವ ಎಂಬ ಎರಡು ಉತ್ಸವಗಳನ್ನೂ ಸೂಚಿಸುತ್ತದೆ ಎಂದು ಸಿದ್ಧಾಂತ ಮಾಡಿದ್ದಾರೆ.

೨. ಕನ್ನಡ ಕವಿ ರನ್ನನು ನಿರೂಪಿಸಿರುವ ಚಾಳುಕ್ಯ ವಂಶ ವೃಕ್ಷ :—The Chalukyan genealogy as given by the Kannada Poet Ranna. (Ind. Ant. Vol. 40-Page 41) ಇದರಲ್ಲಿ ರನ್ನನ 'ಅಜಿತಪುರಾಣ' ಮತ್ತು 'ಸಾಹಸ ಭೀಮ ವಿಜಯ' ಗಳಲ್ಲಿ ಕೊಟ್ಟಿರುವ ಚಾಳುಕ್ಯ ವಂಶವರ್ಣನೆಯನ್ನು ಶಾಸನೋಕ್ತಿಗಳಿಗೆ ಸಮನ್ವಯಮಾಡಿದೆ.

೩. ಭಾಮಹ ಮತ್ತು ದಂಡಿ :—(Bhamaha and Dandi:-) (Ind. Ant. 45-Page 90) ಆಚಾರ್ಯರು ೧೯೦೩ ರಲ್ಲಿ ಪ್ರಕಟಪಡಿಸಿದ

‘ಕಾವ್ಯಾವಲೋಕನ’ ದ ಅವತರಣಿಕೆಯಲ್ಲಿ ಮೊತ್ತ ಮೊದಲನೆಯ ಸಲ ಭಾಮಹನ ಹೆಸರನ್ನು ಸೂಚಿಸಿ ‘ಕಾವ್ಯಾವಲೋಕನ’ ದ ಕರ್ತೃವಾದ ನಾಗವರ್ಮನಿಗೆ ಭಾಮಹನು ಆಧಾರನೆಂದು ಹೇಳಿ ಅವನ ಕಾವ್ಯಾಲಂಕಾರಕ್ಕೆ ಸೂಚನೆಯನ್ನಿತ್ತರು. ಅಲ್ಲಿಯವರೆಗೆ ಅದರ ಅಸ್ತಿತ್ವವೇ ಯಾರಿಗೂ ಗೊತ್ತಿರಲಿಲ್ಲ. ಮುಂದೆ ಪ್ರೊ. ರಂಗಾಚಾರ್ಯರು ಒಂದು ಕೈಬರಹದ ಪ್ರತಿಯ ಆಧಾರದ ಮೇಲೆ ಭಾಮಹನು ರಕ್ರಿಲಗೋಸ್ವಾಮಿಯ ಪುತ್ರನೆಂದೂ ಬೌದ್ಧಲರಿಪ ಮತದಂತೆ ಶಾಸ್ತ್ರೀರದವನಿರಬೇಕೆಂದೂ ಅವನ ಕಾಲವು ಸುಮಾರು ಕ್ರಿ.ಶ. ೬ ನೆಯ ಶತಮಾನವಿದ್ದಿರಬಹುದೆಂದೂ ಬರೆದಿದ್ದರು. ಅಂದಿನಿಂದೀಚೆಗೆ ಪಂಡಿತರು ಆತನ ಮತ್ತು ಆತನ ಕೃತಿಗಳ ವಿಚಾರವಾಗಿ ವಿಚಾರಮಾಡಿದ್ದಾರೆ. ಎಂ. ಟಿ. ನರಸಿಂಹಯ್ಯಂಗಾರ್, ಕಾಣೆ, ಪಾಠಕ್ ಮೊದಲಾದವರು ದಂಡಿಯು ಭಾಮಹನಿಗಿಂತ ಮೊದಲನೆಯವನೆಂದು ಅಭಿಪ್ರಾಯಪಟ್ಟಿದ್ದಾರೆ. ಅದಕ್ಕೆ ವಿರೋಧವಾಗಿ ಕೆ. ಪಿ. ತ್ರಿವೇದಿ, ಪ್ರೊ. ರಂಗಾಚಾರ್ಯರ ಮತ್ತು ಪಂಡಿತ ಅನಂತಾಚಾರ್ಯರು ಆಚಾರ್ಯರ ಪಕ್ಷವನ್ನು ಸಮರ್ಥಿಸಿ ದಂಡಿಗಿಂತ ಭಾಮಹನೇ ಪ್ರಾಚೀನನೆಂದು ಅಭಿಪ್ರಾಯಪಟ್ಟಿದ್ದಾರೆ. ಪ್ರೊ. ರಂಗಾಚಾರ್ಯರು ದಂಡಿಯ ‘ಕಾವ್ಯಾದರ್ಶ’ ವನ್ನು ತರುಣವಾಚಸ್ಪತಿ ಮತ್ತು ಇನ್ನೊಬ್ಬ ನಾಮನಿರ್ದೇಶವಿಲ್ಲದವನ ವ್ಯಾಖ್ಯಾನಗಳೊಡನೆ ಪ್ರಕಟಿಸಿದ್ದಾರೆ. ಅವುಗಳಲ್ಲಿ ಭಾಮಹನಿಗೆ ಸೂಚನೆಯಿರುವುದರಿಂದ ದಂಡಿಗಿಂತ ಭಾಮಹನು ಪ್ರಾಚೀನನೆಂಬುದು ಸ್ಪಷ್ಟ. ದಂಡಿಯ ಕಾಲವು ೬ ನೆಯ ಶತಮಾನವೆಂದು ಅಂಗೀಕೃತವಾಗಿದೆ. ಆದರೆ ಅದು ೭ ನೆಯ ಶತಮಾನವಿರಬಹುದು. ಅದಕ್ಕಿಂತ ಹಿಂದೆ ಭಾಮಹನು ಇದ್ದಿರಬೇಕು.

೪. ಶಂಕರಾಚಾರ್ಯ ಮತ್ತು ಬಲವರ್ಮ :—(Shankaracharya and Balavarma):—(Ind. Ant. 42-P. 53) ಮಿಥಿಕ್ ಸೊಸೈಟಿ ಪತ್ರಿಕೆಯ ೧೩ ನೆಯ ಸಂಪುಟದ ೩೦೮ ನೆಯ ಪುಟದಲ್ಲಿ ಡಿ. ಆರ್. ಭಂಡಾರಕರವರು ಶಂಕರಾಚಾರ್ಯರ ‘ವೇದಾಂತಸೂತ್ರಭಾಷ್ಯ’ ದಲ್ಲಿ ಬಲವರ್ಮನ ಹೆಸರು ಬರುವುದರಿಂದಲೂ ಆತನು ಕದಂಬರ ಶಾಸನದ ಪ್ರಕಾರ ೮ ನೆಯ ಶತಮಾನದ ಅಂತ್ಯದಲ್ಲಿ ಕಾಲವಾದನೆಂದು ತಿಳಿದು ಬರುವುದರಿಂದಲೂ ಶಂಕರಾಚಾರ್ಯರ ಕಾಲವೂ ಅದೇ ಇರಬೇಕೆಂದು ಊಹನೆ ಮಾಡಿದ್ದರು. ಆಚಾರ್ಯರು ಈ ವಿಷಯವನ್ನು ಕೂಲಂಕಷವಾಗಿ ವಿಚಾರಮಾಡಿ ಅದೇ ‘ವೇದಾಂತ ಸೂತ್ರಭಾಷ್ಯ’

ವಲ್ಲಿ ಬಲವರ್ಮನ ಜೊತೆಯಲ್ಲಿ ಉಕ್ತನಾಗಿರುವ ಜಯಸಿಂಹ, ಕೃಷ್ಣಗುಪ್ತ ಪೂರ್ಣವರ್ಮ ಎಂಬುವರ ಕಾಲ ಕದಂಬರ ಶಾಸನದ ಕಾಲಕ್ಕೆ ಹೊಂದದಿರುವುದಲ್ಲದೆ ಅವರ ಕಾಲವೇ ಅನಿರ್ದಿಷ್ಟವಾಗಿರುವುದರಿಂದ ಭಂಡಾರಕರ ನಿರ್ಧಾರವನ್ನು ಅಂತಿಮವನ್ನಾಗಿ ಅಂಗೀಕಾರ ಮಾಡಲಾಗುವುದಿಲ್ಲವೆಂದು ಸಿದ್ಧಾಂತಮಾಡಿದ್ದಾರೆ.

೫. ಪ್ರೊ. ಪಾಠಕರ ದಂಡಿ, ನ್ಯಾಸಕರ ಮತ್ತು ಭಾಮಹರ ವಿಷಯದ ಲೇಖನ ಸಂಬಂಧವಾದ ಕೆಲವು ಟೀಕೆಗಳು (A few remarks on Prof. Pathak's Paper on Dandi, the Nyasakara and Bhamaha (Ind-Ant. 42–P. 214) ಈ ವಿಷಯಕವಾಗಿ ಪ್ರೊ. ಪಾಠಕರು ತಮ್ಮ ವಿಷಯವನ್ನು ಇಂಡಿಯನ್ ಅಂಟಿಕ್ವೆರಿ ಪತ್ರಿಕೆಯಲ್ಲಿ (41–P.232) ಪ್ರಕಟಿಸಿ ಅದರಲ್ಲಿ ಆರ್. ನರಸಿಂಹಾಚಾರ್ಯರು ನ್ಯಾಸ ಶಬ್ದಕ್ಕೆ ಪೂಜ್ಯಪಾದನ ಪಾಣಿನೀಯ ವ್ಯಾಖ್ಯಾನವೆಂದು ತಿಳಿಸಿದ್ದಾರೆಂದೂ ಅದು ಹೆಬ್ಬೂರು ಶಾಸನದಿಂದ ತಿರಸ್ಕೃತವಾಗಿದೆಯೆಂದೂ ಬರೆದಿದ್ದರು. ಆಚಾರ್ಯರು ಇದನ್ನು ಖಂಡಿಸಿ ತಾವು ಉದಹರಿಸಿರುವುದು ಹೆಬ್ಬೂರು ಶಾಸನದಲ್ಲಿ ಉಕ್ತನಾಗಿರುವ ದುರ್ವಿನೀತನ 'ನ್ಯಾಸ'ವೆಂಬ ಗ್ರಂಥಕ್ಕೇ ಸಂಬಂಧಿಸಿರುವುದೆಂದು ತಿಳಿಸಿರುವುದಲ್ಲದೆ ಪಾಠಕರು ಹೇಳಿರುವಂತೆ ಬೌದ್ಧನಲ್ಲವೆಂದೂ ತೀರ್ಮಾನಿಸಿದ್ದಾರೆ.

೬. ಕಾಯಥ :—Kayatha : (Ind. Ant. 44–P. 11) ಕಾಯಥ ಎಂಬುದು ಕೆ. ಪಿ. ಲಿಯವರು ಸೂಚಿಸಿರುವಂತೆ 'ಕಾಯಸ್ಥ' ಎಂಬ ಶಬ್ದದಿಂದ ಬಂದುದಲ್ಲ. ಕಾಗದದ ಅಪಭ್ರಂಶವೆಂದು ಈ ಟಿಪ್ಪಣಿಯಲ್ಲಿ ವಿಶದಪಡಿಸಿದ್ದಾರೆ.

೭. ಷಾಂಡಿ :—Shandy : (Ind. Ant. 44–P. 132) ಡಾ. ಹುಲ್ಷ್ ಅವರು ಇಂಡಿಯನ್ ಅಂಟಿಕ್ವೆರಿ ಪತ್ರಿಕೆಯ ೪೩ ನೆಯ ಸಂಪುಟದ ೧೫೫ ನೆಯ ಪುಟದಲ್ಲಿ ತಮಿಳಿನ ಶಂಡೈ (ಸಂತೆ) ಎಂಬುದಕ್ಕೆ ಸಂಸ್ಕೃತ 'ಸಂಧಾ' ಎಂಬ ಶಬ್ದವು ಮೂಲವೆಂದು ಸೂಚಿಸಿದ್ದರು. ಆಚಾರ್ಯರು ಅದನ್ನು ನಿರಾಕರಿಸಿ ದ್ರಾವಿಡಭಾಷಾಪ್ರಯೋಗ ಮತ್ತು ವ್ಯಾಕರಣಗಳ ಆಧಾರದ ಮೇಲೆ ಅದು 'ಸಂಸ್ಥಾ' ಎಂಬ ಸಂಸ್ಕೃತ ಶಬ್ದದ ತದ್ಭವವೆಂದು ನಿರ್ಧಾರಮಾಡಿದ್ದಾರೆ.

೮. ಮಾಧವಾಚಾರ್ಯರೂ ಅವರ ತಮ್ಮಂದಿರೂ:—Madha-

vacharya and his younger brothers (Ind. Ant. 45-P. 1-17) Ref. M.A.R. 1900 Paras 53, 83 and Para 94 of 1909— ಬರ್ನೆಲ್ ಪ್ರಕಾರ ಸಾಯಣ ಮಾಧವ ವಿದ್ಯಾರಣ್ಯರು ಏಕ ವ್ಯಕ್ತಿಯೆಂದು ಅಂಧ ಪರಂಪರೆಯಿಂದ ಅಂಗೀಕೃತವಾಗಿತ್ತು. ಎಲ್. ಡಿ. ಬಾರ್ನೆಟ್ ಆಚಾರ್ಯರನ್ನು ಈ ವಿಷಯವಾಗಿ ಒಂದು ಲೇಖನವನ್ನು ಬರೆಯಬೇಕೆಂದು ಒತ್ತಾಯಪಡಿಸಿದನು. ಆ ಪ್ರಾರ್ಥನೆಗನುಗುಣವಾಗಿ ಆಚಾರ್ಯರು ಶೃಂಗೇರಿ ಮಠದ ಪಟ್ಟಿಕೆಗಳು, ಸನ್ನದುಗಳು, ಗುರುಪರಂಪರೆ, ಆ ಕಾಲದ ಅನೇಕ ಶಾಸನಗಳು, ಕೃತಿಗಳು ಮತ್ತು ಜನಜನಿತವಾದ ಲೋಕವಾರ್ತೆ ಮೊದಲಾದುವುಗಳನ್ನು ಕೂಲಂಕಷವಾಗಿ ಅಭ್ಯಾಸಮಾಡಿ ವಿದ್ಯಾರಣ್ಯ ಮತ್ತು ಮಾಧವ ಮಂತ್ರಿಗಳ ತಾಯಿ ತಂದೆಯರು, ಗುರು ಪರಂಪರೆ, ಕೃತಿಗಳು, ರಾಜಾಶ್ರಯ, ಶಾಸನಗಳು, ಗಳಿಸಿದ ಪತ್ರಿಗಳು, ಜೀವಿಸಿದ ಆಯುಸ್ಸು, ವೈಯಕ್ತಿಕ ಸ್ವಭಾವಗಳು, ಸಂಬೋಧಿತವಾಗಿರುವ ರೀತಿ ಮೊದಲಾದುವು ತೀರ ಭಿನ್ನವಾಗಿರುವುದರಿಂದ ವಿದ್ಯಾರಣ್ಯ ಮತ್ತು ಮಾಧವ ಮಂತ್ರಿಗಳು ಭಿನ್ನ ವ್ಯಕ್ತಿಗಳೆಂದು ಸ್ಪಷ್ಟವಾಗಿ ಸಿದ್ಧಾಂತ ಮಾಡಿರುವರಲ್ಲದೆ ವಿದ್ಯಾರಣ್ಯರ ತಮ್ಮಂದಿರಾದ ಸಾಯಣ ಭೋಗನಾಥರ ವಿಷಯವಾಗಿಯೂ ಅವರ ಆಶ್ರಯದಾತರಾದ ಹರಿಹರ ಮತ್ತು ಬುಕ್ಕರ ತಮ್ಮಂದಿರ ವಿಷಯವಾಗಿಯೂ ವೇದಭಾಷ್ಯದ ರಚನೆಯಲ್ಲಿ ಸಾಯಣರಿಗೆ ಸಹಾಯ ಮಾಡಿದ ಇತರ ಪಂಡಿತರ ವಿಷಯದಲ್ಲಿಯೂ ಬಹುದೀರ್ಘವಾದ ವಿವರಣೆಗಳನ್ನು ಕೊಟ್ಟಿದ್ದಾರೆ. ಇದಕ್ಕೆ ಹಿಂದೆಯೇ ಆಚಾರ್ಯರು 'ಸರ್ವ ದರ್ಶನ ಸಂಗ್ರಹ' ಕಾರನು ಇವರಿಬ್ಬರಿಗಿಂತಲೂ ಭಿನ್ನನೆಂಬುದನ್ನು ಖಚಿತಪಡಿಸಿದ್ದರು. ಆಚಾರ್ಯರ ಲೇಖನದ ಮೇಲೆ ಟೀಕೆ ಮಾಡಿದ ಸುಬ್ರಹ್ಮಣ್ಯ ಅಯ್ಯರ್ ಮೊದಲಾದವರಿಗೆ ಸೂಕ್ತ ಸಮಾಧಾನಗಳನ್ನು ಕೊಟ್ಟಿರುವುದನ್ನು ಹಿಂದೆಯೇ ತಿಳಿಸಿದೆ. ಇದಲ್ಲದೆ ಎಪಿಗ್ರಾಫಿಯಾ ಇಂಡಿಕಾ ಪತ್ರಿಕೆಯಲ್ಲಿ ಎಲ್. ಡಿ. ಬಾರ್ನೆಟ್ ಪ್ರಕಟಿಸಿದ ಕುರುಕೋಡು ಶಾಸನ, ಮಾಡಗಿಹಾಳ್ ಮತ್ತು ಕುಟಿನೂರು ಶಾಸನಗಳು ಇವುಗಳಲ್ಲಿ ಕಂಡುಬಂದ ಅನೇಕ ದೋಷಗಳನ್ನು ಸರಿಪಡಿಸಿದ್ದಾರೆ. ಈ ತಿದ್ದುಪಡಿಗಳನ್ನೆಲ್ಲಾ ಬಾರ್ನೆಟ್ ಆ ಪತ್ರಿಕೆಯ ೧೪, ೧೫, ೧೬ ನೆಯ ಸಂಪುಟಗಳಲ್ಲಿ ಅಂಗೀಕಾರ ಮಾಡಿ ಪ್ರಕಟಿಸಿದ್ದಾರೆ.

ಆಚಾರ್ಯರ ಗೌರವ ಪ್ರಶಸ್ತಿಗಳು :—ಮೇಲೆ ಸೂಚಿಸಿದಂತೆ

ದೇಶ ವಿದೇಶದ ಪಂಡಿತರನೇಕರು ಆಚಾರ್ಯರ ಬುದ್ಧಿವೈಶಾಲ್ಯವನ್ನು ಕಾರ್ಯದಕ್ಷತೆಯನ್ನೂ ಕೃತಿವೈಶಾಲ್ಯಗಳನ್ನೂ ಸ್ವಯುಕ್ತವಾಗಿ ಮುಕ್ತಕಂಠದಿಂದ ಹೊಗಳಿದರು. ಪಟ್ಟದಿ ಆ ವಿಷಯವಾಗಿ 'ಟೈಮ್ಸ್ ಆಫ್ ಇಂಡಿಯ', 'ಮದ್ರಾಸ್ ಮೈಲ್', 'ರಾಯಲ್ ಏಷ್ಯಾಟಿಕ್ ಸೊಸೈಟಿಯ ಪತ್ರಿಕೆ' ಮೊದಲಾದುವುಗಳಲ್ಲಿ ಅವರ ವಿಷಯವಾಗಿ ಅನೇಕ ಪ್ರಶಂಸೆಗಳು ಹೊರಬಿದ್ದುವು. ಇವುಗಳ ಫಲವಾಗಿ ಅವರ ಕೀರ್ತಿ ಸರ್ವವ್ಯಾಪಿಯಾಯಿತು. ಅವರಿಗೆ ವಿವಿಧವಿಧವಾದ ಗೌರವ ಪ್ರಶಸ್ತಿಗಳು ಸಲ್ಲಲಾರಂಭವಾದುವು. ೧೯೦೭ರಲ್ಲಿ ಅವರು ರಾಯಲ್ ಏಷ್ಯಾಟಿಕ್ ಸೊಸೈಟಿಯ ಸದಸ್ಯರಾಗಿ ಆರಿಸಲ್ಪಟ್ಟರು. ೧೯೧೩ರಲ್ಲಿ ಮೈಸೂರು ಮಹಾರಾಜರವರಿಂದ 'ಪ್ರಾಕ್ತನ ವಿಮರ್ಶ ವಿಚಕ್ಷಣ' ಎಂಬ ಗೌರವವು ಸೂಕ್ತ ಮರ್ಯಾದೆಗಳೊಡನೆ ದಯಪಾಲಿತವಾಯಿತು. ಈ ಸಂದರ್ಭದಲ್ಲಿ ನಡೆದ ಒಂದು ಘಟನೆಯು ಬಹು ಸ್ವಾರಸ್ಯವಾಗಿದೆ. ಅದಕ್ಕೆ ಹಿಂದಿನ ವರ್ಷ ಮೈಸೂರಿನ ಯುವರಾಜರಾದ ಕಂಠೀರವ ನರಸಿಂಹರಾಜ ಒಡೆಯರವರು ತಮ್ಮ ಐರೋಪ್ಯ ಪ್ರವಾಸದಲ್ಲಿ ಜರ್ಮನಿಯ ಹೋಟೆಲೊಂದರಲ್ಲಿ ತಮ್ಮ ಪರಿಚಯವನ್ನು ತಿಳಿಸುವಾಗ ತಾವು ಮೈಸೂರಿನ ಯುವರಾಜರೆಂದು ಸೂಚಿಸಿದರಂತೆ. ಅಲ್ಲಿಯವರಿಗೆ ಮೈಸೂರಿನ ಪರಿಚಯವಾಗಲಿಲ್ಲ. ಅಲ್ಲಿದ್ದ ವಿದ್ವಾಂಸನೊಬ್ಬನು 'ಮೈಸೂರೆಂಬುದು ಆರ್. ನರಸಿಂಹಾಚಾರ್ಯರ ಮೈಸೂರೇ?' ಎಂದು ಪ್ರಶ್ನೆ ಮಾಡಿದನಂತೆ. ಯುವರಾಜರಿಗೆ ನರಸಿಂಹಾಚಾರ್ಯರ ಪರಿಚಯವೂ ಇರಲಿಲ್ಲ. ಅವರು ಆ ವಿದ್ವಾಂಸನಿಗೆ ಸರಿಯಾದ ಉತ್ತರ ಕೊಡಲು ಸಾಧ್ಯವಾಗಲಿಲ್ಲ. ಇಷ್ಟು ಪ್ರಸಿದ್ಧರಾಗಿರುವ ತಮ್ಮ ಮೈಸೂರಿನ ವ್ಯಕ್ತಿ ಯಾರಿರಬಹುದೆಂದು ತಿಳಿಯಲು ಅವರಿಗೆ ಕುತೂಹಲವು ಹುಟ್ಟಿತು. ಅವರು ಸ್ವದೇಶಕ್ಕೆ ಹಿಂತಿರುಗಿದ ಮೇಲೆ ನರಸಿಂಹಾಚಾರ್ಯರ ವಿಷಯವನ್ನು ತಿಳಿದುಕೊಂಡು ಬೆಂಗಳೂರಿನಲ್ಲಿದ್ದ ಅವರ ಮನೆಗೆ ತಾವೇ ಪ್ರತ್ಯಕ್ಷವಾಗಿ ಹೋಗಿ ವಿದೇಶದಲ್ಲಿ ಅವರಿಗಿದ್ದ ಖ್ಯಾತಿಯ ವಿಷಯದಲ್ಲಿ ತಮ್ಮ ಮೆಚ್ಚಿಗೆಯನ್ನು ಸೂಚಿಸಿ ಆ ಘಟನೆಯನ್ನು ತಮ್ಮ ಅಣ್ಣಂದಿರಿಗೆ ತಿಳಿಯಪಡಿಸಿದರಂತೆ. ಅದರಿಂದ ಸಂತುಷ್ಟರಾದ ಶ್ರೀ ಮನ್ಮಹಾರಾಜರು ಮೇಲಿನ ಪ್ರಶಸ್ತಿಯನ್ನು ದಾನ ಮಾಡಿದರಂತೆ. ಈ ವಿಷಯವನ್ನು ಶ್ರೀ ಮುದ್ದಣ್ಣಾಚಾರರವರೇ ತಾವು ಸೆಂಟ್ರಲ್ ಕಾಲೇಜಿನ ಉತ್ಸವವೊಂದರಲ್ಲಿ ಭಾಗವಹಿಸಿದ್ದಾಗ ಪ್ರಕಾಶಪಡಿಸಿದರು. ಇದರಿಂದ ಆಚಾರ್ಯರ ಕೀರ್ತಿ ವಿದೇಶಗಳಲ್ಲಿ ಎಷ್ಟು ವ್ಯಾಪ್ತಿಯಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

೧೯೧೬ ರಲ್ಲಿ ಕೇಂದ್ರ ಬ್ರಿಟಿಷ್ ಸರ್ಕಾರದವರು ಆಚಾರ್ಯರಿಗೆ 'ರಾವ್ ಬಹದ್ದೂರ್' ಎಂಬ ಪ್ರಶಸ್ತಿಯನ್ನು ದಾನಮಾಡಿದರು. ೧೯೧೪ ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಒಂದು ಇತಿಹಾಸದ ಪ್ರಾಧ್ಯಾಪಕಸ್ಥಾನ ಹೊಸದಾಗಿ ಸ್ಥಾಪಿತವಾಯಿತು. ಆ ಸ್ಥಾನಕ್ಕೆ ಆಚಾರ್ಯರೇ ಯೋಗ್ಯವ್ಯಕ್ತಿಯೆಂದು ಅಂಗೀಕಾರವಾಗಿ ಅವರನ್ನು ಕಳುಹಿಸಿಕೊಡಬೇಕೆಂದು ಬ್ರಿಟಿಷ್ ರೆಸಿಡೆಂಟರನ್ನು ಪ್ರಾರ್ಥಿಸಲಾಯಿತು. ಆಚಾರ್ಯರ ಯೋಗ್ಯತೆಯನ್ನು ಇಲಾಖೆಯಲ್ಲಿ ಅವರ ಆವಶ್ಯಕತೆಯನ್ನೂ ಅರಿತಿದ್ದ ಅನೇಕರು ಆ ವಿಷಯದಲ್ಲಿ ಆತಂಕಗೊಂಡಿದ್ದರು. ಆದರೆ ಅವರ ಕಾರ್ಯ ಮಹತ್ವವನ್ನು ಮನಗಂಡಿದ್ದ ಮಹಾರಾಜರವರು ಅವರನ್ನು ಬಿಟ್ಟು ಕೊಡಲು ಸಮ್ಮತಿಸಲಿಲ್ಲವಾಗಿ ಅವರು ಮೈಸೂರಿನಲ್ಲಿಯೇ ಉಳಿದು ವಿಶ್ರಾಂತರಾಗುವವರೆಗೆ ಮೈಸೂರಿನ ಸೇವೆಯಲ್ಲಿಯೇ ನಿರತರಾಗುವ ಭಾಗ್ಯವು ದೊರೆಯಿತು.

೧೯೧೮ ರಲ್ಲಿ ಆಚಾರ್ಯರು ಧಾರವಾಡದಲ್ಲಿ ನಡೆದ ಕರ್ಣಾಟಕ ಸಾಹಿತ್ಯ ಪರಿಷತ್ತಿನ ನಾಲ್ಕನೆಯ ಸಮ್ಮೇಳನದಲ್ಲಿ ಅಧ್ಯಕ್ಷ ಪೀಠವನ್ನಲಂಕರಿಸಿ ಅಮೋಘವಾದ ಭಾಷಣವನ್ನು ಮಾಡಿದರು. ಅದರಲ್ಲಿ ಅವರು ಕನ್ನಡನಾಡು ನುಡಿಗಳ ಪ್ರಾಚೀನತೆ, ವಾಣಿಜ್ಯ, ಶಿಲ್ಪ, ಕನ್ನಡಕ್ಕೆ ರಾಜಾಶ್ರಯ, ರಾಜಕವಿಗಳು, ಕವಿಗಳ ಜನ್ಮಸ್ಥಾನ, ನುಡಿಯ ಸದ್ಯಸ್ಥಿತಿ ಮತ್ತು ಏಳಿಗೆಯ ಉಪಾಯಗಳು ಮೊದಲಾದುವುಗಳನ್ನು ಬಹು ಹೃದಯಂಗಮವಾಗಿ ವಿವರಿಸಿದ್ದಾರೆ. ೧೯೧೯ರಲ್ಲಿ ಆಚಾರ್ಯರು ಪೂನಾಪಟ್ಟಣದಲ್ಲಿ ನಡೆದ ಪ್ರಥಮ ಪ್ರಾಚ್ಯವಿದ್ಯಾ ಸಮ್ಮೇಳನಕ್ಕೆ (Oriental Conference) ಮೈಸೂರು ಸರ್ಕಾರದ ಪ್ರತಿನಿಧಿಯಾಗಿ ಆರಿಸಲ್ಪಟ್ಟರು. ಈ ಸಮ್ಮೇಳನದಲ್ಲಿ ಆಚಾರ್ಯರು ಕನ್ನಡನಾಡು ಮತ್ತು ನುಡಿಯನ್ನು ಕುರಿತು ದೀರ್ಘವಾದ ಭಾಷಣವನ್ನು ಮಾಡಿದರು. ಇದನ್ನು ಅಲ್ಲಿಯ ಪ್ರತಿನಿಧಿಗಳನೇಕರು ಬಹು ವಿಧವಾಗಿ ಶ್ಲಾಘಿಸಿದರು. ಪೂನೆಯಲ್ಲಿರುವಾಗ ಅಲ್ಲಿಯ ಚತುಶ್ಶೃಂಗೀ ಮತ್ತು ಪಾರ್ವತೀ ಪರ್ವತಗಳನ್ನು ಸಂದರ್ಶಿಸಿದರು. ಅಲ್ಲಿಯ ಶಾಸನಗಳನ್ನೆಲ್ಲ ಶೋಧಿಸಿದರು. ಆ ಸಂದರ್ಭದಲ್ಲಿ ಸರ್ಕಾರದವರು ಆಚಾರ್ಯರಿಗೆ ಉತ್ತರ ಭಾರತದಲ್ಲಿ ೧೫ ದಿನಗಳು ಪ್ರವಾಸ ಮಾಡುವುದಕ್ಕೆ ಅನುಮತಿಯಿತ್ತಿದ್ದುದರಿಂದ ಅವರು ಕಾರ್ಲೆ, ಎಲಿಫೆಂಟಾ, ಕನ್ಹೇರಿ, ನಾಸಿಕ್ ಮೊದಲಾದ ಗುಹೆಗಳನ್ನೂ ಅಜಂತೆಯ ಅವಶೇಷಗಳನ್ನೂ ಸಂದರ್ಶಿಸಿ ಅಲ್ಲಿಯ ಪ್ರಾಚೀನ ಐತಿಹಾಸಿಕ

ವಿಷಯಗಳನ್ನು ಸಂಗ್ರಹಿಸಿ ಅವುಗಳ ವಿಷಯಗಳನ್ನು ತಮ್ಮ ೧೯೨೦ನೆಯ ವರ್ಷದ ವರದಿಯಲ್ಲಿ ಪ್ರಕಟಿಸಿದ್ದಾರೆ.

ದ್ವಿತೀಯ ಸಮ್ಮೇಳನವು ೧೯೨೨ನೆಯ ಜನವರಿ ತಿಂಗಳಲ್ಲಿ ಕಲ್ಕತ್ತೆಯಲ್ಲಿ ನಡೆಯಿತು. ಆ ಸಮ್ಮೇಳನದ ಇತಿಹಾಸ ಮತ್ತು ಪ್ರಾಚ್ಯ ವಿದ್ಯಾಭಾಗಕ್ಕೆ ನರಸಿಂಹಾಚಾರ್ಯರು ಅಧ್ಯಕ್ಷರಾಗಿ ಚುನಾಯಿತರಾದರು. ಇವರು ಕಲ್ಕತ್ತೆಗೆ ತೆರಳಿ ಅಧ್ಯಕ್ಷಪೀಠವನ್ನಲಂಕರಿಸಿ 'ತಲಕಾಡಿನ ಪಶ್ಚಿಮ ಗಂಗರು' ಎಂಬ ವಿಷಯವಾಗಿ ವಿದ್ವತ್ಪೂರ್ಣವಾದ ಭಾಷಣವನ್ನು ಅಲ್ಲಿ ಮಾಡಿದರು. ಈ ಸಲ ಸರ್ಕಾರದವರು ಸುತ್ತುಮುತ್ತಲಿನ ಸ್ಥಳಗಳನ್ನು ಸಂದರ್ಶಿಸಲು ಅವಕಾಶವನ್ನು ಕೊಡಲಿಲ್ಲ. ಆದರೂ ಆಚಾರ್ಯರು ೧೫ ದಿನದ ಸ್ವಂತ ವಿರಾಮವನ್ನು ಪಡೆದು ಕಾಶಿ, ಸಾರನಾಥ, ಪ್ರಯಾಗ, ಅಯೋಧ್ಯೆ, ಗಯೆ, ಬುದ್ಧಗಯೆ, ಭುವನೇಶ್ವರ, ಖಂಡಗಿರಿ, ಬೈಜನಾಥ ಮೊದಲಾದ ಸ್ಥಳಗಳಿಗೆ ಭೇಟಿಯಿತ್ತು ಪ್ರಾಚೀನ ಸಂಸ್ಕೃತಿಗೆ ಸಂಬಂಧಪಟ್ಟ ವಿಷಯಗಳನ್ನೆಲ್ಲ ಸಂದರ್ಶಿಸಿ ಅವುಗಳನ್ನು ತಮ್ಮ ೧೯೨೨ನೆಯ ವರ್ಷದ ವರದಿಯಲ್ಲಿ ಪ್ರಕಟಿಸಿದರು. ಈ ವಿಧ ಪ್ರವಾಸಗಳ ಕಾಲದಲ್ಲಿ ಸಂಗ್ರಹಿಸಿದ ವಿಷಯಗಳನ್ನೇ ಕೂಡಿಸಿ ಪ್ರಕಟಿಸಿದರೆ ಆ ಸ್ಥಳಗಳನ್ನು ಸಂದರ್ಶಿಸುವವರಿಗೆ ಸೂಕ್ತ ಮಾರ್ಗದರ್ಶಕ ಕೈಪಿಡಿಯಾಗುತ್ತದೆಂಬುದರಲ್ಲಿ ಸಂದೇಹವಿಲ್ಲ.

೧೯೨೪ರಲ್ಲಿ ಕಲ್ಕತ್ತದಲ್ಲಿರುವ 'ನಿಖಿಲ ಭಾರತ ಸಾಹಿತ್ಯ ಸಂಘ'ದವರು ಆಚಾರ್ಯರನ್ನು 'ಪ್ರಾಚ್ಯವಿದ್ಯಾ ವೈಭವ' ಎಂಬ ಬಿರುದಿನಿಂದ ಸನ್ಮಾನಿಸಿದರು. ೧೯೩೦ರಲ್ಲಿ ಆಚಾರ್ಯರಿಗೆ ತಮ್ಮ ಪ್ರೀತಿಪಾತ್ರವಾದ ಸೆಂಟ್ರಲ್ ಕಾಲೇಜಿನ ವಾರ್ಷಿಕೋತ್ಸವದ (ಹಳೆಯ ವಿದ್ಯಾರ್ಥಿ ಸಂಘದವರಿಂದ ಏರ್ಪಡಿಸಿದುದು) ಅಧ್ಯಕ್ಷ ಸ್ಥಾನಕ್ಕೆ ಕರೆಬಂದಿತು. ಆಚಾರ್ಯರು ಅದನ್ನು ಬಹು ಸಂತೋಷದಿಂದ ಸ್ವೀಕರಿಸಿ ಅಂದಿನ ತಮ್ಮ ಅಧ್ಯಕ್ಷ ಭಾಷಣದಲ್ಲಿ ತಮ್ಮ ಕಾಲದ ವಿದ್ಯಾಶಾಲೆಗಳ ಸ್ಥಿತಿ, ಸೆಂಟ್ರಲ್ ಕಾಲೇಜಿನ ಇತಿಹಾಸ, ತಮ್ಮ ವಿದ್ಯಾ ಗುರುಗಳು, ಪಾಠಪ್ರವಚನದ ರೀತಿ, ವಿದ್ಯಾರ್ಥಿಗಳಿಗೆ ವ್ಯಾಯಾಮ, ಸಂಸ್ಕೃತ, ದೇಶಭಾಷೆ, ಸ್ಥಳೀಯ ಇತಿಹಾಸ, ಸಮಾಜಸೇವೆ ಮೊದಲಾದುವುಗಳಲ್ಲಿರಬೇಕಾದ ಶ್ರದ್ಧೆ ಮೊದಲಾದುವುಗಳನ್ನು ಬಹು ವಿವರವಾಗಿ ತಿಳಿಯಪಡಿಸಿದ್ದಾರೆ.

ಆಚಾರ್ಯರಿಗೆ ಸಂಸ್ಕೃತ ಭಾಷೆಯ ವಿಷಯದಲ್ಲಿ ಅತ್ಯಧಿಕವಾದ ಪೂಜ್ಯತೆ ಮತ್ತು ಗೌರವಗಳಿದ್ದುವು. ಸ್ವತಃ ಅವರು ಆ ಭಾಷೆಯಲ್ಲಿ ಶ್ರೇಷ್ಠ ವಿದ್ವಾಂಸ

ರಾಗಿದ್ದರು. ಸಮಯ ಬಂದಾಗಲೆಲ್ಲ ಅದರ ಮೌಲ್ಯವನ್ನು ಪ್ರಚಾರ ಪಡಿಸಲು ಹಿಂಜರಿಯುತ್ತಿರಲಿಲ್ಲ. ಅವರು ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತ ಮಹಾ ಪಾಠಶಾಲೆಯ ಆಡಳಿತ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಜೋತ್ಪತ್ತಿ ಸಂವತ್ಸರದ ವಾರ್ಷಿಕ ಪಾರಿತೋಷಕವಿನಿಯೋಗ ಮಹೋತ್ಸವದಲ್ಲಿ (೧೮-೯-೧೯೩೧) ಅಗ್ರಾಸನವನ್ನಲಂಕರಿಸಿ ಆ ದಿನ ತಮ್ಮ ಭಾಷಣದಲ್ಲಿ ಅವರು ಸಂಸ್ಕೃತ ಭಾಷೆಯ ಪ್ರಯೋಜನ, ಅದರ ವ್ಯಾಪ್ತಿ, ವಿವಿಧ ಮತೀಯರಿಂದ ಸಂಸ್ಕೃತಕ್ಕೆ ಸಂದ ಸೇವೆ, ಮುಸಲ್ಮಾನರಿಂದ ರಚಿತವಾದ ಗ್ರಂಥಗಳು ಮತ್ತು ಅವುಗಳ ಭಾಷಾಂತರಗಳು, ಸಂಸ್ಕೃತ ಕವಯಿತ್ರಿಯರು ಮತ್ತು ಅವರ ಕಾಣಿಕೆ. ಪ್ರಾಚೀನ ಕಾಲದಲ್ಲಿ ವಿದ್ಯಾರ್ಥಿ ಉಪಾಧ್ಯಾಯರುಗಳಿಗಿದ್ದ ಅನ್ನವಸ್ತ್ರದ ಸೌಕರ್ಯಗಳು, ರಾಜಾಶ್ರಯ, ಮಠ ದೇವಾಲಯಗಳಲ್ಲಿ ನಡೆಯುತ್ತಿದ್ದ ಪಾಠ ಪ್ರವಚನಗಳು, ನಲಂದದಂತಹ ಪ್ರಾಚೀನ ಘಟಿಕಾಸ್ಥಾನಗಳ ವಿವರ, ಸಂಸ್ಕೃತ ಮೃತಭಾಷೆಯೆಂಬುದರ ಅರ್ಥ, ಚೀನಾ ಟಿಬೆಟ್ ಭಾಷೆಗಳಿಗೆ ಬಹು ಪ್ರಾಚೀನ ಕಾಲದಲ್ಲಿಯೇ ಪರಿವರ್ತಿತವಾದ ಸಂಸ್ಕೃತ ಗ್ರಂಥಗಳು, ಅವುಗಳ ಭಾಷಾಂತರದಿಂದ ಈಗ ಆಗಬಹುದಾದ ಪ್ರಯೋಜನ, ಪ್ರಕೃತ ಕಾಲದಲ್ಲಿ ಸಂಸ್ಕೃತಕ್ಕಾಗಿ ದುಡಿಯುತ್ತಿರುವ ವಿದೇಶೀಯ ಸಂಸ್ಥೆಗಳು, ಚಾಮರಾಜೇಂದ್ರ ಸಂಸ್ಕೃತ ಮಹಾ ಪಾಠಶಾಲೆಯ ಇತಿಹಾಸ, ಅಲ್ಲಿ ಶಿಕ್ಷಿತರಾದ ಉದ್ದಾಮ ಪಂಡಿತರು, ಸಂಸ್ಕೃತದ ಸದ್ಯಃಸ್ಥಿತಿ, ಮುಂದೆ ಕೈಗೊಳ್ಳಬೇಕಾದ ಕಾರ್ಯ ಮೊದಲಾದವುಗಳನ್ನು ಕುರಿತು ಬಹು ಪ್ರಬೋಧಕವಾಗುವ ರೀತಿಯಲ್ಲಿ ವಿವರಿಸಿದ್ದಾರೆ.

೧೯೩೪ ರಲ್ಲಿ ಇಂಡಿಯಾ ಗೌರ್ನಮೆಂಟಿನವರು ಆಚಾರ್ಯರಿಗೆ 'ಮಹಾ ಮಹೋಪಾಧ್ಯಾಯ' ಎಂಬ ಮಹತ್ಪ್ರಶಸ್ತಿಯನ್ನು ದಯಪಾಲಿಸಿದರು. ಈ ವರ್ಷವೇ ಬೆಂಗಳೂರಿನ ಮಿಥಿಕ್ ಸೊಸೈಟಿಯ ರಜತೋತ್ಸವದ ಅಧ್ಯಕ್ಷರಾಗಿ 'ಬೃಹದ್ಭಾರತ' ಎಂಬ ವಿಷಯವಾಗಿ ವಿದ್ವತ್ಪೂರ್ಣವಾದ ಭಾಷಣವನ್ನು ಮಾಡಿದರು. ಅದೇ ವರ್ಷ ಏಪ್ರಿಲ್ ತಿಂಗಳಲ್ಲಿ ನಡೆದ ವಿದ್ಯಾಶಾಲಾ ಸಂಘಿತ ಮಂಡಳಿಯ ಪ್ರಥಮವಾರ್ಷಿಕ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ ಅಧ್ಯಕ್ಷ ಪೀಠದಿಂದ ಸಂಸ್ಕೃತ ಸಾಹಿತ್ಯದ ಮೌಲ್ಯ, ಅದರ ವ್ಯಾಸಂಗದ ಆವಶ್ಯಕತೆ, ಅದರೊಡನೆ ಮತ್ತೊಂದು ದೇಶಭಾಷಾವ್ಯಾಸಂಗದ ಆವಶ್ಯಕತೆ ಮತ್ತು ಉಪಯುಕ್ತತೆ, ಎಲ್ಲ ಕೋಮಿನವರೂ ಆ ಭಾಷೆಯನ್ನು ಅಭ್ಯಾಸ ಮಾಡಲು ಕಂಡು

ಬರುವ ಸೂಕ್ಷ್ಮತೆ, ಪಂಡಿತ ಮಂಡಲಿಯವರು ಅಭ್ಯಾಸ ಮಾಡಬೇಕಾದ ಸಂಶೋಧನಾಸಕ್ತಿ, ಜಡತ್ವ ವಿಸರ್ಜನ, ಹೊಸದೃಷ್ಟಿ, ಕಾರ್ಯತತ್ಪರತೆ, ಮೊದಲಾದುವುಗಳನ್ನು ಕುರಿತ ಅರ್ಥಪೂರ್ಣವಾದ ಉಪದೇಶವನ್ನು ಅನುಗ್ರಹಿಸಿದರು. ಮರು ವರ್ಷ ಧರ್ಮಸ್ಥಳದಲ್ಲಿ ನಡೆದ 'ಸಕಲ ಧರ್ಮ ಸಮ್ಮೇಳನ'ದಲ್ಲಿ ಅಗ್ರಾಸನವನ್ನು ವಹಿಸಿ ಮತಸಾಮರಸ್ಯ ಮತ್ತು ಸಹಾನುಭೂತಿಯ ವಿಷಯದಲ್ಲಿ ವಿಚಾರಪೂರ್ಣವಾದ ವಿವರಣೆಗಳನ್ನಿತ್ತರು. ಅವರು ತಮ್ಮ ಆಜೀವ ಪರ್ಯಂತ ಸಂಶೋಧನಾಕಾರ್ಯದಲ್ಲಿ ನಿರತರಾಗಿ ದೃಷ್ಟಿನೋಟವು ಕಡಿಮೆಯಾದರೂ ಪಾರ್ಶ್ವದಿಂದ ಅಂಗಪಾಟವ ಗಳಿತವಾದರೂ ಹೊಸ ಹೊಸ ವ್ಯಾಸಂಗದಲ್ಲಿ ಆಸಕ್ತರಾಗಿಯೇ ಇದ್ದರು. ಅವರು ಕೊನೆಯವರೆಗೆ ಇಂಡಿಯಾ ಸರ್ಕಾರದ ಪ್ರಾಚ್ಯ ವಿದ್ಯಾಇಲಾಖೆ, ಏಷ್ಯಾಟಿಕ್ ಸೊಸೈಟಿ, ಹೈದರಾಬಾದಿನ ಪ್ರಾಚ್ಯವಿದ್ಯಾ ಸಮಿತಿ, ಪ್ಯಾರಿಸ್ಸಿನ ಪ್ರಾಚ್ಯ ಸಂಶೋಧನಾ ಸಂಸ್ಥೆ, ಬೆಂಗಳೂರಿನ ಮಿಥಿಕ್ ಸೊಸೈಟಿ ಮೊದಲಾದುವುಗಳ ಸಲಹೆಗಾರರಾಗಿದ್ದುಕೊಂಡು ಸೇವೆ ಸಲ್ಲಿಸಿದರು.

ಆಚಾರ್ಯರ ಕೃತಿಗಳು

ಕನ್ನಡ ಸಾಹಿತ್ಯಕ್ಕೆ ಆಚಾರ್ಯರು ಮಾಡಿದ ಸೇವೆ ಚಿರಸ್ಮರಣೀಯವಾದುದು. ಅವರು ಕನ್ನಡದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದರು. ಅವುಗಳಲ್ಲೆಲ್ಲ ಅವರ 'ಕರ್ಣಾಟಕ ಕವಿಚರಿತ್ರೆ'ಯ ಮೂರು ಸಂಪುಟಗಳು ಬಹು ಮುಖ್ಯವಾದುವು. ಓರಿಯಂಟಲ್ ಲೈಬ್ರರಿಯ ಎಸ್. ಜಿ. ನರಸಿಂಹಾಚಾರ್ಯರೂ ಆಚಾರ್ಯರೂ ೧೮೯೪ ರಲ್ಲಿ ಕವಿಚರಿತೆಯ ಮೊದಲನೆಯ ಭಾಗವನ್ನು ಪ್ರಾರಂಭಿಸಿ ೧೯೦೭ ರಲ್ಲಿ ಅದನ್ನು ಪ್ರಕಟಿಸಿದರು. ೧೯೦೭ ರಲ್ಲಿ ಎಸ್. ಜಿ. ನರಸಿಂಹಾಚಾರ್ಯರು ಸ್ವರ್ಗಸ್ಥರಾಗಲು ಆಚಾರ್ಯರೇ ಏಕಾಕಿಯಾಗಿ ಶ್ರಮಿಸಿ ೧೯೧೯ ರಲ್ಲಿ ದ್ವಿತೀಯ ಸಂಪುಟವನ್ನೂ ೧೯೨೯ ರಲ್ಲಿ ತೃತೀಯ ಸಂಪುಟವನ್ನೂ ಮುಗಿಸಿದರು. ಮೊದಲನೆಯ ಸಂಪುಟದಲ್ಲಿ ಎಂಟರಿಂದ ಹದಿನಾಲ್ಕನೆಯ ಶತಮಾನದ ವರೆಗಿನ ಕವಿಗಳ ವಿಷಯವೂ ಎರಡನೆಯದರಲ್ಲಿ ೧೫, ೧೬, ೧೭ ನೆಯ ಶತಮಾನಗಳ ಕವಿಗಳ ವಿಷಯವೂ ಮೂರನೆಯ ಸಂಪುಟದಲ್ಲಿ ೧೮–೧೯ನೆಯ ಶತಮಾನದ ಕವಿಗಳ ವಿಷಯವೂ ವಿಚಾರಿತವಾಗಿವೆ. ಈ ಮೂರು ಸಂಪುಟಗಳಿಂದ ೧೧೪೮ (೩೯೦ + ೩೪೪ + ೪೧೪) ಕವಿಗಳ ಪರಿಚಯ ಮಾಡಲಾಗಿದೆ. ಈ ಮೂರು ಸಂಪುಟಗಳೂ ಆಚಾರ್ಯರ ೩೫ ವರ್ಷಗಳ ಅವಿಚ್ಛಿನ್ನವಾದ ಶ್ರಮದ ಫಲ. 'ಕರ್ಣಾಟಕ ಕವಿಚರಿತ್ರೆ'ಯ ಮೊದಲನೆಯ ಸಂಪುಟದಲ್ಲಿ ಆರ್. ನರಸಿಂಹಾಚಾರ್ಯರೂ ಎಸ್. ಜಿ. ನರಸಿಂಹಾಚಾರ್ಯರೂ ಸಮಸಮವಾಗಿ ಶ್ರಮಿಸಿದ್ದಾರೆ. ಎಸ್. ಜಿ. ನರಸಿಂಹಾಚಾರ್ಯರ ಕೈವಾಡವು ಆ ಗ್ರಂಥದಲ್ಲಿ ಲೇಖನವಾಗಿರುವ ಪೂರ್ವ ಕವಿಗಳನ್ನು ಕುರಿತ ಯೋಗ್ಯತಾಸೂಚಕ ವಾಕ್ಯಗಳಲ್ಲಿ ಕಂಡುಬರುತ್ತದೆ. ಎರಡು ಮೂರು ಆರಿಸಿದ ಮಾತುಗಳಲ್ಲಿ ಕವಿಯ ವಿಶೇಷ ಗುಣವನ್ನು ಎತ್ತಿ ತೋರಿಸುವ ಸೂಕ್ಷ್ಮ ಗ್ರಹಣ ಕುಶಲತೆ ಎಸ್. ಜಿ. ನ. ಅವರದು. ಆರ್. ನರಸಿಂಹಾಚಾರ್ಯರದು ವಿಸ್ತಾರವಾದ ವಿದ್ವತ್ತು. ಅದ್ಭುತವಾದ ನಾನಾ ಗ್ರಂಥ ಪರಿಚಯ; ಅವರು ಸಂಸ್ಕೃತ ಕನ್ನಡ ತೆಲುಗು ತಮಿಳುಗಳನ್ನು ಆಳವಾಗಿ ಶೋಧಿಸಿ ನೋಡಿದ್ದವರು. ಎಸ್. ಜಿ. ನರಸಿಂಹಾಚಾರ್ಯರದಾದರೋ 'ರಸೈಕ ದೃಷ್ಟಿ' ಎಂಬುದಾಗಿ (ಜನಪ್ರಗತಿ ೨೫–೬–೫೫) ಶ್ರೀಮಾನ್ ಡಿ. ವಿ. ಗುಂಡಪ್ಪ

ನವರು ಆಚಾರ್ಯರ ಸ್ಮರಣೆಯನ್ನು ಮಾಡುತ್ತ ಹೇಳಿದ್ದಾರೆ. ಈ ಗ್ರಂಥದ ರಚನೆಯ ವಿಷಯವಾಗಿ ಆಚಾರ್ಯರೇ ಮೊದಲನೆಯ ಸಂಪುಟದ (೧೯೦೭) ಅವತರಣಿಕೆಯ ೧೭-೧೮ನೆಯ ಪುಟದಲ್ಲಿ ಹೀಗೆಂದು ತಿಳಿಸಿದ್ದಾರೆ. 'ಈ ಗ್ರಂಥ ರಚನೆಗಾಗಿ ನಾವು ಇಂಥ ನಾನೂರು ಐನೂರು ತಾಳಪತ್ರ ಪುಸ್ತಕಗಳನ್ನು (ಹುಳು ಹೊಡೆದುವು, ಮುರಿದು ಹೋದವು, ಗ್ರಂಥಪಾತವಾದುವು, ಹಲವಾರು ಪತ್ರಗಳಿಲ್ಲದುವು) ಅನುಕೂಲಾಗ್ರದಾಗ ಓದಿ ವಿಷಯಸಂಗ್ರಹಣ ಮಾಡಿದ್ದೇವೆ. ಇದರಲ್ಲಿ ನಾವು ಪಟ್ಟ ಶ್ರಮವು ಈ ವಿಧವಾದ ಕಾರ್ಯದಲ್ಲಿ ಪರಿಶ್ರಮಿಸಿದವರಿಗೆ ಮಾತ್ರವೇ ಗೊತ್ತಾಗುವುದು. ಆದರೂ ಕನ್ನಡ ಭಾಷಾಭಿಮಾನದಿಂದಲೂ ಕನ್ನಡಿಗರಿಗೆ ಈ ಭಾಷೆಯ ಪ್ರಾಚೀನತೆಯನ್ನೂ ಗ್ರಂಥ ಸಮೃದ್ಧಿಯನ್ನೂ ತಿಳಿಯಪಡಿಸಿ ತನ್ಮೂಲಕ ಇದರಲ್ಲಿ ಆದರಾತಿಶಯವನ್ನು ಉಂಟುಮಾಡಬೇಕೆಂಬ ತಾತ್ಪರ್ಯದಿಂದಲೂ ಅನೇಕ ವರ್ಷಗಳಿಂದ ಕನ್ನಡಭಾಷಾ ಗ್ರಂಥಗಳನ್ನು ಪರಿಶೀಲನೆ ಮಾಡಿಕೊಂಡು ಬಂದುದಕ್ಕೆ ಈ ವಿಧವಾದ ಭಾಷಾಸೇವೆ ಮಾಡುವುದು ನಮ್ಮ ಕರ್ತವ್ಯವೆಂಬ ಭಾವದಿಂದಲೂ ನಾವು ಯಾವ ಶ್ರಮವನ್ನೂ ಪರಿಗಣಿಸದೆ ಈ ಗ್ರಂಥವನ್ನು ಬರೆದಿದ್ದೇವೆ' ಎಂದು ತಿಳಿಸಿದ್ದಾರೆ. ಇಬ್ಬರೂ ಸೇರಿ ಈ ಮಹತ್ಕಾರ್ಯವನ್ನು ಬಹು ಯಶಸ್ವಿಯಾಗಿ ಸಾಧಿಸಿದ್ದಾರೆ. ಈ ಗ್ರಂಥ ರಚನೆಯಲ್ಲಿ ಗ್ರಂಥಕರ್ತರಿಬ್ಬರೂ ಅನುಸರಿಸಿದ ತಂತ್ರವನ್ನು ಅವರೇ ವಿಶದಪಡಿಸಿದ್ದಾರೆ. ಈ ಗ್ರಂಥದಲ್ಲಿ ಪ್ರತಿಯೊಬ್ಬ ಕವಿಯ ಚರಿತ್ರೆಯನ್ನು ಈ ಕ್ರಮದಲ್ಲಿ ಬರೆದಿದ್ದೇವೆ:—ಮೊದಲು ಕವಿಯ ಹೆಸರೂ ಅದರ ಪಕ್ಕದಲ್ಲಿ ವರ್ಷ ಸಂಖ್ಯೆಯೂ ಕೊಟ್ಟಿದೆ. ವರ್ಷ ಸಂಖ್ಯೆಗಳೆಲ್ಲ ಕ್ರಿಸ್ತಶಕಕ್ಕೆ ಅನ್ವಯಿಸಿರುತ್ತವೆ ಎಂಬುದನ್ನು ತಿಳಿಯಬೇಕು. ಈ ವರ್ಷ ಸಂಖ್ಯೆಯು ಸಾಧಾರಣವಾಗಿ ಗ್ರಂಥ ರಚನಾ ಕಾಲವನ್ನು ಸೂಚಿಸುತ್ತದೆ. ಕೆಲವು ಕಡೆ ಈ ಸಂಖ್ಯೆಯ ಹಿಂದೆ ಸುಮಾರು ಎಂಬರ್ಥವನ್ನು ಸೂಚಿಸುವಂತೆ 'ಸು' ಎಂಬಕ್ಷರವು ಬರೆದಿದೆ. ತರುವಾಯ ಕವಿಯ ದೇಶ, ಮತ, ಕುಲ, ಗುರು, ಪೋಷಕ, ಬಿರುದುಗಳು ಇವೇ ಮೊದಲಾದ ಜೀವನ ವೃತ್ತಾಂತದ ಅಂಶಗಳು ಹೇಳಿವೆ. ಅನಂತರ ವಿಚಾರಪೂರ್ವಕವಾಗಿ ಕಾಲನಿರ್ಣಯ ಮಾಡಿದೆ. ಆಮೇಲೆ ಆ ಕವಿಯನ್ನು ಸ್ತುತಿಸುವ ಇತರ ಕವಿಗಳ ಹೆಸರುಗಳು ಕೊಟ್ಟಿವೆ. ಅಲ್ಲಿಂದ ಮುಂದೆ ಕವಿಯು ಸ್ಮರಿಸುವ ಪೂರ್ವ ಕವಿಗಳ ಹೆಸರುಗಳು ಹೇಳಿವೆ. ಅನಂತರ ಕವಿಯು ತನ್ನ ಕವಿತಾ ಚಾತುರಿ, ಗುಣಗಳು ಮೊದಲಾದುವುಗಳನ್ನು

ಹೇಳಿಕೊಳ್ಳುವ ಪದ್ಯಗಳನ್ನು ಉದ್ಧರಿಸಿ ಬರೆದಿದೆ. ಬಳಿಕ ಆವಿಷ್ಕೃತವಾದ ಗ್ರಂಥಗಳನ್ನು ಒಂದೊಂದಾಗಿ ತೆಗೆದುಕೊಂಡು ಅದರ ಸ್ವರೂಪ, ಪ್ರತಿಪಾದ್ಯ ವಿಷಯ, ಕಥಾಗರ್ಭ, ಆಶ್ವಾಸಸಂಖ್ಯೆ, ಇಷ್ಟದೇವತಾಸ್ತುತಿ, ಗುರುಪರಂಪರೆ, ಗ್ರಂಥರಚನೆಗೆ ಕಾರಣ ಮೊದಲಾದುವುಗಳನ್ನು ವಿವರಿಸಿ ಬಳಿಕ ಆಶ್ವಾಸಾಂತ್ಯಗಳಲ್ಲಿ ದೊರೆಯುವ ಗದ್ಯಗಳನ್ನು ಉದ್ಧರಿಸಿ ಬರೆದಿದ್ದೇವೆ. ಅನಂತರ ಗ್ರಂಥದ ಬಂಧದ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಿ ಕವಿತೆಯ ಧೋರಣೆಯನ್ನು ತೋರಿಸುವುದಕ್ಕಾಗಿ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆದಿದ್ದೇವೆ. ಪ್ರಾಯಿಕವಾಗಿ ಈ ಕ್ರಮವನ್ನನುಸರಿಸಿ ಕವಿಗಳ ಚರಿತೆಯು ಬರೆಯಲ್ಪಟ್ಟಿದ್ದರೂ ಮೇಲೆ ತಿಳಿಸಿರುವ ಅಂಶಗಳೆಲ್ಲ ತಿಳಿದು ಬಾರದಿರುವ ಕೆಲಕೆಲ ಕವಿಗಳ ಚರಿತೆಯು ಯಥೋಚಿತವಾಗಿ ಸಂಕ್ಷೇಪಿಸಿ ಬರೆದಿದೆ. (ಕವಿಚರಿತೆ ಸಂ ೧, ೧೯೦೭, ಅವತರಣಿಕೆ ಪುಟ ೧೫, ೧೬).

ಇಷ್ಟು ಕಷ್ಟದಿಂದಲೂ ಎಚ್ಚರಿಕೆಯಿಂದಲೂ ನಿಷ್ಕೃಷ್ಟಸೂತ್ರದಿಂದಲೂ ರಚಿಸಿದ ಗ್ರಂಥವನ್ನು ಕುರಿತು ಸಂಶೋಧನಾ ಕಾರ್ಯದಲ್ಲಿರುವ ತೊಡಕುಗಳ ಅನುಭವವಿಲ್ಲದವರು ಕೆಲವು ಆಕ್ಷೇಪಗಳನ್ನೆತ್ತಿದರೆ ಮತ್ತೆ ಕೆಲವುಮಂದಿ ವಿದ್ವಾಂಸರೂ ಆಚಾರ್ಯರ ಕೆಲಸವನ್ನು ಕುರಿತು ಕೆಲವು ಟೀಕೆಗಳನ್ನು ಮಾಡಿದರು. ಆ ಟೀಕೆಗಳಿಗೆಲ್ಲ ಉತ್ತರ ಕೊಡಲು ಆಚಾರ್ಯರು ಪ್ರಯತ್ನಿಸಲಿಲ್ಲ. ಅದಕ್ಕೆ ಕಾರಣ ಸ್ಪಷ್ಟ. ಕವಿಗಳನ್ನು ಕುರಿತಾಗಲಿ ಕಾವ್ಯಗಳನ್ನು ಕುರಿತಾಗಲಿ ಎಲ್ಲ ಅಂಶಗಳೂ ಏಕಕಾಲದಲ್ಲಿ ಒಂದೆಡೆಯಲ್ಲಿ ಸಿಗುವುದಿಲ್ಲ. ಸಿಕ್ಕಿರುವುದೂ ಪೂರ್ಣವಾಗಿರುವುದಿಲ್ಲ. ಅಲ್ಲೊಂದು ಚೂರು, ಇಲ್ಲೊಂದು ಚೂರು ಹುಡುಕಿ ಜೋಡಿಸಿ ಸಮಂಜಸತೆಯನ್ನು ಸ್ಥಾಪಿಸಿ ಅರ್ಥಕೊಡುವಂತೆ ಒಂದು ಶಬ್ದ ಚಿತ್ರವನ್ನು ರೂಪಗೊಳಿಸಬೇಕಾಗುತ್ತದೆ. ಆರ್. ನರಸಿಂಹಾಚಾರ್ಯರ ಕೆಲಸಮಾತ್ರವಲ್ಲ. ಎಲ್ಲ ಸಂಶೋಧಕರನ್ನು ಕುರಿತು ಹೇಳಬೇಕಾದರೂ ಇಷ್ಟೆ. ಕಾಳಿದಾಸನನ್ನಾಗಲಿ, ಶಂಕರಾಚಾರ್ಯರನ್ನಾಗಲಿ ಕುರಿತ ಕಾಲವ್ಯವಸ್ಥೆಯಲ್ಲಿ ಇಂದಿಗೂ ಭಿನ್ನಾಭಿಪ್ರಾಯವಿದೆ. ಇಂತಹ ಶತಮಾನವೆಂಬುದೇ ಸ್ಪಷ್ಟವಾಗಿ ನಿರ್ಧಾರವಾಗಿಲ್ಲ. ಎಲ್ಲ ಆಕ್ಷೇಪಣೆಗಳಿಗೂ ಉತ್ತರಕೊಡುವ ಕಾರ್ಯದಲ್ಲಿ ಕೈಹಾಕದಿದ್ದರೂ ವೈಯಕ್ತಿಕವಾಗಿ ಬಾಣಪ್ರಯೋಗಮಾಡಿದ ಒಬ್ಬಿಬ್ಬರ ಟೀಕೆಗೆ, ಆಕ್ಷೇಪಣೆಗಳಿಗೆ ವಿಶೇಷವಾಗಿ ನೊಂದುಕೊಂಡು ಆಚಾರ್ಯರು ಸಮಾಧಾನ ಕೊಟ್ಟಿದ್ದಾರೆ. ವಾಗ್ಯುದ್ಧ

ದಲ್ಲಿ ಭಾಗವಹಿಸುವ ಶಕ್ತಿ ತಮಗಿಲ್ಲವೆಂದು ಹೇಳುತ್ತ, 'ಶ್ರೀಮಾನ್ ನಾರಾಯಣ ಶ್ರೀನಿವಾಸ ರಾಜಪುರೋಹಿತರು ಯುದ್ಧದಲ್ಲಿ ವಿಶೇಷವಾಗಿ ಅನ್ವಯಿಸಿ ಹಲವು ಅಭಿಪ್ರಾಯಗಳನ್ನು ಪ್ರಕಟಿಸಿದ್ದಾರೆ. ಆದರೆ ಇದರಿಂದ ಕನ್ನಡಿಗರಿಗೆ ವಿಶೇಷ ಪ್ರಯೋಜನವಾದಂತೆ ಕಾಣುವುದಿಲ್ಲ' ಎಂಬುದಾಗಿ ಹೇಳಿ ಮುಂದುವರಿದು ಶ್ರೀವಿಜಯ ಎಂಬ ಬಿರುದು ನೃಪತುಂಗನಿಗೆ ಉಂಟೆಂದು ತೋರಿಸುವುದಕ್ಕೆ ಶ್ರೀಮಾನ್ ರಾಜಪುರೋಹಿತರು

ವೀರಶ್ರೀ ವಿಜಯನ ಕೆ
ಯ್ಯಾರೆ ಸುರಾಂಗನೆಯ ಕೊಡೆಸೆ ಹರಸುವ ಬನಮುಂ
ಭೋರೆಂದೆಸಗುವ ಕುಸುಮಾ
ಸಾರದ ಬಳ್ಳಿಯನುಸೆಯೆ ಸಂಬರಕಳದೊಳ್

ಎಂಬ ಪದ್ಯವನ್ನು ಉದಹರಿಸಿದ್ದಾರೆ. (ಪರಿಷತ್ಪತ್ರಿಕೆ ಜುಲೈ ೧೯೩೩) ಈ ಪದ್ಯದಲ್ಲಿ ಶ್ರೀವಿಜಯ ಎಂಬ ಪದವೇ ಇಲ್ಲ. ವೀರಶ್ರೀ ಎಂಬುದು ಕರ್ತೃ. ವಿಜಯ ಎಂದರೆ ಅರ್ಜುನ. ವೀರಶ್ರೀ ಅರ್ಜುನನ ಕೈನೀಡಲು ಸುರಾಂಗನೆಯರು ಹರಸಿದರು. ಪುಷ್ಪವೃಷ್ಟಿಯಾಯಿತು ಎಂಬುದು ಈ ಪದ್ಯದ ಅರ್ಥ. ಎಂಬುದಾಗಿ ಗಾಂಭೀರ್ಯದಿಂದ ಸಮಾಧಾನಕೊಟ್ಟಿದ್ದಾರೆ. ಜೈನನಾದ ನೃಪತುಂಗನು ಬ್ರಾಹ್ಮಣ ಭಗವದ್ಗೀತೆಯ ಪದಗಳನ್ನಾರಿಸಿಕೊಂಡು ಅವುಗಳನ್ನೇ ತನ್ನ ಬಿರುದನ್ನಾಗಿ ಮಾಡಿಕೊಳ್ಳಲು ಕುತೂಹಲಿಯಾದುದಕ್ಕೆ ಕಾರಣಗೋಚರವಾಗುವುದಿಲ್ಲ ಎಂದು ತಿಳಿಸಿದ್ದಾರೆ.

'ವೀರಶೈವ ಧರ್ಮ ಪ್ರಕಾಶಿಕೆ' (೧೯೩೩) ಮತ್ತು ''ವಿಭಾಕರ' (ಜೂನ್ ೩೦-೧೯೩೩) ಎಂಬ ಪತ್ರಿಕೆಗಳು ವಸ್ತುಸ್ಥಿತಿಯನ್ನು ತಿಳಿಯದೆ ಅವರಮೇಲೆ ಕೆಲವು ದೋಷಾರೋಪಣೆಗಳನ್ನು ಮಾಡಿದುವು. ಮೊದಲನೆಯ ಪತ್ರಿಕೆಯಲ್ಲಿ 'ಶ್ರೀಮದ್ವೀರಶೈವಮತದ ಮೇಲೆ ಕರ್ನಾಟಕ ಕವಿಚರಿತ್ರೆಯ ಕಾರರು ಪರಮತದವರಾದ ಕಾರಣ ವಿಷವನ್ನು ಕಾರಿರುವರೆಂದು ವೀರಶಾಂತಯ್ಯ ಸಿದ್ಧಾಂತಿಮಠ ಎಂಬುವರು ತುಂಬ ಶ್ರಮವಹಿಸಿ ಶೋಧಿಸಿ ಕಳುಹಿಸಿರುವ ವಿಷಯಗಳನ್ನು ಓದಿದ ಎಂಥವರಿಗಾದರೂ ತಿಳಿಯದೇ ಇರಲಾರದು. ಇವರು ಕಷ್ಟಪಟ್ಟು ಪುರಾತನ ತಾಳೆವಾಲೆ ಗ್ರಂಥಗಳನ್ನು ಶೋಧಿಸಿ ಪರಮತದವರು ನಮ್ಮ ಮೇಲೆ ಕಾರಿರುವ ವಿಷಕ್ಕೆ ತಕ್ಕ ಔಷಧವನ್ನು ತಯಾರುಮಾಡುತ್ತಿರುವರು' ಎಂದು

ಪ್ರಕಾಶವಾಗಿತ್ತು. ಅದನ್ನು ನೋಡಿದ ಆಚಾರ್ಯರು ಬಹು ವಿಷಾದದಿಂದ ಈರೀತಿ ಸಮಾಧಾನ ಕೊಟ್ಟರು. 'ನಾನು ಕೆಲವರು ವೀರಶೈವ ವಚನಕಾರರ ಹೆಸರನ್ನು ಹೇಳಿಲ್ಲವೆಂಬುದಕ್ಕಾಗಿ ಈ ಕಠಿನೋಕ್ತಿಗಳು ಪ್ರಯೋಗವಾಗಿವೆ. ದ್ವಿತೀಯ ಸಂಪುಟವನ್ನು ಬರೆಯುವಾಗ ನಾನು ಸಾವಿರಾರು ಓಲೆಯ ಪುಸ್ತಕಗಳನ್ನು ಪರಿಶೋಧಿಸಿದೆನು. ಆದರೆ ಶ್ರೀಮದ್ ಶಾಂತವೀರಾಧ್ಯರಿಗೆ ಸಂಯೋಗದಿಂದ ಸಿಕ್ಕಿದಂತೆ ನನಗೂ ವಚನಕಾರರ ಹೆಸರನ್ನು ಸೂಚಿಸುವ ಪುಸ್ತಕವು ಸಿಕ್ಕಿದ್ದರೆ ಒಂದು ಹೆಸರನ್ನಾದರೂ ಬಿಡುತ್ತಿರಲಿಲ್ಲ. 'ಅನ್ಯಮತ' 'ವಿಷಕಾರುವುದು' ಎಂಬ ನುಡಿಗಳು ನನಗೆ ಬಹಳ ಖೇದಕರವಾಗಿವೆ. ಸಾಹಿತ್ಯ ಸಾಮ್ರಾಜ್ಯದಲ್ಲಿ ಮತ, ವರ್ಣ, ಸಿರಿ, ಬಡತನ ಮುಂತಾದ ಭಾವನೆಗಳಿಗೆ ಎಡೆಯೇ ಇಲ್ಲ. ವೀರಶೈವ ಕವಿಗಳ ಚರಿತೆಯಲ್ಲಿ ನಾನು ತೋರಿಸಿರುವ ನಿಷ್ಪಕ್ಷಪಾತತೆಗೆ ಅನೇಕ ವೀರಶೈವ ಮಹನೀಯರು ಆನಂದಿಸಿ ತಮ್ಮ ಮೆಚ್ಚಿಕೆಯನ್ನು ತಿಳಿಸಿದ್ದಾರೆ.' ಎಂದು ಉತ್ತರಿಸಿದರು. ಅನಂತರ 'ವಿಭಾಕರ' ಪತ್ರಿಕೆಯಲ್ಲಿ 'ರಾ. ನರಸಿಂಹಾಚಾರ್ಯರು ತಮಗೆ ಸಂಬಳ ದೊರೆಯುವುದೆಂದು ಪರಿಶ್ರಮಿಸಿ ಶೋಧನೆ ಮಾಡಿದರು. ಮತ್ತು ಆ ಗ್ರಂಥಕರ್ತರ (ವಚನಕಾರರ) ಹೆಸರು ಬರೆಯೋಣವೆಂದರೆ ವೀರಶೈವ ಕವಿಗಳ ಕೀರ್ತಿ ಹೆಚ್ಚಬಹುದೆಂತಲೋ ಏನೋ ಕಾರಣದಿಂದ ಬಿಟ್ಟಿರಬಹುದು' ಎಂದು ಬರೆದಿದ್ದುದಕ್ಕೆ ಪ್ರತ್ಯುತ್ತರವಾಗಿ 'ಈ ವಿಷಬಾಣಪ್ರಯೋಗಕ್ಕೆ ನಾನು ಸರ್ವಾತ್ಮನಾ ಪಾತ್ರನಲ್ಲ. ಕವಿಚರಿತ್ರೆಯನ್ನು ನಾನು ಸರಕಾರಕ್ಕಾಗಿ ಸಂಬಳವನ್ನು ಹೊಂದಿ ಬರೆದುದಿಲ್ಲ. ಭಾಷಾಸೇವೆಯನ್ನು ಮಾಡಬೇಕೆಂಬ ಉತ್ಕಟೇಚ್ಛೆಯಿಂದ ಶ್ರಮಪಟ್ಟು ಸ್ವಂತದ್ರವ್ಯವನ್ನು ವ್ಯಯಮಾಡಿ ಪ್ರಕಟಿಸಿದೆನು. ವಚನಕಾರರ ಅಂಕಿತಗಳನ್ನೆಲ್ಲ ಕೊಟ್ಟಿದ್ದೇನೆ. ಹೆಸರು ಆ ಕಾಲದಲ್ಲಿ ದೊರೆಯಲಿಲ್ಲವಾದುದರಿಂದ ಹೇಳಲಿಲ್ಲ. ಇಷ್ಟು ಮಾತ್ರಕ್ಕೆ ಮತ್ಸರಗ್ರಸ್ತನೆಂದು ಹೇಳುವುದು ಉಚಿತವೆ? ವೀರಶೈವ ಸಾಹಿತ್ಯ ಸಂಪತ್ತನ್ನು ಪ್ರಕಟಮಾಡುವುದರಲ್ಲಿ ಆವ ವೀರಶೈವನೂ ನನ್ನಷ್ಟು ಶ್ರಮಪಟ್ಟಿಲ್ಲ ಎಂದು ಧೈರ್ಯವಾಗಿ ಹೇಳಬಲ್ಲೆನು' (ಕರ್ನಾಟಕ ಕವಿಚರಿತ್ರೆ ಪ್ರ. ಸಂಪುಟ ೨೧-೨೨) ಎಂದು ಹೇಳಿ ಸಮಾಧಾನ ಕೊಟ್ಟರು. ಇದರ ಸತ್ಯಾಂಶವನ್ನು ಕಾಣಬೇಕಾದರೆ ಅವರು ಚಿತ್ರದುರ್ಗದ ಮುರುಘರಾಜೇಂದ್ರ ಮಠದಲ್ಲಿ ಮಾಡಿದ 'ಕನ್ನಡದ ವೀರಶೈವ ವಚನಕಾರರು' ಎಂಬ ಉಪನ್ಯಾಸವನ್ನು ಓದಬೇಕು. ಇದರಲ್ಲಿ ಅವರು ವಚನ

ಕಾರರು ಕನ್ನಡ ಸಾಹಿತ್ಯಕ್ಕೆ ಮಾಡಿರುವ ಅಪೂರ್ವ ಸೇವೆಯನ್ನು ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ.

ಎರಡನೆಯ ಸಲ ಕರ್ಣಾಟಕ ಕವಿ ಚರಿತ್ರೆಯ ಮೊದಲನೆಯ ಸಂಪುಟವನ್ನು ಪುನರ್ಮುದ್ರಣ ಮಾಡಿದಾಗ ಎಸ್. ಜಿ. ನರಸಿಂಹಾಚಾರ್ಯರ ಹೆಸರನ್ನೇ ಎತ್ತಲಿಲ್ಲವೆಂದು ಗೊಣಗಿದವರೂ ಕೆಲವರುಂಟು. ಅಂತಹವರಿಗೆ ಆಚಾರ್ಯರೇ ಸೂಕ್ತ ಸಮಾಧಾನವನ್ನಿತ್ತರು. ಅಲ್ಲದೆ ಹಿಂದೆ ತಿಳಿಸಿರುವ 'ಕಾವ್ಯಾವಲೋಕನ'ದ ಉಪೋದ್ಘಾತ ಭಾಗದಲ್ಲಿ ಸ್ಪಷ್ಟವಾಗಿ ಅವರ ಭಾಗವನ್ನು ಸ್ಪಷ್ಟವಾಗಿ ಸೂಚಿಸಿರುವುದಲ್ಲದೆ ಅವರಿಗೆ ಈ ಕಾರ್ಯದಲ್ಲಿ ನೆರವಾದ ಸ್ವರ್ಗವಾಸಿ ಬುರುಡುಗುಂಟೆ ಶ್ರೀನಿವಾಸಾಚಾರ್ಯರ ಹೆಸರನ್ನೂ ಹೇಳಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ.

ಆಚಾರ್ಯರನ್ನು ವಿಶೇಷವಾಗಿ ಟೀಕೆಮಾಡಿದವರು ಡಾ. ಎ. ವೆಂಕಟಸುಬ್ಬಯ್ಯನವರು. ಇವರು ಆಚಾರ್ಯರಲ್ಲಿ ಸಹಾಯಕ ಅಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದರು. ಒಂದು ಸಲ ಇವರು ತಮ್ಮ ಇಲಾಖೆಯಿಂದ ಪ್ರಕಟವಾದ ವರದಿಯಲ್ಲಿ ವಿಚಾರಿತವಾದ ವಿಷಯವನ್ನೇ ಕಟುವಾಗಿ ಬೇರೆಡೆಯಲ್ಲಿ ಖಂಡಿಸಿದರು. ಇಂತಹ ಕಾರ್ಯವು ಇಲಾಖೆಯ ಗೌರವ ಮತ್ತು ಗಾಂಭೀರ್ಯಕ್ಕೆ ಸಲ್ಲದೆಂದು ಮುಖ್ಯಾಧಿಕಾರಿಗಳಾಗಿದ್ದ ಆಚಾರ್ಯರು ಸರ್ಕಾರದ ಗಮನಕ್ಕೆ ತಂದರು. ಸರ್ಕಾರದವರು ಅಯ್ಯನವರು ಮಾಡಿದ ಕೆಲಸ ಕ್ರಮಬದ್ಧವಲ್ಲವೆಂದು ಟೀಕಿಸಿ ಎಚ್ಚರಿಸಿದರು. ಇದರಿಂದ ಕ್ರುದ್ಧರಾದ ಅಯ್ಯನವರು ತಕ್ಷಣ ತಮ್ಮ ಕೆಲಸಕ್ಕೆ ರಾಜೀನಾಮೆಯನ್ನಿತ್ತರು. ಆಚಾರ್ಯರು ಇದರಿಂದ ವಿಶೇಷ ಖಿನ್ನಮನಸ್ಕರಾಗಿ ಅಯ್ಯನವರಿಗೆ ಹೇಳಿಕಳುಹಿಸಿ ತಾವು 'ಅಜಾತಶತ್ರು'ವೆಂದೂ ಯಾರಿಗೂ ತೊಂದರೆ ಮಾಡುವುದು ತಮ್ಮ ಉದ್ದೇಶವಲ್ಲವೆಂದೂ ತಾವು ಸರ್ಕಾರಕ್ಕೆ ಬರೆದುದು ಕೇವಲ ಇಲಾಖಾಗಾಂಭೀರ್ಯದೃಷ್ಟಿಯಿಂದ ಮಾತ್ರವೆಂದೂ ತಿಳಿಸಿ ಅವರ ರಾಜೀನಾಮೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸಿದರು. ಆದರೆ ಅಯ್ಯನವರು ತಮ್ಮ ನಿರ್ಧಾರವನ್ನು ಸಡಿಲಗೊಳಿಸಲಿಲ್ಲ. (ಈ ಅಂಶವು ಅದೇ ಇಲಾಖೆಯಲ್ಲಿ ಆಚಾರ್ಯರ ಸಹಾಯಾಧಿಕಾರಿಗಳಾಗಿದ್ದು ವಿಶ್ರಾಂತರಾಗಿರುವ ಶ್ರೀ ಆರ್. ರಾಮರಾಯರಿಂದ ತಿಳಿದು ಬಂದುದು) ಇದರ ಫಲವಾಗಿ ಅಯ್ಯನವರಿಂದ ಅನೇಕ ಕವಿಗಳ ವಿಷಯವಾಗಿ ಆಚಾರ್ಯರು ಕೊಟ್ಟಿರುವ ಕಾಲನಿರ್ಣಯದ ವಿಷಯದಲ್ಲಿ ಟೀಕಾರೂಪವಾದ ಲೇಖನಗಳು 'ಪ್ರಬುದ್ಧ ಕರ್ಣಾಟಕ'ದಲ್ಲಿ ಧಾರಾಕಾರವಾಗಿ

ಹೊರಬಂದುವು. ಇವುಗಳೆಲ್ಲ ‘ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ’ ಎಂಬ ಪ್ರತ್ಯೇಕ ಪುಸ್ತಕ ರೂಪದಲ್ಲಿಯೂ ಪ್ರಕಟವಾಗಿದೆ. ಆಚಾರ್ಯರು ಇವುಗಳೆಲ್ಲ ಕೂಲಂಕಷವಾಗಿ ವಿಚಾರಮಾಡಿ ತಮ್ಮ ಕವಿಚರಿತ್ರೆಯ ಮೂರನೆಯ ಸಂಪುಟದ ಉಪೋದ್ಘಾತದಲ್ಲಿ ಸೂಕ್ತವಾದ ಕೆಲವನ್ನು ವಿಶಾಲಹೃದಯದಿಂದ ಅಂಗೀಕಾರಮಾಡಿ ಉಳಿದ ಬಹುಭಾಗವನ್ನು ಅನವಶ್ಯಕವೆಂದು ತಿರಸ್ಕಾರಮಾಡಿದ್ದಾರೆ. ಅದನ್ನು ಅವಲೋಕಿಸಿದ ಅಯ್ಯನವರು ಈ ರೀತಿ ಉತ್ತರ ಬರೆದಿದ್ದಾರೆ. ‘ನಾನು ರುದ್ರಭಟ್ಟ, ವರೌತ್ರಕ ಕವಿ ಮೊದಲಾದವರ ಕಾಲದ ವಿಷಯದಲ್ಲಿ ಮಾಡಿದ್ದ ಆಕ್ಷೇಪಗಳಿಗೆ ತಾವು ಕೊಟ್ಟಿರುವ ಸಮಾಧಾನ ಸಂಪೂರ್ಣವಾಗಿ ನ್ಯಾಯವೂ ಸಮಾಧಾನಕರವೂ ಆಗಿದೆ. ಅವುಗಳನ್ನು ತಕ್ಷಣ ಅಂಗೀಕಾರ ಮಾಡುತ್ತೇನೆ. ತಮ್ಮ ಇತರ ವಿಮರ್ಶೆ ಇನ್ನೂ ವಿಚಾರಾರ್ಹವಾಗಿದೆ. ಆ ವಿಷಯದಲ್ಲಿ ಪುನಃ ವಿಚಾರಮಾಡಿದ ಮೇಲೆ ಅವಶ್ಯಕವಿದ್ದರೆ ನನ್ನ ಪೂರ್ವ ಸಿದ್ಧಾಂತವನ್ನು ಸ್ಥಾಪಿಸುವ ಅಥವಾ ತಮ್ಮ ಸಮಾಧಾನದ ಆಧಾರದ ಮೇಲೆ ನನ್ನ ಅಭಿಪ್ರಾಯವನ್ನು ಬದಲಾಯಿಸುವ ಕಾರ್ಯದಲ್ಲಿ ತೊಡಗುತ್ತೇನೆ. ಆ ವಿಷಯವೇನಾದರೂ ಇರಲಿ. ತಾವು ಸ್ವಂತ ಪ್ರೇರಣೆಯಿಂದ ಕೈಗೊಂಡ ಈ ಕಾರ್ಯವನ್ನು ಇಷ್ಟು ಸಂಪೂರ್ಣವಾಗಿಯೂ ಇಷ್ಟು ಉತ್ಕೃಷ್ಟರೀತಿಯಲ್ಲಿಯೂ ಸಂಪೂರ್ಣಗೊಳಿಸಿದುದಕ್ಕಾಗಿ ತಮ್ಮನ್ನು ಅಭಿನಂದಿಸಲು ತಮ್ಮ ಅನುಮತಿಯನ್ನು ಬೇಡುತ್ತೇನೆ. ಈ ಮೂರು ಸಂಪುಟಗಳೂ ತಮ್ಮ ವಿದ್ವತ್ತು, ಮತ್ತು ಶ್ರಮವನ್ನು ಲಕ್ಷಿಸದೆ ಅನವರತ ದುಡಿಮೆಗಳಿಗೆ ಪ್ರತ್ಯಕ್ಷ ಸಾಕ್ಷಿಗಳಾಗಿರುತ್ತವಲ್ಲದೆ ಎಲ್ಲ ಕನ್ನಡಿಗರೂ ಹೆಮ್ಮೆಪಡಬಹುದಾದ ಚಿರಸ್ಮಾರಕಗಳಾಗಿವೆ.’

ಆಚಾರ್ಯರು ತಮ್ಮ ಕವಿಚರಿತೆಯಲ್ಲಿ

‘ಶ್ರೀ ರಾಮಾನುಜ ಪದಪದ
ಸೀರುಹಷಟ್ಪದನನಂತದೇಶಿಕಪೌತ್ರಂ
ನಾರಾಯಣಾರ್ಯತನುಭವ
ನೋರಂತಿರೆದ ನೃಸಿಂಹಕವಿಯಾ ಕೃತಿಯಂ ।

ಎಂದು ಹೇಳಿರುವುದನ್ನು ಕುರಿತು ಕೆಲವರು ‘ಕವಿಚರಿತೆಯೊಂದು ಮಹಾ ಕಾವ್ಯವೆ? ಇದನ್ನು ಬರೆಯಲು ಕವಿಬೇಕೇ’ ವ್ಯಂಗ್ಯವಾಗಿ ಕುಚೋದ್ಯ ಮಾಡಿದುದೂ ಉಂಟು.

ಇಂತಹ ಮಾತುಗಳಿಗೆ ಸಮಾಧಾನವನ್ನು ಕೊಡಲು ಯತ್ನಿಸುವುದೇ ತಪ್ಪು. ಈ ಸಂದರ್ಭದಲ್ಲಿ ಮಾಸ್ತಿಯವರು ಹೇಳಿದ.

ಪ್ರಾಸಗಣಯತಿಗಳನು ಎಣಿಸೆಣಿಸಿ ಕೀಲಿಸಲು
ಬಸ್ತು ಬಣ್ಣದ ಮಾತ ಸರಿಯಾಗಿ ಸೇರಿಸಲು
ಕವಿತೆಯಾಗುವುದೆಂಬ ತಿಳಿವು ನಿನಗಿರುವುದೇನು ?
ಕಾಗದದ ಹೂವಿನಲಿ ದೊರೆಯಬಹುದೇ ಜೇನು ?

ಎಂಬ ಮಾತು ನೆನಪಿಗೆ ಬರುತ್ತದೆ. ಕೃತಕಪಾಂಡಿತ್ಯದಿಂದ ಅಳಿಯುವ ಬೆಲೆಗೆಟ್ಟುವ ಕವಿತೆಯಲ್ಲ ಆಚಾರ್ಯರದು. ಅಧ್ಯಯನದಿಂದ ಶ್ರದ್ಧೆಯಿಂದ, ತನ್ಮಯತೆಯಿಂದ, ಅನುಭವದಿಂದ ದೀರ್ಘಕಾಲದ ತಪಸ್ಸಿನಿಂದ ಸೃಷ್ಟಿಯಾದವು ಆಚಾರ್ಯರ ಕೃತಿಗಳು. ಅವರು ಕವಿತ್ವವನ್ನಾಡದೇ ಇಲ್ಲ. ಚಿತ್ರದುರ್ಗ ಜಿಲ್ಲೆಯ ಮಾರಿಕಣಿವೆ ಕೆರೆಗೆ ಕಟ್ಟೆಯನ್ನು ಕಟ್ಟಿದಾಗ ಅದರ ಪ್ರಾರಂಭೋತ್ಸವದಲ್ಲಿ ಆಚಾರ್ಯರು ಉತ್ತಮ ಕವನವನ್ನು ರಚಿಸಿ ಓದಿದರು. ಅವುಗಳು ಶಿಲಾಶಾಸನಸ್ಥವಾಗಿ ಆ ಸಂದರ್ಭವನ್ನು ಕಣ್ಣಿಗೆ ಕಟ್ಟುವ ಉತ್ತಮ ಕೃತಿಯಾಗಿ ಈಗಲೂ ಅಲ್ಲಿ ವಿರಾಜಿಸುತ್ತಿವೆ.

ಸಂಕುಚಿತ ಮನೋಭಾವದಿಂದಲೂ ವೈಯಕ್ತಿಕ ಕಾರಣಗಳಿಂದಲೂ ಕೆಲವರು ಮೇಲೆ ಹೇಳಿದ ರೀತಿಯಲ್ಲಿ ಟೀಕಿಸಿದ್ದರೂ ಕವಿಚರಿತೆಯನ್ನು ಕುರಿತು ಅಖಿಲ ಪ್ರಪಂಚದ ಪೌರಸ್ತ್ಯ ಪಾಶ್ಚಾತ್ಯ ವಿದ್ವಾಂಸರನೇಕರು ಮುಕ್ತಕಂಠದಿಂದ ಸ್ತೋತ್ರ ಮಾಡಿದ್ದಾರೆ. 'ಆರ್. ನರಸಿಂಹಾಚಾರ್ಯರು ತಮ್ಮ ಕೃತಿಯನ್ನು ನನ್ನ ಕೆಲವು ಟಿಪ್ಪಣಿಗಳ ಆಧಾರದ ಮೇಲೆ ಪ್ರಾರಂಭಿಸಿದರೂ ಅದನ್ನು ಮುಂದುವರಿಸಿ ಸ್ವತಂತ್ರ ನಿಸ್ಪೃಷ್ಟ ಸಂಶೋಧನೆಗಳಿಂದ ಬೆಳೆಸಿದ್ದಾರೆ. ಇದನ್ನು ಪ್ರಮಾಣ ಗ್ರಂಥವಾಗಿ ಅಂಗೀಕಾರಮಾಡಬಹುದು' ಎಂದು ಫ್ಲೀಟರವರು ತಮ್ಮ ೩-೭-೧೯೦೭ರ ಪತ್ರದಲ್ಲಿ ತಿಳಿಯಪಡಿಸಿದರು. 'ಇದು ಬಹು ಕಷ್ಟಸಾಧ್ಯವಾದ ಕೆಲಸ' ಎಂದು ಜಿ. ಎಫ್. ಗ್ರಿಯರ್ಸನ್ ಮತ್ತು ಎಫ್. ಡಬ್ಲ್ಯು. ಥಾಮಸ್ ಅವರು ಶ್ಲಾಘಿಸಿದರು. 'ಇದು ಒಂದು ಅತ್ಯುತ್ತಮ ಕೃತಿ. ಇದರ ಒಂದೊಂದು ಪುಟದಲ್ಲಿಯೂ ಕೃತಿಕಾರರ ಅಮೋಘವಾದ ದುಡಿಮೆಯೂ ಚಿಂತನೆಯೂ ಎದ್ದು ಕಾಣುತ್ತದೆ' ಎಂದು ಶ್ರೀ ರಂಗಾಚಾರ್ಯರು ಹೊಗಳಿದರು. 'ಇದು ವಿಶೇಷ ಶ್ರಮ, ವ್ಯಾಸಂಗ ಮತ್ತು ಸಂಶೋಧನೆಗಳ ಫಲ' ಎಂದರು ಶ್ಯಾಮರಾಯರು. ಬೆಳಗಾವಿಯ ದೇಶ

ಪಾಂಡೆಯವರು ಆಚಾರ್ಯರಿಗೆ ಬರೆದ ಕಾಗದದಲ್ಲಿ 'ತಾವು ಕನ್ನಡಿಗರಿಗೂ ಕನ್ನಡ ಸಾಹಿತ್ಯಕ್ಕೂ ಪ್ರಶಸ್ತ್ಯಪೂರ್ಣವಾದ ಅಪೂರ್ವ ಸೇವೆಯನ್ನು ಸಲ್ಲಿಸಿದ್ದೀರಿ. ಈ ಪುಸ್ತಕದಲ್ಲಿ ಸಾಮಾನ್ಯವಾಚಕರಿಗೂ ಬಹು ಉಪಯುಕ್ತವಾದ ಅನೇಕ ವಿಷಯಗಳಿವೆ. ಪ್ರಬೋಧಕವಾದ ಅನೇಕ ಪದ್ಯಭಾಗಗಳು ಬಹು ಜಾಗ್ರತೆಯಿಂದ ಸಂಗ್ರಹೀತವಾಗಿರುವುದಲ್ಲದೆ ಅನೇಕ ತಪ್ಪು ಅಭಿಪ್ರಾಯಗಳೆಲ್ಲ ತಿದ್ದಲ್ಪಟ್ಟಿವೆ' ಎಂದು ಬರೆದಿದ್ದಾರೆ. ದಿನಗಳ್ ರಾಮರಾಯರು 'ತಮ್ಮ ಅನುಪಮವಾದ ಕೀರ್ತಿಸ್ಥಾಪನೆಗೆ ಇದೊಂದೇ ಕೃತಿ ಸಾಕು' ಎಂದು ಬರೆದರು. 'ತಮ್ಮ ಕೃತಿಯು ಕನ್ನಡ ಸಾಹಿತ್ಯಕ್ಕೆ ಬಹು ಉಪಯುಕ್ತವೂ ಆಕರ್ಷಕವೂ ಬಹು ಬೆಲೆಯುಳ್ಳದೂ ಆದ ಕಾಣಿಕೆ' ಎಂಬುದು ಮೈಸೂರು ರಾಮಕೃಷ್ಣರ ಅಭಿಪ್ರಾಯ. ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಅಂಶಗಳು ಮತ್ತೂ ಉತ್ತೇಜಕವಾಗಿವೆ. 'ಅನೇಕ ಹಸ್ತಪ್ರತಿಗಳ ಸಂಗ್ರಹಗಳ ಆಧಾರದ ಮೇಲೆ ರಚಿತವಾದ ಸಂಪೂರ್ಣಕೃತಿಯಿದು' ಎಂಬುದು ಇಂಡಿಯನ್ ಆಂಟಿಕ್ವರಿ ಪತ್ರಿಕೆಯ (೩೭ ನೆಯ ಸಂಪುಟ ೨೫೩ ನೆಯ ಪುಟ) ಅಭಿಪ್ರಾಯ. ೨೬—೧೧—೧೯೦೮ ರ ಮದ್ರಾಸ್ ಮೈಲ್ ಪತ್ರಿಕೆಯು 'ಪ್ರಾಚ್ಯಸಂಶೋಧನೆಯಲ್ಲಿ ಇದೊಂದು ವಿಶೇಷ ಘಟನೆ' ಎಂದಿತು. ೩೦—೧೦—೧೯೦೭ ರ ಇಂಡಿಯನ್ ಸ್ಪೆಕ್ಟೇಟರ್ ಪತ್ರಿಕೆಯು 'ಇದೊಂದು ಸಂಶೋಧನೆಯ ಪ್ರತೀಕವಲ್ಲದೆ ವಿಷಯಗಳ ಗಣಿಯೇ ಆಗಿದೆ' ಎಂದು ತಿಳಿಸಿತು. 'ಇದೊಂದು ಸ್ವತಂತ್ರ ಮೂಲಸಂಶೋಧನೆಯ ಸ್ಮಾರಕ' ಎಂದು ಮೈಸೂರು ಸ್ಟ್ಯಾಂಡರ್ಡ್ ಪತ್ರಿಕೆಯು ಘೋಷಿಸಿತು. ವಿದ್ಯಾದಾಯಿನಿಯಂತು 'ಇದು ಸಾಮಾನ್ಯ ಕೆಲಸವಲ್ಲ. ಇಂತಹ ಕೃತಿ ಇದುವರೆಗೆ ಕನ್ನಡದಲ್ಲಿಲ್ಲ' ಎಂದು ಉದ್ಗಾರ ತೆಗೆಯಿತು. ನಡುಗನ್ನಡಿಯು 'ಈ ಚರಿತ್ರೆಯಲ್ಲಿ ಹೇಳಿರುವ ವಿಷಯಗಳನ್ನೆಲ್ಲ ಈ ಪತ್ರಿಕೆಯಲ್ಲಿ ಬರೆಯುವುದು ಸಾಧ್ಯವಿಲ್ಲ' ಎಂದಿತು.

ಕವಿಚರಿತೆಯ ದ್ವಿತೀಯ ಸಂಪುಟವು ಪ್ರಕಟವಾದಾಗ ಲೂಯಿಸ್ ರೈಸರವರು ಆಚಾರ್ಯರನ್ನು 'ಇಂತಹ ಕೃತಿಯನ್ನು ರಚಿಸಲು ಮತ್ತಾರಿಗೂ ಸಹಾಯ ಸಂಪತ್ತುಗಳಾಗಲಿ ಮನೋಧರ್ಮವಾಗಲಿ ಇಲ್ಲವೆಂಬುದು ನನ್ನ ದೃಢವಾದ ಅಭಿಪ್ರಾಯ. ಈ ಕಾರ್ಯವನ್ನು ನೀವು ಮುಗಿಸುತ್ತೀರಿ ಎಂಬುದು ನನ್ನ ಪೂರ್ಣ ಭರವಸೆ' ಎಂದು ಪ್ರೋತ್ಸಾಹಿಸಿದರು. ಎಲ್. ಡಿ. ಬಾರ್ನೆಟ್ ಅವರು ತಮ್ಮ ೩೦—೧—೨೦ ರ ಪತ್ರದಲ್ಲಿ 'ಇದು ಬಹು ಶ್ಲಾಘ್ಯವೂ ಉಪಯುಕ್ತವೂ ಆದುದು. ಜೆ. ಆರ್.

ಎ. ಎಸ್. ಪತ್ರಿಕೆಯಲ್ಲಿ ಇದನ್ನು ವಿಮರ್ಶಿಸುವುದರ ಮೂಲಕ ಇದಕ್ಕೆ ನನ್ನ ಕಾಣಿಕೆಯನ್ನು ಸಮರ್ಪಿಸುತ್ತೇನೆ' ಎಂದು ತಿಳಿಸಿದರು. 'ತಮ್ಮ ಪುಸ್ತಕದ ಪ್ರತಿಯೊಂದು ಪುಟದಲ್ಲಿಯೂ ಕಂಡು ಬರುವ ವಿದ್ವತ್ತು, ಸಹನೆ ಮತ್ತು ನಿಷ್ಪಕ್ಷಪಾತವಾದ ವಿಮರ್ಶೆಗಳಿಂದ ಮುಗ್ಧನಾಗಿದ್ದೇನೆ. ಇದರ ವಿಷಯದಲ್ಲಿ ನನ್ನ ಸಂಪೂರ್ಣ ಮೆಚ್ಚಿಗೆಯಲ್ಲದೆ ಇನ್ನೇನನ್ನೂ ಹೇಳಲಾರೆ' ಎಂದು ಬೊಂಬಾಯಿನ ಎಚ್. ನಾರಾಯಣರಾಯರು ಶ್ಲಾಘಿಸಿದ್ದಾರೆ.

ಮೂರನೆಯ ಸಂಪುಟವು ಪ್ರಕಟವಾದಾಗ ರೆ. ಇ. ಪಿ. ರೈಸರವರು ಬಹು ದೀರ್ಘವಾದ ಕಾಗದವನ್ನು ಬರೆದು ಆಚಾರ್ಯರನ್ನು ವಿಶೇಷವಾಗಿ ಕೊಂಡಾಡಿದರು. ಅದರ ಸಂಗ್ರಹವಿದು. 'ಸ್ವಯಂ ಆರೋಪಿತವೂ ಬಹು ಶ್ರಮಸಾಧ್ಯವೂ ಆದರೂ ತಮಗೆ ಬಹುಪ್ರಿಯವೂ ತಮ್ಮ ಬಹುವರ್ಷಗಳ ವಿರಾಮ ಕಾಲವನ್ನು ಪೂರ್ಣವಾಗಿ ಆಕ್ರಮಿಸಿಕೊಂಡ ಈ ಮೂರು ಸಂಪುಟಗಳನ್ನು ತಾವು ಪೂರ್ಣಮಾಡಿದ ಸಂದರ್ಭದಲ್ಲಿ ನಾನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಕನ್ನಡಿಗರ ಸಾಹಿತ್ಯ ಚರಿತ್ರೆಯ ಮೇಲೆ ಇದು ವಿಶೇಷ ಬೆಳಕನ್ನು ಬೀರುವುದಲ್ಲದೆ ಪ್ರಾಚೀನ ಕವಿಗಳ ಮತ್ತು ವಿದ್ವಾಂಸರ ಜೀವನವನ್ನು ಕಣ್ಣಿಗೆ ಕಟ್ಟುವಂತೆ ಮಾಡಿದೆ. ಇಂದು ದೊರೆಯಬಹುದಾದ ಸಾಧನಗಳ ದೃಷ್ಟಿಯಿಂದ ನಿಮ್ಮ ಸಂಶೋಧನೆ ಸಂಪೂರ್ಣವಾಗಿದೆ. ನೀವು ವಿಚಾರ ಮಾಡಿರುವ ವಿಷಯಗಳ ಪರವಾಗಿಯೂ ವಿರೋಧವಾಗಿಯೂ ಕೊಟ್ಟಿರುವ ಅಂಶಗಳು ಮುಂದೆ ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಭದ್ರ ತಳಹದಿಯನ್ನು ಹಾಕಿರುವುದಲ್ಲದೆ ಸದ್ಯಃ ಸ್ಥಿತಿಯಲ್ಲಿ ಇದಕ್ಕಿಂತ ಉತ್ತಮವಾಗಿ ಇನ್ನಾರು ಮಾಡಲಾರರೆಂಬುದು ನನ್ನ ಭಾವನೆ. ನಿಮ್ಮ ಕೃತಿಗಳಾಗಲೇ ಕನ್ನಡಿಗರಿಗೆ ತಮ್ಮ ಪ್ರಾಚೀನ ಇತಿಹಾಸಗಳ ವಿಷಯದಲ್ಲಿ ಹೆಚ್ಚು ಆಸಕ್ತಿಯನ್ನುಂಟು ಮಾಡಿರುವುದೆಂದು ನಾನು ತಿಳಿಯುತ್ತೇನೆ. ಮುಂದೆ ಅವರು ಬಹು ಉತ್ಸಾಹದಿಂದ ಹೆಚ್ಚಿನ ಕೈಬರಹದ ಗ್ರಂಥಗಳನ್ನು ಒದಗಿಸಿಕೊಟ್ಟು ಸದ್ಯದ ಜ್ಞಾನವನ್ನು ಅಭಿವೃದ್ಧಿಪಡಿಸುತ್ತಾರೆಂದು ಆಶಿಸಬಹುದು. ಮುಂದೆ ಕೆಲಸ ಮಾಡುವವರಾದವರೂ ನಿಮ್ಮ ಗಣಿಯನ್ನು ಆಶ್ರಯಿಸ ಬೇಕಾದುದು ಅನಿವಾರ್ಯವಾಗಿದೆ. ಈ ಮೂರು ಸಂಪುಟಗಳೂ ನಿಮ್ಮ ಅನೇಕ ವರ್ಷಗಳ ದುಡಿಮೆಯ ಮಾನಸ್ತಂಭವೆಂದು ಹೇಳಬಹುದು.' ಈ ಸಂಪುಟವನ್ನು ನೋಡಿದಾಗ ಸರ್. ಕೆ. ಪಿ. ಪುಟ್ಟಣ್ಣಚೆಟ್ಟರು ಹೀಗೆಂದು ಶ್ಲಾಘಿಸಿದರು :—'ಕರ್ಣಾಟಕ ಕವಿಚರಿತ್ರೆಯ ಮೂರನೆಯ ಸಂಪುಟದ ಪ್ರಕ

ಟೀಕೆಯು ತಾವು ಕೈಗೊಂಡ ಬಹು ಶ್ಲಾಘ್ಯವಾದ ಕೃತಿಯ ಮುಡಿಪನ್ನು ಸೂಚಿಸುತ್ತದೆ. ಇದರಿಂದ ಅಖಿಲಭಾರತದ ಜನರೂ ತಮಗೆ ಆಭಾರಿಗಳಾಗಿದ್ದಾರೆ. ಉತ್ತಮ ಸಂಶೋಧಕರೂ ಪ್ರಖ್ಯಾತ ವಿದ್ವಾಂಸರೂ ಆದ ತಾವು ಕನ್ನಡಿಗರಲ್ಲಿ ಅಗ್ರಸ್ಥಾನವನ್ನು ಆಕ್ರಮಿಸಿದ್ದೀರೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಕನ್ನಡದಲ್ಲಿ ವಿಶೇಷ ಆಸಕ್ತಿಯನ್ನು ವಹಿಸುವ ಬ್ರಾಹ್ಮಣರೂ ಲಿಂಗಾಯತರೂ ವಿಶೇಷವಾಗಿರುವ ಮೈಸೂರು ಮತ್ತು ಉತ್ತರ ಕರ್ನಾಟಕಗಳಲ್ಲಿ ತಮ್ಮ ಕೀರ್ತಿಯು ವಿಖ್ಯಾತವಾಗಿರುವುದು ಬಹುಯುಕ್ತವೂ ಸಂತೋಷಕರವೂ ಆಗಿದೆ.' ಡಾ. ಎಸ್. ಕೃಷ್ಣಸ್ವಾಮಯ್ಯಂಗಾರ್ಯರು 'ಇದು ಒಂದು ಅದ್ಭುತಕೃತಿ. ದಕ್ಷಿಣ ಭಾರತದ ಭಾಷೆಗಳಲ್ಲಿ ಇಂತಹ ಕೃತಿಗಳಲ್ಲಿ ಇದು ಪ್ರಪ್ರಥಮದ್ದಾಗಿದೆ' ಎಂದು ಪ್ರಶಂಸಿಸಿದರು. ಇದು 'ಕನ್ನಡ ಸಾಹಿತ್ಯದ ಜ್ಞಾನಭಂಡಾರ' ಎಂಬುದು ಪ್ರೊ. ಆರ್. ತಾತಾ ರವರ ಅಭಿಪ್ರಾಯ. 'ನಿಮ್ಮ ಅಮೋಘವಾದ ಸೇವೆಯನ್ನು (ಕನ್ನಡ ಸಾಹಿತ್ಯಾಭಿವೃದ್ಧಿಗೆ ನೀವು ಸಲ್ಲಿಸಿರುವ) ಕನ್ನಡಿಗರು ಎಂದೂ ಮರೆಯುವ ಹಾಗಿಲ್ಲ' ಎಂದು ಪಿ. ಮಹದೇವಯ್ಯನವರು ಶ್ಲಾಘಿಸಿದರು. 'ನಮ್ಮ ಜ್ಞಾತವ್ಯ, ಹೆಮ್ಮೆ ಮತ್ತು ಉತ್ಸಾಹಗಳಿಗೆ ನೀವು ಒಂದು ಹೊಸ ಸಾಧನವನ್ನು ಕಲ್ಪಿಸಿದ್ದೀರಿ. ಸಾಹಿತಿಗೂ ಇತಿಹಾಸಿಕನಿಗೂ ಆದಿಕಾಲದಿಂದ ಈ ಕಾಲದವರೆಗೆ ಅವಿಚ್ಛಿನ್ನವಾದ ವಿದ್ವಾಂಸರ ಪರಂಪರೆ ಬೆಳೆದು ಬರುತ್ತದೆಂಬುದೂ, ತಮ್ಮ ಸೋದರರಿಗೆ ಸರ್ವಕಾಲದಲ್ಲಿಯೂ ಶುಭವೂ ಸಂತೋಷಕರವೂ ಆದ ಸನಾತನವನ್ನು ಒದಗಿಸುವ ಜನ ತಮ್ಮ ಮಧ್ಯದಲ್ಲಿಯೇ ಇರುತ್ತಾರೆಂಬುದೂ ತಮ್ಮ ಬುದ್ಧಿಶಕ್ತಿಯಿಂದಲೂ ಶಬ್ದಜಾಲದಿಂದಲೂ ತಮ್ಮ ಜನಗಳಿಗೆ ಉಪದೇಶವನ್ನೂ ಮನರಂಜನೆಯನ್ನೂ ಏಕಕಾಲದಲ್ಲಿ ಮಾಡುವವರು ಸರ್ವದಾ ತಮ್ಮೊಡನೆಯೇ ಇದ್ದಾರೆಂಬುದೂ ಬಹಳ ಹಿತಕರವಾದುದು. ನೀವು ಸಾವಿರಾರು ಪುಟಗಳಲ್ಲಿ ವರ್ಣಿಸಿರುವ ಸಾವಿರಾರು ಕೃತಿಕಾರರನ್ನು ಓದಿದಾಗ ಮೇಲಿನ ಭಾವನೆಯನ್ನು ಮರೆಯುವುದು ಸಾಧ್ಯವೇ ಇಲ್ಲ. ನಿಮ್ಮ ಅದ್ಭುತವಾದ ಗುಣವೈಶಿಷ್ಟ್ಯಗಳಲ್ಲಿ ಯಾವುದನ್ನು ಮೆಚ್ಚುವುದು? ತಮ್ಮ ಆಶ್ಚರ್ಯಕರವಾದ ವಿದ್ವತ್ತನ್ನೇ; ಎಚ್ಚರಿಕೆ ಮತ್ತು ಶ್ರದ್ಧೆಗಳನ್ನೇ? ದುಡಿಮೆ ಮತ್ತು ಸಹನಗುಣವನ್ನೇ? ತಮ್ಮ ಕೆಲಸವನ್ನು ಸಂಪೂರ್ಣತೆಗೆ ಒಯ್ದ ದೇಶಭಾಷಾಪ್ರೇಮವನ್ನೆ?' ಎಂದು ಪ್ರಶ್ನೆಮಾಡಿ ಶ್ರೀ ಡಿ. ವಿ. ಗುಂಡಪ್ಪನವರು ಆಚಾರ್ಯರ ಗುಣಗಾನ ಮಾಡಿದ್ದಾರೆ. 'ನಿಮ್ಮ ಕೃತಿರಚನೆಗೆ ನೀವು ಎಷ್ಟು ದುಡಿದಿದ್ದೀರಿ, ಅದರಲ್ಲಿ ಎಷ್ಟು ಪ್ರೇಮಾದರಗಳನ್ನು

ತಿಳಿದಿದ್ದೀರಿ. ಅದು ಒಂದು ಬೃಹದ್ಗ್ರಂಥ. ಆ ಮಾದರಿಯಲ್ಲಿ ಪ್ರಪ್ರಥಮ ಕೃತಿ. ಮುಂದಿನ ತಲೆಮೊರೆಯವರಿಗೆ ಕನ್ನಡ ವಿದ್ವಾಂಸನೊಬ್ಬನಿಂದ ರಚಿತವಾದ ಉತ್ಕೃಷ್ಟ ಕೃತಿಯೆಂದೆನಿಸಿ ಆದರ್ಶಪ್ರಾಯವಾಗುತ್ತದೆ. ಎಲ್ಲ ಕೃತಿಗಳ ವಿಷಯವಾಗಿಯೂ ವಿಮರ್ಶಕರ ದೋಷೋದ್ಘಾಟನೆಗಳು ಇದ್ದೇ ಇರುತ್ತವೆ. ಬೆಳವಣಿಗೆಯ ದೃಷ್ಟಿಯಿಂದ ಇರಬೇಕು. ಆದರಿಂದ ನಿಮ್ಮ ಕೃತಿಗೆ ಯಾವ ಚ್ಯುತಿಯೂ ಬರುವುದಿಲ್ಲ. ನೀವು ಡಾ. ವೆಂಕಟಸುಬ್ಬಯ್ಯನವರಿಗೆ ಸೂಕ್ತವಾದ ಸಮಾಧಾನ ಕೊಟ್ಟಿದ್ದೀರಿ' ಎಂದು ಉಗ್ರಾಣ ಮಂಗೇಶರಾಯರು ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. 'ತಾವು ಕರ್ಣಾಟಕ ಕವಿಚರಿತ್ರೆಯನ್ನು ಬರೆದು ಕರ್ಣಾಟಕ ಜನಾಂಗಕ್ಕೆ ಮಾಡಿದ ಉಪಕಾರವನ್ನು ಕರ್ಣಾಟಕ ಜನಾಂಗವು ಎಂದೂ ಮರೆಯಲಾರದು. ತಾವು ಮಾಡಿದ ಉಪಕಾರವು ಸುವರ್ಣಾಕ್ಷರಗಳಿಂದ ಕೆತ್ತಿಸಲರ್ಹವಾದುದು. ಕರ್ಣಾಟಕ ಭಾಷಾ ಮಾತೆಯ ಅನುಪಮ ಸೇವಕರಲ್ಲಿ ಅಗ್ರತಾಂಬೂಲವನ್ನು ಹೊಂದಲರ್ಹರಾದ ತಮ್ಮ ಅಗಾಧ ಪರಿಶ್ರಮವು ಪ್ರಶಂಸನೀಯವಾದುದು. ಈ ಮಹದುಪಕಾರಕ್ಕೆ ಇಡೀ ಕರ್ಣಾಟಕವೇ ಋಣಿಯಾಗಬೇಕು' ಎಂಬುದು ಆರಾವಿನ ಭುಜಬಲ ಶಾಸ್ತ್ರಿಗಳ ಆಶ್ವಾಸನೆ.

'ತಾವು ಕರ್ಣಾಟಕ ಭಾಷೆಯ ಪ್ರಾಚೀನತೆಯ ವಿಷಯದಲ್ಲಿಯೂ ಮಾಧುರ್ಯದ ವಿಷಯದಲ್ಲಿಯೂ ಇನ್ನೂ ಅನೇಕ ವಿಷಯದಲ್ಲಿಯೂ ಸಹ ಮೂರು ಸಂಪುಟಗಳ ಉಪೋದ್ಘಾತದಲ್ಲಿ ವಿಮರ್ಶಿಸಿರುವ ವಿಷಯಗಳನ್ನು ಅವಲೋಕಿಸಿದ ಮಾತ್ರಕ್ಕೆ ಎದೆಯು ಧಿಗ್ಗೆನ್ನಿಸುತ್ತದೆ. ಕರ್ಣಾಟಕ ಭಾಷೆಯ ಕೂಲಂಕಷವಾದ ಚರಿತ್ರೆಯನ್ನು ಸಪ್ರಮಾಣವಾಗಿ ಬರೆಯಬೇಕಾದರೆ ಅದರಲ್ಲಿಯೂ ಲಲಿತ ಸುಮಧುರ ವಾಗ್ಗುಂಫ ವೈಖರೀ ವಿಶೇಷಗಳಿಂದ ತುಂಬಿತುಳುಕುವಂತೆ ಮಾಡಬೇಕಾದರೆ —ತಾವು ಮೂರ್ತಿಮತ್ತಾದ ಕನ್ನಡ ಭಾಷೆಯೇ ಆಗಬೇಕೆನ್ನಲು ಅವ ಅಡ್ಡಿಯೂ ಇಲ್ಲ. ಕರ್ಣಾಟಕ ಕವಿಚರಿತ್ರೆಯ ಮೂರು ಸಂಪುಟಗಳೂ............ತಮ್ಮನ್ನು ಅಭಿನವ ಕನ್ನಡ ಸೀಮಾಪುರುಷರೆಂದು ಹೇಳುವಂತೆ ಮಾಡಿವೆ.' ಎಂದು ಎತ್ತಗಿರ ಮಠದ ಬೋಧಾನಂದಾರ್ಯರು ಪ್ರಶಂಸಿಸಿದ್ದಾರೆ. ಮುಂದಿನದು ಸುಪ್ರಸಿದ್ಧ ಕನ್ನಡ ಕವಿಯೂ ಇತಿಹಾಸಕಾರರೂ ಆದ ಎಂ. ಗೋವಿಂದ ಪೈ ಅವರು ಆಚಾರ್ಯರ ವಿಷಯವಾಗಿ ಮಾಡಿರುವ ಗುಣ ಗಾನ. 'ಅಮೆರಿಕವನ್ನು ಕಂಡು ಹಿಡಿದ ಕೊಲಂಬಸನು ಪಾಶ್ಚಾತ್ಯರ ಪೃಥ್ವೀ ಶೋಧನೆಯ ಮೂಲ ಸ್ತಂಭವನ್ನು ನಟ್ಟಂತೆ

ತಮ್ಮ ಕೃತಿಗಳಿಂದ ಸಾಹಿತ್ಯೇತಿಹಾಸದ ತಳಹದಿಯನ್ನು ತಾವು ಎಷ್ಟೋ ಭದ್ರವಾಗಿ ಹಾಕಿರುವಿರಿ ಮಾತ್ರವಲ್ಲ; ಕಾಲನನ್ನೂ ಧಿಕ್ಕರಿಸಿರುವ ಪ್ರಾಸಾದವನ್ನೂ ಎತ್ತಿರುವಿರಿ. ಕನ್ನಡ ಸಾಹಿತ್ಯೇತಿಹಾಸದಲ್ಲಿ ಈಗ ನಿರ್ಧಾರವಾಗದ ಹಲವು ವಿಷಯಗಳು—ಹಲವು ಕವಿಗಳ ಕಾಲ, ದೇಶ ಮತ ವಿಚಾರವೇ ಮೊದಲಾದುವು ಕಾಲ ಕ್ರಮೇಣ ಇನ್ನು ಮುಂದೆ ಹೊರಪಡಬೇಕಾದವೂ ಕನ್ನಡ ನುಡಿ ಇರುವಷ್ಟು ಕಾಲಕ್ಕೂ ಮುಗಿಯಲಾರದ ಈ ಜ್ಯೋತಿಸ್ತೋಮದ ಪ್ರತಿಷ್ಠಾಪಕನಾರು? ಅದರ ಅಧ್ವರ್ಯನಾರು? ಎಂಬಿವೇ ಮೊದಲಾದ ಪ್ರಶ್ನೆಗಳನ್ನು ಭವಿಷ್ಯ ಕಾಲವು ಕೇಳುವಲ್ಲಿ ಅದಕ್ಕೆಲ್ಲ ಒಂದು ಪ್ರತ್ಯುತ್ತರವೆಂದರೆ ತಮ್ಮ ಹೆಸರೇ.’

“ನಶ್ವರನಾದ ಮನುಷ್ಯನು ತನಗೆ ಅಮರತೆಯನ್ನು ಸಂಪಾದಿಸಿಕೊಳ್ಳಬಲ್ಲನಾದರೆ, ಸಾಹಿತ್ಯಸೇವೆ, ದೇಶಸೇವೆ, ಸಮಾಜಸೇವೆ ಮುಂತಾದ ನಿಸ್ವಾರ್ಥ ನಿಷ್ಕಾಮ ಕೃತ್ಯಗಳನ್ನು ಕಾಣಿಸುವುದರಿಂದಲೇ ಎಂಬುದೊಂದ ತಮ್ಮ ಅಜರಾಮರ ಸಾಹಿತ್ಯ ಶರೀರವನ್ನು ಕಂಡು ಸಾಹಿತ್ಯಪ್ರೇಮಿಗಳು, ಕನ್ನಡಿಗನು ತನಗೂ ದೊರೆಯದು ಆಕಾಂಕ್ಷಿಸಿ ಪ್ರಯತ್ನಪಡಬಹುದು. ಕನ್ನಡಿಗರ ಕಣ್ಣಮುಂದೆ ತಮ್ಮಿಂದ ಹೀಗೆ ಆವಿಷ್ಕೃತವಾದ ಸಾಹಿತ್ಯೇತಿಹಾಸವೆಂಬ ಗಗನದಲ್ಲಿ ಈ ಮುಂದಣ ಜೀವದಲ್ಲಿ ತಾವೂ ನಕ್ಷತ್ರದಂತೆ ಬೆಳಗಬೇಕೆಂದು ಆತನೂ ಉದ್ಯಮಿಸಿದರೆ, ಆ ಬಗ್ಗೆ ಕೂಡ ಇಂದಿನವರೂ ಮುಂದಿನವರೂ ತಮಗೆ ಕೃತಜ್ಞರಾಗಿರಬೇಕು. ಇದಕ್ಕಿಂತ ಹೆಚ್ಚಿನ ಬಹುಮಾನ, ಇದಕ್ಕೆ ಮಿಕ್ಕ ಕೀರ್ತಿ ಬೇಕೆ?”

ಇಂಗ್ಲೀಷ್ ಪತ್ರಿಕೆಗಳಾದ ‘ರಾಯಲ್ ಏಷ್ಯಾಟಿಕ್ ಸೊಸೈಟಿಯ ಪತ್ರಿಕೆ,’ ‘ಮಿಥಿಕ್ ಸೊಸೈಟಿಯ ಪತ್ರಿಕೆ,’ ‘ಹಿಂದು’ ಮತ್ತು ‘ಈವಿನಿಂಗ್ ಮೇಲ್’ ಪತ್ರಿಕೆಗಳು ಇಂತಹ ನಾಯಕ ಕೃತಿಯನ್ನು ಸರಿಸಮಾನಾಚಾರ್ಯರಲ್ಲದೆ ಮತ್ತಾರಿಂದಲೂ ರಚಿಸಲು ಸಾಧ್ಯವಾಗುತ್ತಿರಲಿಲ್ಲವೆಂದು ತಿಳಿಸಿ ಮೂರು ಸಂಪುಟಗಳ ಉಪೋದ್ಘಾತ ಭಾಗವನ್ನು ಬಹುವಾಗಿ ಶ್ಲಾಘಿಸಿವೆ.

ಕನ್ನಡದ ಸುಪ್ರಸಿದ್ಧ ಸಾಹಿತ್ಯಕ ಪತ್ರಿಕೆಯಾದ ‘ಪ್ರಬುದ್ಧ ಕರ್ನಾಟಕ’ವು ಕವಿಚರಿತೆಯನ್ನು ಈ ರೀತಿ ವಿಮರ್ಶಿಸಿದೆ: ‘ಅಮೆರಿಕವನ್ನು ನಿರ್ಮಿಸಿದಾತನೇನೋ ಕೊಲಂಬಸನಲ್ಲ. ಆತನಿಂದ ಎಷ್ಟೋ ಸಹಸ್ರಕಾಲಕ್ಕೆ ಹಿಂದಿನಿಂದಲೇ ಅದಿದ್ದಿತು ಎಂಬುದೆಷ್ಟು ಯಥಾರ್ಥವೋ, ಅದನ್ನು ಕಂಡು ಹಿಡಿದು ಪಡುವಣಿಗರ ನಾಗರಿಕತೆಗೆ ಅದನ್ನು ಅನುಗೊಳಿಸಿದನು ಆತನೆಂಬುದು ಅಷ್ಟೇ ಯಥಾರ್ಥ.

ಹಾಗೆಯೇ ಶ್ರೀಮಾನ್ ನರಸಿಂಹಾಚಾರ್ಯರಿಂದ ಎಷ್ಟು ಶತಕಗಳ ಹಿಂದಿನಿಂದಲೂ ಕನ್ನಡ ಸಾಹಿತ್ಯವೂ ಬೆಳೆಯುತ್ತಲೇ ಬರುತ್ತದೆಂಬುದೇನೂ ಹೊಸ ಮಾತಲ್ಲ. ಆದರೆ ಅದರ ಇತಿಹಾಸವನ್ನು ಎಷ್ಟು ಪ್ರಯತ್ನದಿಂದ ಎಷ್ಟು ಪರಿಶ್ರಮದಿಂದ, ಎಷ್ಟು ತಾಳ್ಮೆಯಿಂದ, ಎಷ್ಟು ವೈದುಷ್ಯದಿಂದ ಗ್ರಂಥೀಕರಿಸಿ ಇಷ್ಟು ವಿಪುಲವಾದ, ಇಷ್ಟು ಪ್ರಶಸ್ತವಾದ, ಇಷ್ಟು ಮನೋಜ್ಞವಾದ ಸಾಹಿತ್ಯವು ನಮಗಿದೆ ಎಂದು ಕನ್ನಡ ನಾಡಿನ ಅವಗಾಹನೆಗೆ ತಂದವರೆಂದರೆ ಈ ವಿದ್ವಾಂಸರೇ. ಆದುದರಿಂದ ಕನ್ನಡಿಗರ ತಿಳುವಳಿಕೆಯ ಬಗ್ಗೆ 'ಕರ್ಣಾಟಕ ಕವಿಚರಿತ್ರೆ' ಎಂಬೀ ಸೋಪಾನಪಥವನ್ನು ರಚಿಸಿ, ನಮ್ಮಿಂದ ಅಗಲಿ ಹೋದಂತಿದ್ದ ನಮ್ಮ ಸಾಹಿತ್ಯದ ಪೂರ್ವಲೋಕವನ್ನು ನಮಗೆ ನೆರೆಗೊಳಿಸಿರುವ ಈ ವಿದ್ವಾಂಸರನ್ನು ಕನ್ನಡಸಾಹಿತ್ಯದ ಕೊಲಂಬಸನೆಂದರೆ ಸರ್ವಥಾ ಯಥಾರ್ಥವಲ್ಲದೆ ಅತ್ಯುಕ್ತಿಯಾಗದು........ಕನ್ನಡ ಸಾಹಿತ್ಯೇತಿಹಾಸದಲ್ಲಿ ಬೋಧವು ಬೆಳೆಯುತ್ತಾ ಮಾರ್ಪಾಡುಗಳು ಆಗಬಹುದಾದರೂ ಗಿಬ್ಬನ್ನನ ರೋಮ ರಾಜ್ಯದ ವಿಧ್ವಂಸದ ಇತಿಹಾಸದಂತೆ ಕವಿಚರಿತೆಯ ಈ ಮೂರು ಸಂಪುಟಗಳು ಕನ್ನಡ ಸಾಹಿತ್ಯೇತಿಹಾಸದಲ್ಲಿ ಚಿರಕಾಲ ಅಗ್ರಗಣ್ಯವಾಗಿರುವುವು ಎಂಬಲ್ಲಿ ಸಂದೇಹವಿಲ್ಲ.'

'ವಿಶ್ವಬಂಧು' ವು ಏನೆಂದಿದೆ ಕೇಳಿ :' ಕರ್ಣಾಟಕ ಭಾಷೆಯನ್ನು ಅನುಪಮ ಸೇವೆಮಾಡಿರುವವರಲ್ಲಿ ಪ್ರಾಕ್ತನವಿಮರ್ಶವಿಚಕ್ಷಣ ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರು ಅಗ್ರಗಣ್ಯರೆಂದರೆ ಇದನ್ನು ಗುಣೈಕಪಕ್ಷಪಾತಿಗಳು ನಮ್ಮ ಸ್ತುತಿಕಥನ ವೆನ್ನುವರಲ್ಲದೆ ಪ್ರಶಂಸಾಕಥನವೆನ್ನರು. ಪುರಾತತ್ತ್ವಾನ್ವೇಷಣ ವಿಷಯದಲ್ಲಿಯೂ ಕರ್ಣಾಟಕ ಕವಿಗಳ ಕಾಲ ನಿರ್ಣಯದ ಮತ್ತು ಗ್ರಂಥ ವಿಮರ್ಶೆಯ ವಿಷಯದಲ್ಲಿಯೂ ಶ್ರೀ ಆಚಾರ್ಯರವರು ಕರ್ಣಾಟಕದಲ್ಲಿ ಒಂದು ನೂತನ ವಾತಾವರಣವನ್ನುಂಟು ಮಾಡುವುದರಲ್ಲಿ ಪ್ರಥಮಸ್ಥಾನಾಪನ್ನರಾಗಿ ಮಾರ್ಗದರ್ಶಕರಾಗಿರುತ್ತಾರೆಂದರೆ ತಪ್ಪಾಗದು. ಈ ಮಹನೀಯರ ಅಗಾಧ ಪರಿಶ್ರಮದ ಫಲರೂಪವಾಗಿ ಕರ್ಣಾಟಕಕ್ಕೊಂದು ರತ್ನತ್ರಯಗಳಂತೆ ಕರ್ಣಾಟಕ ಕವಿಚರಿತ್ರೆಯ ಮೂರು ಸಂಪುಟಗಳು ದೊರಕಿವೆ. ಇವು ಕರ್ಣಾಟಕ ಸಾಹಿತ್ಯಸಮುದ್ರದ ಮಥನದಿಂದ ಶ್ರೀ ಆಚಾರ್ಯರವರು ದೊರಕಿಸಿದ ಮೂರು ರತ್ನಗಳೆಂದರೆ ಕೆಲವರಿಗೆ 'ಇದೇನು ಅತಿಪ್ರಶಂಸೆ'ಯೆಂದು ತೋರಬಹುದಾದರೂ, ನಾವು ಕೆಲವು ಕವಿಗಳ ವಿಷಯವನ್ನು ತಿಳಿಯಬೇಕೆಂದು ಪ್ರಯತ್ನಿಸಿದಾಗ ನಮಗೆ ಪ್ರಾಪ್ತವಾದ ಕಷ್ಟ

ಪರಂಪರೆಯ ಅನುಭವವೂ ನಮಗೆ ಶ್ರೀ ಆಚಾರ್ಯರಲ್ಲಿರುವ ಗೌರವ ಬುದ್ಧಿಯೂ ಅವರ ನೈಜವಾದ ಶ್ರಮವನ್ನು ಪ್ರಶಂಸಿಸುವಂತೆ ಮಾಡುತ್ತವೆ. ಶ್ರೀ ಆಚಾರ್ಯರು ಕರ್ನಾಟಕಕ್ಕೆ ಮಾಡಿರುವ ಉಪಕಾರಕ್ಕೋಸ್ಕರ ನಾವು ಅವರಿಗೆ ಅತ್ಯಂತ ಕೃತಜ್ಞರಾಗಿರುತ್ತೇವೆ.'

ಈ ಅಭಿಪ್ರಾಯವನ್ನೇ 'ವಾಗ್ಭೂಷಣವು'ವು ಮುಂದಿನ ಮಾತುಗಳಲ್ಲಿ ಇನ್ನೂ ಸ್ಪಷ್ಟೀಕರಿಸಿವೆ. ಪ್ರೊ. ಎ., ಕೆ. ವಿದ್ಯಾರ್ಥಿಭೂಷಣ ರಾ. ಬ. ರಾ ನರಸಿಂಹಾಚಾರ್ಯರವರು ಬರೆದಿರುವ ಕವಿಚರಿತೆಯ ಮೊದಲೆರಡು ಸಂಪುಟಗಳನ್ನು ಓದಿರುವ ಕನ್ನಡಿಗರಿಗೆ ಈ ಮೂರನೆಯ ಸಂಪುಟದ ವಿಷಯಕ್ಕೆ ಹೆಚ್ಚಿಗೆ ಹೇಳಬೇಕಾದ ಆವಶ್ಯಕತೆಯೇನೂ ತೋರದು. ಮೂರನೆಯ ಸಂಪುಟವನ್ನು ಬರೆದು ಮುಗಿಸಬೇಕೆಂದಿದ್ದ ಅವರ ಕೋರಿಕೆಯನ್ನು ಅವರ ಅವಿಚಲವಾದ ಕರ್ನಾಟಕಭಾಷಾ ಭಕ್ತಿಯಿಂದ ಸಂತುಷ್ಟನಾದ ಭಗವಂತನು ಈಗ ನೆರವೇರಿಸಿದನು. ಅವತರಣಿಕೆಯಲ್ಲಿ ದ್ರಾವಿಡಭಾಷೆಗಳು, ಕನ್ನಡದ ಉಪಭಾಷೆಗಳು, ಕನ್ನಡ ನುಡಿಯ ಉತ್ಪತ್ತಿ, ಬೆಳವಣಿಗೆ, ವ್ಯಾಪ್ತಿ, ಪ್ರಾಬಲ್ಯ, ಕನ್ನಡಿಗರ ನಾಗರಿಕತೆ, ಇವೇ ಮೊದಲಾದ ಹಲವು ಅತ್ಯುಪಯುಕ್ತವಾದ ವಿಷಯಗಳು ವರ್ಣಿತವಾಗಿವೆ. ಕರ್ನಾಟಕ ಚರಿತ್ರೆ ವಿದ್ಯಾ ವಿಶಾರದರೆನಿಸಿಕೊಂಡಿರುವ ಶ್ರೀ ಆಚಾರ್ಯರು ಕನ್ನಡಿಗರಿಗೆ ಒಪ್ಪಿಸಿರುವ ಈ ಕಾಣಿಕೆಯು ಅಮೌಲ್ಯವಾಗಿರುವುದು. ಕನ್ನಡಿಗರು ಕಾಣಿಕೆಯನ್ನು ಸ್ವೀಕರಿಸಿ ತನ್ನ ಶ್ರಮವನ್ನು ಸಾರ್ಥಗೊಳಿಸ ಬೇಕೆಂದು ಕೇಳಿಕೊಂಡಿರುವುದು ಆಚಾರ್ಯರ ವಿನಯಸಂಪನ್ನತೆಯ ಕುರುಹು. ಕನ್ನಡಿಗರು ಈ ಕಾಣಿಕೆಗಾಗಿ ಆಚಾರ್ಯರಿಗೆ ಅತ್ಯಂತ ಋಣಿಗಳಾಗಿರುವರು. ಕನ್ನಡ ನುಡಿಯ ಇತಿಹಾಸದಲ್ಲಿ ಹಿಂದೆ ಎಂದೂ ಆಗದಿರುವ ಅಂತಹ ಅಮೋಘವಾದ ಕಾರ್ಯವನ್ನು ಕೈಗೊಂಡು ಮೂರು ಸಂಪುಟಗಳನ್ನು ಸಂಪೂರ್ಣಗೊಳಿಸಿರುವ ಪುಣ್ಯಶಾಲಿಗಳಾದ ಈ ಮಹನೀಯರನ್ನು ಆಧುನಿಕಕನ್ನಡಿಗರೆಲ್ಲರೂ ಕವಿಗಳೂ ಪೂರ್ವಕವಿಗಳಾದ ವ್ಯಾಸ ವಾಲ್ಮೀಕಿಗಳನ್ನೂ ಕಾಳಿದಾಸ, ಕೇಶಿರಾಜ ಭಟ್ಟಾಕಳಂಕರನ್ನೂ ಸ್ಮರಿಸುವಂತೆ ಮೊದಲು ವಂದಿಸಿ ಬಳಿಕ ಕಾರ್ಯಾರಂಭ ಮಾಡಬೇಕು.'

'ಪತ್ರಕರ್ನಾಟಕ'ವು ಇವರ ಮೇಲೆ ಬರೆದಿರುವ ಆಕ್ಷೇಪಣೆಗಳನ್ನು ಮನನಮಾಡಿ ಅವಕ್ಕೆ ಸಮಾಧಾನ ರೂಪದಲ್ಲಿ ಮುಂದಿನ ಮಾತುಗಳನ್ನಾಡಿದೆ. 'ಅನೇಕ ವರ್ಷಗಳಿಂದ ಕನ್ನಡಿಗರು ಮಹದಾಶೆಯಿಂದ ನಿರೀಕ್ಷಿಸುತ್ತಿದ್ದ ಕರ್ನಾ

ಟಕ ಕವಿ ಚರಿತೆಯ ಮೂರನೆಯ ಸಂಪುಟವು ಹೊರಬಿತ್ತು. ವೃದ್ಧ ಆಚಾರ್ಯರಿಗೆ ಧನ್ಯವಾದಗಳು. ಆಚಾರ್ಯರ 'ಕವಿ ಚರಿತೆ'ಗಳೇ ಮೊಟ್ಟಮೊದಲು ಕನ್ನಡಿಗರಲ್ಲಿ ನಿಜವಾದ ಸಾಹಿತ್ಯೇತಿಹಾಸ ಸಂಶೋಧನಾ ಬುದ್ಧಿಯನ್ನು ಹುಟ್ಟಿಸಿದುವು. ಅಂದಿನಿಂದ ಸಂಶೋಧನೆ ಮತ್ತು ವಿಮರ್ಶೆಗೆ ಆರಂಭವಾಗಿದೆ. 'ಬಲ್ಲವನೇ ಬಲ್ಲ ಬೆಲ್ಲದ ಸವಿಯ' ಎಂಬಂತೆ ಇಂತಹ ಕೆಲಸ ಮಾಡಿದವರಿಗೇ ಅದರ ಕಷ್ಟಸುಖಗಳು ಗೊತ್ತಿಲ್ಲದ ಇತರರಿಗೆ ಗೊತ್ತಾಗುವ ಹಾಗಿಲ್ಲ. ಅಲ್ಲದೆ ಕುಂದು ಕೊರತೆಗಳೂ ಲೋಪ ದೋಷಗಳೂ ಇಂತಹ ಗ್ರಂಥಗಳಿಗೆ ಅನಿವಾರ್ಯವಾದ ಲಕ್ಷಣಗಳು. ಇಂದಿನ ಆಧಾರಕ್ಕೆ ಸರಿಯಾಗಿ ಈ ಸಿದ್ಧಾಂತ; ನಾಳೆ ಇನ್ನೇನು ಹೊಸ ಆಧಾರ ಸಿಗುವುದೋ ಯಾವ ಸಿದ್ಧಾಂತ ಎಷ್ಟರಮಟ್ಟಿಗೆ ನಿಲ್ಲುವುದೋ ಬಲ್ಲವರಾರು? ಅಲ್ಲದೆ ವ್ಯಕ್ತಿಗಳ ಸಾಹಸಕ್ಕೂ ಶಕ್ತಿಗೂ ಒಂದು ಮಿತಿಯುಂಟು. ಜನರು ಮಿತಿಮೀರಿ ನಿರೀಕ್ಷಿಸುವುದು ಶುದ್ಧ ಅನ್ಯಾಯ. ಈ ದೃಷ್ಟಿಯಿಂದ ನೋಡಿದರೆ ಕವಿಚರಿತ್ರಕಾರರು "ಕಷ್ಟತಮವಾದ ಕೆಲಸವನ್ನು ಅದ್ಭುತ ರೀತಿಯಿಂದ ನಿರ್ವಹಿಸಿರುವರೆಂದೇ ಹೇಳಬೇಕಾಗುತ್ತದೆ". ಈ ಗ್ರಂಥದ ವಿಸ್ತಾರ ವೈಭವಗಳನ್ನು ಅದರ ಉಪಯುಕ್ತತೆಯನ್ನು 'ನವಕರ್ಣಾಟಕ' ವು ಉದಾರವಾಗಿ ಶ್ಲಾಘಿಸಿದೆ.

'ನೀತಿಮಂಜರಿ'ಯ ಒಂದು ಎರಡನೆಯ ಭಾಗಗಳು ನರಸಿಂಹಾಚಾರ್ಯರ ಭಾಷಾಂತರಿತ ಕೃತಿಗಳು. ತಮಿಳಿನ ಸುಪ್ರಸಿದ್ಧ ಕವಿಯಾದ ತಿರುವಳ್ಳುವರ್ ರಚಿತ 'ಕುರಳ್' ಇದಕ್ಕೆ ಮೂಲ. ಇದರ ಮೊದಲನೆಯ ಭಾಗವು ೧೯೦೧ ರಲ್ಲಿ ಪ್ರಕಟವಾಯಿತು. ಇದರಲ್ಲಿ ೩೭೫ ಪದ್ಯಗಳಿವೆ. ಎರಡನೆಯದರಲ್ಲಿ ೩೬೦ ಪದ್ಯಗಳಿವೆ. ಇದರ ಮೊದಲನೆಯ ಭಾಗವನ್ನು ಹೆಚ್. ವಿ. ನಂಜುಂಡಯ್ಯನವರು 'ವಿಷಯ ಮತ್ತು ರೀತಿಯಲ್ಲಿ ಅತ್ಯಮೋಘವಾದ ಕೃತಿ' ಯೆಂದೂ, ಕೆ. ಬಿ. ಪಾಠಕ್ ರವರು 'ಅತ್ಯುತ್ತಮ ಕೃತಿ' ಯೆಂದೂ ಹೆಚ್. ನಾರಾಯಣರಾಯರು 'ಇದು ಬಹು ಬೇಗ ಉತ್ತಮ ಕೃತಿಯಾಗುತ್ತದೆ. ನಾನು ನಿಮ್ಮ ಪದ್ಯಗಳನ್ನು ಓದುವುದಕ್ಕೆ ಅತ್ಯಂತ ಸಂತೋಷಪಟ್ಟೆ. ಅವರ ಸ್ವಚ್ಛವಾದ ಶೈಲಿ, ಸಹಜ ಗತಿ, ಉಕ್ತಿ ಮಾಧುರ್ಯ, ಭಾವಪೂರ್ಣತೆ ನನ್ನನ್ನು ಮುಗ್ಧನನ್ನಾಗಿಸಿವೆ' ಎಂದೂ, ಬಿ. ಸುಬ್ಬನ ಮತ್ತು ಎಸ್. ಜಿ. ನರಸಿಂಹಾಚಾರ್ಯರು 'ಇಂತಹ ನಿಜವಾದ ಒಳ್ಳೆಯ ಪುಸ್ತಕಗಳನ್ನು ಕಾಣುವುದು ಅಪೂರ್ವ' ಎಂದೂ ಶ್ಲಾಘಿಸಿದರು. 'ಎಜ್ಯುಕೇಷನಲ್ ರಿವ್ಯೂ' ಪತ್ರಿಕೆಯು 'ಇದು ಕನ್ನಡ ಸಾಹಿತ್ಯಕ್ಕೆ ಅತ್ಯಮೋಘವಾದ ಕಾಣಿಕೆ'

ಯೆಂದು ಪ್ರಕಟಿಸಿತು.

‘ನೀತಿಮಂಜರಿ’ಯ ಎರಡನೆಯ ಭಾಗವನ್ನು ಕುರಿತು ಮದ್ರಾಸಿನ ರಾವ್ ಬಹದ್ದೂರ್ ಎಸ್. ವೆಂಗೇತರಾಯರು ‘ಇಲ್ಲಿಯ ಕನ್ನಡ ರತ್ನಗಳು ಮೂಲದವುಕ್ಕಿಂತ ಶ್ಲಾಘ್ಯವಾಗಿವೆಯೆಂದೂ, ಬೆನಗಲ್ ರಾಮರಾಯರು ಶೈಲಿ ಮತ್ತು ಮಧುರ ಗತಿಗಳ ದೃಷ್ಟಿಯಿಂದ ಈ ಭಾಗವು ಮೊದಲನೆಯ ಭಾಗವನ್ನೂ ಮೀರಿಸಿದೆ’ ಎಂದೂ ಮದರಾಸಿನ ಮತ್ತೊಬ್ಬ ಪಂಡಿತರು ‘ಕಪಿಚರಿತ್ರೆ ಮತ್ತು ನೀತಿಮಂಜರಿಗಳೆಂಬೀವೆರಡು ಕರ್ಣಾಟಕ ಭಾಷಾವನಿತೆಗೆ ನಿತ್ಯಸೌಮಂಗಲ್ಯವನ್ನು ಕಾಪಾಡತಕ್ಕ ಎರಡು ಕರ್ಣಕುಂಡಲಗಳು’ ಎಂದೂ ಸಾಧ್ವೀ ಪತ್ರಿಕೆಯು ‘ನರಸಿಂಹಾಚಾರ್ಯರು ಪೂರ್ವಶೋಧ ಮತ್ತು ಪ್ರಾಚ್ಯವಿದ್ಯಾಸಂಶೋಧನಗಳ ಕ್ಷೇತ್ರದಲ್ಲಿ ತಮಗೆ ಯೂರೋಪ್ ಮತ್ತು ಅಮೇರಿಕ ವಿದ್ವತ್ತಿನ ಮಾನ್ಯತೆಯ ಪ್ರಶಸ್ತಿಯನ್ನು ಸ್ಥಾಪಿಸಿಕೊಂಡಿದ್ದಾರೆ’ ಎಂದೂ ಒಕ್ಕಲಿಗರ ಪತ್ರಿಕೆಯು ‘ಇದಕ್ಕೆ ಸಮಸಮನಾಗಿ ತೂಗಬಲ್ಲ ಮತ್ತೊಂದು ಗ್ರಂಥವಿಲ್ಲ’ವೆಂದೂ ವೃತ್ತಾಂತ ‘ಪತ್ರಿಕೆಯು ಅಮೂಲ್ಯವೂ ರತ್ನ ಪ್ರಾಯವೂ ಆದ ಪುಸ್ತಕವೆಂದೂ’ ಮಧುರ ವಾಣಿಯು ‘ಪದಲಾಲಿತ್ಯ, ಭಾಷಾಶುದ್ಧತೆ, ವಿಷಯವಿವೇಚನೆ ಇವುಗಳು ಇಲ್ಲಿ ಬಲು ಚೆನ್ನಾಗಿದೆ’ ಎಂದೂ ಅಭಿಪ್ರಾಯವನ್ನು ಸೂಚಿಸಿದುವು.

ಆಚಾರ್ಯರು ತಮ್ಮ ವರದಿಗಳಲ್ಲಿ ಸೂಚಿಸಿರುವಂತೆ ತಮ್ಮ ಅಧಿಕಾರಾವಧಿಯಲ್ಲಿ ಕರ್ಣಾಟಕದೊಳಗಿನ ಬೇರೆ ಬೇರೆ ಸ್ಥಳಗಳಲ್ಲಿರುವ ಶಾಸನಗಳನ್ನೂ ಅವಲೋಕಿಸಿದರು. ಅವುಗಳಲ್ಲಿ ಸಾಹಿತ್ಯದೃಷ್ಟಿಯಿಂದಲೂ ಇತಿಹಾಸ ದೃಷ್ಟಿಯಿಂದಲೂ ಪ್ರಯೋಜನಕಾರಿಯಾಗಿ ಕಂಡ ೧೫೬೩ ಪದ್ಯಗಳನ್ನು ಆರಿಸಿಕೊಂಡು ‘ಶಾಸನ ಪದ್ಯಮಂಜರಿ’ ಎಂಬ ಒಂದು ಸಂಕಲನ ಗ್ರಂಥವನ್ನು ರಚಿಸಿದ್ದಾರೆ. ಈ ಸಂಕಲನವು ಕಾಲಾನುಕ್ರಮವಾಗಿರುವುದರಿಂದ ಕನ್ನಡ ಶಾಸನಗಳನ್ನು ಶಾಸ್ತ್ರೀಯವಾಗಿ ಅಭ್ಯಸಿಸುವವರಿಗೆ ವಿಶೇಷ ಪ್ರಯೋಜನಕಾರಿಯಾಗಿದೆ. ಒಂದೊಂದು ಶಾಸನದ ಕೊನೆಯಲ್ಲಿಯೂ ಅದಕ್ಕೆ ಸಂಬಂಧಿಸಿದಂತೆ ಲಘು ಟಿಪ್ಪಣಿಯಿರುವುದರಿಂದ ಇದರ ಪ್ರಯೋಜನವು ಮತ್ತಷ್ಟು ಹೆಚ್ಚಿದೆ.

‘ನಗೆಗಡಲು’ ಎಂಬುದು ಆಚಾರ್ಯರಿಂದ ರಚಿತವಾದ ಹಾಸ್ಯರಸಪ್ರಧಾನವಾದ ಕಥಾಸಂಗ್ರಹ. ೧೯೩೩ರಲ್ಲಿ ಇದು ಪ್ರಕಟವಾಗಿ ೧೯೪೬ರ ವೇಳೆಗೆ ಐದು ಪುನರ್ಮುದ್ರಣಗಳನ್ನು ಕಂಡುದರಿಂದ ಇದರ ಜನಪ್ರಿಯತೆಯನ್ನು ಊಹಿಸಿಕೊಳ್ಳ

ಬಹುದು. ಇತ್ತೀಚೆಗೆ ಇದಕ್ಕೆ ಒಬ್ಬ ಕ್ರೈಸ್ತ ಪಾದ್ರಿಯಿಂದ ರಚಿತವಾದ ಕತೆಯೊಂದು ಮೂಲವಾಗಿರಬೇಕೆಂದು ಊಹಿಸಲ್ಪಟ್ಟಿದೆ. ಗಾಂಪರೊಡೆಯರ ಶಿಷ್ಯರಾದ ಮಂಕ, ಮಡೆಯ, ಮುಠ್ಠಾಳ, ಮಟ್ಟಿಯೆಂಬುವರ ಜೀವನಚರಿತ್ರವಿದು. ಇದರಲ್ಲಿ ಆಚಾರ್ಯರ ಪರಿಹಾಸ ಮನೋಭಾವ ವಿಶದವಾಗುತ್ತದೆ.

ಆಚಾರ್ಯರು ತಮಿಳನ್ನು ಶತಾವಧಾನಂ ಮುತ್ತುಸ್ವಾಮಿಯ್ಯಂಗಾರ್ಯರವರಲ್ಲಿ ವ್ಯಾಸಂಗಮಾಡಿದರು. ಅದರ ಕೃತಜ್ಞತೆಗಾಗಿ ಅವರು ರಚಿಸಿದ 'ನೂಟ್ರೆಟ್ಟು ತ್ತಿರುಪ್ಪತಿಯಂದಾದಿ' ಯನ್ನು ಪದವೃತ್ತಿ (ಪ್ರತಿಪದಾರ್ಥ) ಮತ್ತು ತಾತ್ಪರ್ಯಗಳೊಡನೆ ಪ್ರಕಟಿಸಿದ್ದಾರೆ. ಅಲ್ಲದೆ ಮಣವಾಳ ಮಹಾಮುನಿಗಳ 'ನೂಟ್ರಂದಾದಿ'ಯೂ ಪದವೃತ್ತಿಯೊಡನೆ ಇವರಿಂದ ಪ್ರಕಟವಾಗಿದೆ.

ವಿಶ್ರಾಂತರಾದಮೇಲೆ ನರಸಿಂಹಾಚಾರ್ಯರು ಮೈಸೂರು ವಿಶ್ವವಿದ್ಯಾನಿಲಯದ ಪ್ರಾರ್ಥನೆಯ ಮೇಲೆ 'ಕನ್ನಡ ಭಾಷಾ ಚರಿತ್ರೆ' ಮತ್ತು 'ಕನ್ನಡ ಸಾಹಿತ್ಯ ಚರಿತ್ರೆ'ಗಳ ವಿಷಯವಾಗಿ ಐದೈದು (ಹತ್ತು) ಉಪನ್ಯಾಸಗಳನ್ನು ಮೈಸೂರು ಬೆಂಗಳೂರುಗಳಲ್ಲಿ ಅಪ್ಪಣೆಕೊಡಿಸಿದರು. ಅವುಗಳು ಅದೇ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಪ್ರಕಟಿತವಾಗಿವೆ. ಇವೆರಡು ಗ್ರಂಥಗಳೂ ಬಹು ವಿದ್ವತ್ಪೂರ್ಣವೂ ಪ್ರಯೋಜಕವೂ ಉಪಯುಕ್ತವೂ ಆಗಿ ಅನೇಕರ ಮೆಚ್ಚಿಗೆಗೆ ಪಾತ್ರವಾಗಿವೆ.

ಆಚಾರ್ಯರು ಸಂಗೀತಪ್ರಿಯರು ಮತ್ತು ಅದನ್ನು ಶಾಸ್ತ್ರೀಯವಾಗಿ ಅಭ್ಯಾಸಮಾಡಿದವರು. ಅವರು ಅನೇಕ ವರ್ಷಗಳ ಕಾಲ ಸಂಗೀತದ ಪರೀಕ್ಷಾ ಸಮಿತಿಗಳ ಸದಸ್ಯರಾಗಿದ್ದು ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಪ್ರಾಚೀನ ಕಾವ್ಯಗಳನೇಕವನ್ನು ಸುಶ್ರಾವ್ಯವಾಗಿ ಓದುತ್ತಿದ್ದರು. ಅವರು ಆದಿಕಾಲದಲ್ಲಿ ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದಂತೆ ಕೆಲವು ಕೃತಿಗಳನ್ನೂ ಲೇಖನಗಳನ್ನೂ ರಚಿಸಿರುವುದನ್ನು ಹಿಂದೆಯೇ ತಿಳಿಸಿದೆ.

ಆಚಾರ್ಯರಿಗೆ ಸ್ವಲ್ಪ ಕೆಲಸವಿರುತ್ತಿತ್ತು. ಪ್ರಥಮತಃ ಅವರು ಯಾವಾಗಲೂ ಯಾವ ಗ್ರಂಥದ ವಿಷಯವಾಗಿಯೂ ವಿಮರ್ಶೆಮಾಡಲು ಹೋಗುತ್ತಿರಲಿಲ್ಲ. ಒತ್ತಾಯದಿಂದ ವಿಮರ್ಶೆಮಾಡಲೇ ಬೇಕಾಗಿ ಬಂದಾಗ ತಮ್ಮ ಸ್ವಾಭಿಪ್ರಾಯವನ್ನು ವಿವೇಚನೆಯಿಂದ ನಿಷ್ಪಕ್ಷಪಾತವಾಗಿ ಸೂಚಿಸಿ ಶಾಸ್ತ್ರೀಯವಾದ ವಿಮರ್ಶೆ ಮಾಡುತ್ತಿದ್ದರು. ವಿಮರ್ಶೆಯು ಗ್ರಂಥಕರ್ತರಿಗೆ ಹಿತವಾಗದೆ ಅವರು

ತಮ್ಮ ವಿಮರ್ಶೆಯನ್ನು ವೈಯಕ್ತಿಕವಾಗಿ ಭಾವಿಸಿ ಅಪ್ರಯೋಜಕವಾದ ಚರ್ಚೆಯನ್ನು ಮುಂದುವರಿಸುವ ಸಂದರ್ಭ ಕಂಡು ಬಂದರೆ ಅದಕ್ಕಾಗಿ ನೊಂದುಕೊಂಡು ತಾವು ಚರ್ಚೆಯನ್ನು ಅಲ್ಲಿಗೆ ಮೊಟಕುಮಾಡುತ್ತಿದ್ದರು. ಸೆಂಟ್ರಲ್ ಕಾಲೇಜಿನ ಉಪಾಧ್ಯಾಯರಾಗಿದ್ದ ಆರ್. ರಘುನಾಥರಾಯರ ಗ್ರಂಥದ ವಿಷಯವಾದ ವಿಮರ್ಶೆಯ ಪ್ರಸಂಗ ಈ ವಿಷಯವನ್ನು ದೃಢಪಡಿಸುತ್ತದೆ. ಆರ್. ರಘುನಾಥರಾಯರು ತಮ್ಮ 'Essays on Kannada Grammar, Comparative and Historical' ಎಂಬ ಪುಸ್ತಕವನ್ನು ಆಚಾರ್ಯರಿಗೆ ಅವರ ಅಭಿಪ್ರಾಯಕ್ಕಾಗಿ ಪ್ರಾರ್ಥಿಸಿ ಕಳುಹಿಸಿಕೊಟ್ಟರು. ಅದಕ್ಕನುಗುಣವಾಗಿ ಆಚಾರ್ಯರು ತಮ್ಮ ನಿಷ್ಪಕ್ಷಪಾತವಾದ ಅಭಿಪ್ರಾಯವನ್ನು ಬರೆದು ಕಳುಹಿಸಿದರು. ಅದರಿಂದ ತೃಪ್ತರಾಗದ ರಾಯರು ಆಚಾರ್ಯರ ಮೇಲೆ ಸಲ್ಲದ ಕೆಲವು ಆಪಾದನೆಗಳೊಡನೆ ಆ ಅಭಿಪ್ರಾಯವನ್ನೂ ಅದರ ಮೇಲಿನ ತಮ್ಮ ಟೀಕೆಗಳನ್ನೂ ೧೮೯೪ ನೆಯ ವರ್ಷದ ಡಿಸೆಂಬರ್ ೧೧ ಮತ್ತು ೧೨ ನೆಯ ತಾರೀಖಿನ 'ಮದ್ರಾಸ್ ಮೈಲ್' ಪತ್ರಿಕೆಯಲ್ಲಿ ಆಚಾರ್ಯರ ಅನುಮತಿಯನ್ನು ಪಡೆಯದೆಯೇ ಪ್ರಕಟಿಸಿದರು. ಅದಕ್ಕೆ ಆಚಾರ್ಯರ ಉತ್ತರವು 'ಮೈಸೂರು ಹೆರಾಲ್ಡ್' ಪತ್ರಿಕೆಯ ೧೮೯೫ ನೆಯ ಜನವರಿ ೨೧ ಫೆಬ್ರವರಿ ೪ ಮತ್ತು ೧೧, ಮಾರ್ಚ ೨೧ ನೆಯ ಸಂಚಿಕೆಗಳಲ್ಲಿ ಪ್ರಕಟವಾದುವು. ಪುನಃ ರಘುನಾಥರಾಯರು ತಮ್ಮ ಉತ್ತರವನ್ನು ಕಳುಹಿಸಿದರು. ಆಚಾರ್ಯರು ಇದನ್ನು ನೋಡಿ ಇದರಲ್ಲಿ ವಿಚಾರಾರ್ಹಣೀಯವಾದ ಹೊಸ ವಿಷಯಗಳಾವುವೂ ಇಲ್ಲವೆಂದು ಮೌನವಾದರು. ಆದರೆ ಆ ವಾದಸರಣಿಗಳ ಕೆಲವು ವಿವರಗಳನ್ನು ಪರಿಚಯ ಮಾಡಿಕೊಳ್ಳುವುದು ಇಬ್ಬರ ಶೀಲಸ್ವಭಾವಗಳನ್ನೂ ತಿಳಿಯಲು ಸಹಕಾರಿಯಾಗುವುದರಿಂದ ಅವುಗಳನ್ನು ಸ್ವಲ್ಪಮಟ್ಟಿಗೆ ಪರಿಚಯ ಮಾಡಿಕೊಳ್ಳಬಹುದು. ರಘುನಾಥರಾಯರು ತಮ್ಮ ಪುಸ್ತಕದಲ್ಲಿ ಹಳಗನ್ನಡವು ಹೊಸಗನ್ನಡವಾಗುವುದಕ್ಕೆ ತೆಲುಗಿನ ಪ್ರಭಾವವೇ ಕಾರಣ ಎಂದು ಸೂಚಿಸಿದ್ದರು. ಈ ಅಭಿಪ್ರಾಯವನ್ನು ವಿಚಾರಮಾಡುತ್ತಾ ಆಚಾರ್ಯರು ಈ ಅಂಶ ಅಷ್ಟು ಒಪ್ಪತಕ್ಕದ್ದಲ್ಲವೆಂದು ತಮ್ಮ ಅಭಿಪ್ರಾಯವನ್ನು ಈ ರೀತಿ ವಿಶದಪಡಿಸಿದರು "ನಿಮ್ಮ ಪುಸ್ತಕವನ್ನು ನಾನು ಕೂಲಂಕಷವಾಗಿ ಅಭ್ಯಾಸಮಾಡಿದ್ದೇನೆ. ಅದರ ಮೊದಲನೆಯ ಭಾಗವು ಕಾಲ್ಡವೆಲ್ಲರ ಪುಸ್ತಕದ ಅಳವಡಿಕೆ. ಇದರಲ್ಲಿ ಕನ್ನಡ ಭಾಷೆಗೆ ಮೂಲವಾದ ದ್ರಾವಿಡ ಭಾಷಾವರ್ಗವನ್ನೂ ಅದರ ಸೋದರ ಭಾಷೆಗಳ ಸಂಬಂಧವನ್ನೂ

ತಿಳಿಸಿರುವುದರಿಂದ ಇಂಗ್ಲೀಷ್ ಭಾಷೆಯ ಪರಿಚಯವಿಲ್ಲದವರಿಗೆ ಸುಲಭವಾಗಿ ತಿಳಿಯಲು ಬಹು ಉಪಯುಕ್ತವಾಗಿದೆ. ಎರಡನೆಯ ಭಾಗವನ್ನು ವಿಚಾರ ಮಾಡಿದಾಗ ಹಳಗನ್ನಡ ಹೊಸಗನ್ನಡಕ್ಕೆ ಪರಿವರ್ತನೆಯಾಗುವುದಕ್ಕೆ ಕಾರಣಗಳೆಂದು ನೀವು ಸೂಚಿಸಿರುವ ತೆಲುಗಿನ ಪ್ರಭಾವಗಳೆಂದು ಬಲಾತ್ಕಾರದಿಂದ ಸಿದ್ಧಾಂತ ಮಾಡಲು ಹೊರಟಿರುವುದು ನಿಮ್ಮ ಪೂರ್ವಗ್ರಹವೆಂದು ಹೇಳದಿರಲಾರೆ. ತೆಲುಗಿನ ಪ್ರಭಾವದಿಂದ ಆದ ಬದಲಾವಣೆಗಳೆಂದು ನೀವು ಕ್ರಮಪಟ್ಟು ಸೂಚಿಸಿರುವ ಅಂಶವೆಲ್ಲ ವಿಜಯನಗರ ಸಾಮ್ರಾಜ್ಯಸ್ಥಾಪನೆಯಾಗುವುದಕ್ಕೆ ಮುಂಚೆಯೇ ಇದ್ದುವು. ಕೆಲವು ಸಿದ್ಧಾಂತಗಳಂತೂ ಅತಿ ದುರ್ಬಲವಾದ ಪೂರ್ವಪಕ್ಷಗಳ ಆಧಾರದ ಮೇಲೆ ಮಾಡಿದುವಾಗಿವೆ. ನನಗೆ ಈವಾಗ ಕಂಡುಬಂದ ಭಾಗಗಳನ್ನೆಲ್ಲ ಗುರುತು ಮಾಡಿದ್ದೇನೆ. ಮುಂದೆ ಇವುಗಳಾವುವೆಂಬುದನ್ನು ತಿಳಿಯಪಡಿಸುತ್ತೇನೆ. ಈ ವಿವಾದಾಸ್ಪದವಿಷಯಗಳನ್ನು ನೀವು ತಿಳಿಸಲೇ ಬೇಕೆಂದಿದ್ದರೆ ಅಡಿಟಿಪ್ಪಣಿಗಳಲ್ಲಿ ಕೊಡಬಹುದು. ದಯವಿಟ್ಟು ಈ ವಿಮರ್ಶೆಯನ್ನು ಸೂಕ್ತ ಮೈತ್ರಿಯಿಂದ ಅಂಗೀಕಾರಮಾಡುತ್ತೀರೆಂದು ನಂಬುತ್ತೇನೆ.'' ಎಂದು ಹೇಳಿ ತಮ್ಮ ವಿಮರ್ಶೆಗೆ ಆವಶ್ಯಕವಾದ ವಿಷಯಗಳನ್ನು ಸೂಚಿಸಿ ವಿವರವಾದ ಉತ್ತರವನ್ನು ಬರೆದರು. ರಘುನಾಥರಾಯರಿಗೆ ಈ ಉತ್ತರ ಹಿತವಾಗಲಿಲ್ಲ. ತಮ್ಮ ಸಿದ್ಧಾಂತವನ್ನು ಸ್ಥಾಪಿಸುವುದಕ್ಕಾಗಿ ಎಂಟು ಪ್ರತ್ಯೇಕ ವಿಷಯಗಳನ್ನು ಆಚಾರ್ಯರ ಗಮನಕ್ಕೆ ತಂದು ಅವರಿಗೆ ಹೀಗೆಂದು ಪತ್ರ ಬರೆದರು. 'ನಿಮ್ಮ ಎರಡನೆಯ ತಾರೀಖಿನ ಪತ್ರವನ್ನು ನೋಡಿ ನನಗೆ ಅತ್ಯಂತಾಶ್ಚರ್ಯವಾಯಿತು. ನೀವು ಸಹ ಪಾಠಕರಾಗಿದ್ದರೆ ಅದು ತಮ್ಮ ಪತ್ರವೆಂದೇ ಭಾವಿಸುತ್ತಿರಲಿಲ್ಲ. ಏಕೆಂದರೆ ಸಾಕಷ್ಟು ಕಾಲಾವಕಾಶ ಪ್ರಯುಕ್ತ ಸೂಕ್ತವಿದ್ದವನ್ನು ಚಿಂತನೆಗೆ ಸಾಧ್ಯವಿಲ್ಲದೆ ತಮ್ಮ ವಿಮರ್ಶೆಯನ್ನು ಕಳುಹಿಸಿಕೊಟ್ಟಿದ್ದೀರೆಂದು ಭಾವಿಸುತ್ತೇನೆ. ತಮ್ಮಂತಹ ಪಂಡಿತರ ಅಭಿಪ್ರಾಯಕ್ಕೆ ವಿಶೇಷ ತೂಕವಿರುತ್ತದೆ. ಆದುದರಿಂದ ಅಂತಹುದನ್ನು ಸರಿಯಾದ ವಿಮರ್ಶೆಯಿಂದ ಕೊಡತಕ್ಕದ್ದಾಗಿದೆ. ಇಲ್ಲವಾದರೆ ಅವುಗಳಿಂದ ಅಪಾಯವೇ ಹೆಚ್ಚಾಗುತ್ತದೆ. ಆದುದರಿಂದ ನಾನು ನಿಮ್ಮ ಸ್ನೇಹಿತನಾಗಿ ನೀವು ಎತ್ತಿರುವ ಸನ್ನಿವೇಶಗಳನ್ನೆಲ್ಲ ನಿಮ್ಮ ಅವಗಾಹನೆಗೆ ತರುತ್ತಿದ್ದೇನೆ.... ನಿಮ್ಮ ಯಾವ ಪುಸ್ತಕವೂ ನೀವು ನನ್ನದನ್ನು ವಿಮರ್ಶಿಸಿರುವಂತೆ ಆಗದಿರಲಿ ಎಂದು ಹಾರೈಸುತ್ತೇನೆ. ನನ್ನ ಪಕ್ಷಕ್ಕೆ ಹೇಳುವುದಾದರೆ ನೀವು ಸಕಾರಣವಾಗಿ ತೋರಿಸುವ ಯಾವ ತಪ್ಪು

ಗಳನ್ನಾದರೂ ತಿದ್ದಿಕೊಳ್ಳಲು ಸಿದ್ಧನಿದ್ದೇನೆ.'

ಆಚಾರ್ಯರು ಇದನ್ನು ನೋಡಿ ಬಹಳವಾಗಿ ನೊಂದುಕೊಂಡು 'ಮೈಸೂರು ಹೆರಾಲ್ಡ್' ಪತ್ರಿಕೆಗೆ ಈ ರೀತಿ ಬರೆದರು. ರಘುನಾಥರಾಯರು ತಮ್ಮ ಅಭಿವಂದನೆಗಳೊಡನೆ ತಮ್ಮ ಪುಸ್ತಕದ ವಿಷಯವಾಗಿ ನಾನು ಬರೆದಿದ್ದ ವಿಮರ್ಶೆಯ ಮೇಲಿನ ಟೀಕೆಯನ್ನು ನನಗೆ ಕಳುಹಿಸಿಕೊಟ್ಟರು. ಬಹುಶಃ ಇದರ ಪ್ರತಿಗಳು ಸಾರ್ವಜನಿಕರ ತಿಳುವಳಿಕೆಗಾಗಿ ಪ್ರತ್ಯೇಕವಾಗಿ ಮುದ್ರಿತವಾಗಿದ್ದಿರಬೇಕು. ಅವರ ಮಾತನ್ನೇ ಅನುವಾದ ಮಾಡುವುದಾದರೆ ಅದನ್ನು ನೋಡಿದಾಗ ನನಗೆ ಅತ್ಯಂತ ಆಶ್ಚರ್ಯವಾದುದಲ್ಲದೆ ಅವರು ಸಹಿ ಹಾಕಿರದಿದ್ದರೆ ಅದು ಅವರ ಪತ್ರವೆಂದೇ ನಂಬುತ್ತಿರಲಿಲ್ಲ. ಕಾರಣವಿಷ್ಟೆ. ರಘುನಾಥರಾಯರಂತಹ ಸಭ್ಯರು ಇಷ್ಟು ಸಾಮಾನ್ಯವಾದ ವಿಷಯವಾಗಿ ಗಾಂಭೀರ್ಯದ ಎಲ್ಲೆಯನ್ನು ಮೀರಿ ನಡೆಯಲು ಸಾಧ್ಯವೆಂಬುದನ್ನು ನನಗೆ ಊಹಿಸುವುದೇ ಕಷ್ಟವಾಗುತ್ತದೆ. ಅವರ ಅನೇಕ ಸಲದ ಪ್ರಾರ್ಥನೆಯ ಮೇಲೆ ನಾನು ಅವರ ಗ್ರಂಥವನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಿ ನನ್ನ ಪ್ರಾಮಾಣಿಕವಾದ ಅಭಿಪ್ರಾಯವನ್ನು ಕಳುಹಿಸಿಕೊಟ್ಟೆ. ನನ್ನ ಅಭಿಪ್ರಾಯವು ರಘುನಾಥರಾಯರಿಗೆ ತೃಪ್ತಿಕರವಾಗಿಲ್ಲದಿದ್ದ ಪಕ್ಷದಲ್ಲಿ ಅವರು ಆ ವಿಷಯದಲ್ಲಿ ಸಂಪೂರ್ಣವಾಗಿ ಉದಾಸೀನರಾಗಿದ್ದುಬಿಡಬಹುದಾಗಿತ್ತು. ಅಥವಾ ನನ್ನ ಟೀಕೆಗಳ ವಿಷಯದಲ್ಲಿ ನನ್ನನ್ನೇ ವಿವರಿಸಬೇಕಾಗಿ ಕೇಳಬಹುದಾಗಿತ್ತು. ಇವೆರಡನ್ನೂ ಮಾಡದೆ ಅವರು ನೇರವಾಗಿ ಪ್ರಕಟಣೆಗೆ ಹೊರಟುಬಿಟ್ಟರು. ನನ್ನ ಅಭಿಪ್ರಾಯದ ಮೇಲೆ ಟೀಕೆ ಮಾಡಲು ಹೊರಟ ಅವರು ನನ್ನ ಅನುಮತಿಯನ್ನು ಕೇಳಿಯೇ ನನ್ನ ಅಭಿಪ್ರಾಯವನ್ನು ಪ್ರಕಟ ಮಾಡಬೇಕಾಗಿತ್ತೆಂಬುದು ಸಾಮಾನ್ಯ ನೀತಿಗೆ ಸೇರಿದ ವಿಷಯವಾಗಿದೆ.

ಅವರ ಟೀಕೆಗೆ ಒಂದಾದ ಮೇಲೊಂದರಂತೆ ಕ್ರಮವಾಗಿ ಉತ್ತರ ಕೊಡಲು ಹೊರಡುವುದಕ್ಕಿಂತ ಮುಂಚೆ ಅವರ ಟೀಕೆಯ ವಿಷಯವನ್ನು ಕುರಿತು ವಾಚಕರಿಗೆ ಈ ಕೆಲವು ಅಂಶಗಳನ್ನು ತಿಳಿಯಪಡಿಸಲು ಇಚ್ಛಿಸುತ್ತೇನೆ. ಮೊದಲನೆಯದಾಗಿ ಅವರಿಗೆ ಗ್ರಂಥದ ವಿಮರ್ಶಕರಿಗೇ ತಾವೇ ಸಲಹೆಗಳನ್ನು ಕೊಡಬೇಕೆಂಬ ತವಕ ಮತ್ತು ಧಾರ್ಷ್ಟ್ಯ. ಎರಡನೆಯದಾಗಿ ಅವರ ಆಕ್ಷೇಪಣೀಯವಾದ ನುಡಿಗಳಿಂದ ಕೂಡಿದ ವಿಮರ್ಶನ ರೀತಿ ಮತ್ತು ವಿಮರ್ಶೆಗಳನ್ನೂ ಖಂಡನೆಗಳನ್ನೂ ಸಹಿಸದ ಅವರ ಅಸಹನ ಮನೋಭಾವ. ಹೀಗೆಂದು ಪ್ರಾರಂಭಿಸಿ ಅವರ

ಒಂದೊಂದು ಆಕ್ಷೇಪಣೆಗಳನ್ನೂ ಸಾವಧಾನವಾಗಿ ಖಂಡಿಸಿ ಕೊನೆಯಲ್ಲಿ ಹೀಗೆ ಮುಗಿಸಿದ್ದಾರೆ. 'ನಾನು ಈ ರೀತಿ ರಾಯರ ಆಕ್ಷೇಪಣೆಗಳಿಗೆಲ್ಲ ಕೂಲಂಕಷವಾದ ಉತ್ತರವನ್ನು ಕೊಟ್ಟು, ಈಗ ಸರಿಯಾದ ಪರಾಮರ್ಶೆಯ ಮೇಲೆ ನನ್ನ ಅಭಿಪ್ರಾಯವನ್ನು ಸೂಚಿಸಿದ್ದೇನೆಯೋ ಇಲ್ಲವೋ ಎಂಬುದನ್ನು ವಾಚಕರಿಗೆ ಬಿಟ್ಟಿದ್ದೇನೆ. ತೆಲುಗು ಕನ್ನಡದ ಮೇಲೆ ಪ್ರಭಾವವನ್ನು ಬೀರಿದೆಯೆಂಬುದು ಒಂದು ವಾದ ಮಾತ್ರ. ಅದನ್ನು ಸಿದ್ಧಾಂತ ಮಾಡಲು ಸಂದಿಗ್ಧವಲ್ಲದ ಅನೇಕ ಸಾಧನಗಳು ಬೇಕು. ರಾಯರು ಸೂಚಿಸಿರುವ ಸೂಚನೆಗಳು ಅವರ ವಾದವನ್ನು ಸಿದ್ಧಾಂತ ಮಾಡಲು ಸಾಕಷ್ಟು ತೃಪ್ತಿಕರವಾಗಿಲ್ಲ. ಅವರ ವಾದಗಳಲ್ಲಿ ಬಹುಮಟ್ಟಿಗೆ ಏಕಪಕ್ಷೀಯವೂ ಬಹು ಆತುರದಿಂದ ಸ್ಥೂಲವಾಗಿ ವಿಚಾರ ಮಾಡದವುಗಳೂ ಆಗಿರುತ್ತವೆ. ನನ್ನ ವಿಮರ್ಶೆಯ ಮೇಲೆ ನನಗೆ ತಿಳುವಳಿಕೆ ಕೊಡುವುದಕ್ಕಾಗೆಂದು ಅವರು ಹೇಳಿರುವ ಯಾವ ಅಂಶವೂ ನನ್ನ ಪೂರ್ವಸಿದ್ಧಾಂತವನ್ನು ಪ್ರತ್ಯಾಖ್ಯಾನ ಮಾಡಲು ಶಕ್ತವಾಗಿಲ್ಲ. ಅಲ್ಲದೆ ಯಾರೊಬ್ಬರನ್ನೂ ಭಿನ್ನಾಭಿಪ್ರಾಯಗಳನ್ನು ಹೊಂದಿರುವುದಕ್ಕಾಗಿ ನಿಂದಿಸಬಾರದು. ಅವರ ವಾದದ ರೀತಿ ತೀರ ಆಕ್ಷೇಪಣೀಯವಾದುದೆಂದು ನಾನು ಹೇಳದಿರಲಾರೆ. ವಿಚಾರ ವಿನಿಮಯ ಮಾಡುವಾಗ ವ್ಯಕ್ತಿನಿಂದೆ ಬಹು ಹೇಯವಾದುದು. ಕೊನೆಯಲ್ಲಿ ಅವರು ಆಡಿರುವ 'ನಿಮ್ಮ ಯಾವ ಗ್ರಂಥವೂ ನೀವು ನನ್ನ ಗ್ರಂಥವನ್ನು ವಿಮರ್ಶೆ ಮಾಡಿರುವ ರೀತಿಯಲ್ಲಿ ಆಗದಿರಲಿ' ಎಂಬ ವಾಕ್ಯದ ವಿಷಯವಾಗಿ ಒಂದು ಮಾತನ್ನು ತಿಳಿಸಬೇಕೆಂದು ಇಚ್ಛಿಸುತ್ತೇನೆ. ಇದು ರಾಯರು ನನ್ನ ವಿಮರ್ಶೆಯ ಮೇಲೆ ಮಾಡಿರುವ ವ್ಯಾಖ್ಯಾನದ ವೈಖರಿ. ಅದು ನನ್ನ ವಿಮರ್ಶೆಯು ಯಾವುದೋ ಒಂದು ವೈಯಕ್ತಿಕವಾದ ದುರಭಿಪ್ರಾಯದಿಂದ ಮಾಡಿದುದು ಎಂಬ ಅಭಿಪ್ರಾಯವನ್ನು ಸೂಚಿಸುತ್ತದೆ. ಆದರೆ ಇದು ನನ್ನ ನಿಷ್ಪಕ್ಷಪಾತವಾದ ಪ್ರಾಮಾಣಿಕ ಅಭಿಪ್ರಾಯವೆಂದು ತಿಳಿಸಲು ಬಯಸುತ್ತೇನೆ. ನನ್ನ ಮಟ್ಟಿಗೆ ಹೇಳುವುದಾದರೆ ನಾನು ಯಾವ ವಿಧವಾದ ಟೀಕೆ ವಿಮರ್ಶೆಗಳನ್ನಾದರೂ— ರಾಯರಿಂದಲೇ ಬಂದವನ್ನೂ—ಸಂತೋಷವಾಗಿ ಸ್ವಾಗತಿಸುತ್ತೇನೆ. ವಿಮರ್ಶೆಯೇ ಅದರ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ. ನನಗೆ ಈ ವಾಗ್ವಾದವನ್ನು ಮುಂದುವರಿಸಲು ಕಾಲವಾಗಲಿ ಆಸಕ್ತಿಯಾಗಲಿ ಇಲ್ಲ' ಎಂದು ಮುಗಿಸಿದ್ದಾರೆ. ಮೇಲೆಯೇ ತಿಳಿಸಿರುವಂತೆ ಈ ವಿಚಾರ ಸರಣಿಯು ವ್ಯಕ್ತಿದ್ವಯರ ಸ್ವಭಾವ ಕಥನವನ್ನು ಸ್ಪಷ್ಟವಾಗಿ ಮಾಡತಕ್ಕವಾಗಿವೆ.

ಆಚಾರ್ಯರ ಶೀಲಸ್ವಭಾವಗಳು

ಈ ಪ್ರಬಂಧವನ್ನು ಮುಗಿಸುವ ಮೊದಲು ಆಚಾರ್ಯರ ಶೀಲಸ್ವಭಾವಗಳನ್ನು ಸ್ವಲ್ಪ ವಿಚಾರ ಮಾಡಬಹುದು. ಆಚಾರ್ಯರು ನಿಷ್ಠಾವಂತರಾದ ವೈದಿಕರು. ಶ್ರೀ ವೈಷ್ಣವ ಬ್ರಾಹ್ಮಣವರ್ಗದಲ್ಲಿ ಸ್ವಯಮಾಚಾರ್ಯ ಮನೆತನಕ್ಕೆ ಸೇರಿದವರು. ಅವರಲ್ಲಿ ಯಾವ ವಿಧವಾದ ದುರಾಚಾರಗಳಿರಲಿಲ್ಲ. ಸ್ನಾನ ಸಂಧ್ಯಾವಂದನೆ ದೇವರ ಪೂಜೆಗಳಿಲ್ಲದೆ ಎಂದೂ ಆಹಾರ-ಸ್ವೀಕಾರ ಮಾಡಿದವರಲ್ಲ. ಸಂಚಾರದ ಕಾಲಗಳಲ್ಲಿಯೂ ಈ ನಿಯಮಕ್ಕೆ ಯಾವ ಸಡಿಲತೆಯಿರಲಿಲ್ಲ. ಕರ್ತವ್ಯನಿಷ್ಠೆಯಂತೂ ಬಹು ಆದರ್ಶಸ್ವರೂಪವಾದುದು. ಅವರು ಸರ್ಕಾರಿ ಕೆಲಸವನ್ನು ಸ್ವಂತ ಕೆಲಸದಂತೆಯೇ ಭಾವಿಸಿದ್ದರು. ಮಗನ ಉಪನಯನಕ್ಕೆ ಹೋದಾಗಾಗಲಿ ತಿರುಪತಿ ಶ್ರೀನಿವಾಸನ ಸಂದರ್ಶನಕ್ಕೆ ನಡೆದಾಗಾಗಲಿ ಅಲ್ಲಿ ಸಾಧ್ಯವಾದ ಎಲ್ಲ ರೀತಿಯ ಕಾರ್ಯಗಳನ್ನೂ ಮುಗಿಸಿಕೊಂಡು ಬರುತ್ತಿದ್ದರು. ಅವರಿಗೆ ವಿರಾಮವೆಂಬುದು ತನ್ನ ಕರ್ತವ್ಯದಿಂದ ದೂರಗಿರುವುದೆಂಬ ಭಾವನೆಯೇ ವಿನಾ ಕಾರ್ಯದಿಂದ ವಿರಾಮವೆಂದಲ್ಲ. ತಮ್ಮ ಈ ವಿಧವಾದ ಕಾರ್ಯನಿಷ್ಠೆಯನ್ನು ತಮ್ಮ ಕೈಕೆಳಗಿನ ಸಹಾಯಕ ತಂಡದವರಲ್ಲಿಯೂ ನಿರೀಕ್ಷಿಸುತ್ತಿದ್ದರು. ಸಂಚಾರಕಾಲದಲ್ಲಿ ಶಾಸನ ಸಂಗ್ರಹ ಮತ್ತು ಕಲಾಕೃತಿಗಳ ಸಂದರ್ಶನದ ವಿಷಯದಲ್ಲಿ ಅವರು ತಮ್ಮ ಪಂಡಿತ ವರ್ಗದೊಡನೆ ಹೇಗೆ ನಿರ್ವಹಿಸುತ್ತಿದ್ದರೆಂಬುದನ್ನು ಅವರ ಸಹಾಯಕಾಧಿಕಾರಿಗಳಾಗಿದ್ದ ಆರ್. ರಾಮರಾಯರು ಬಹು ಶ್ರದ್ಧೆಯಿಂದ ವಿವರಿಸಿದ್ದಾರೆ. ಇದು ಅವರ ವಿವರಣೆಯ ಸಂಗ್ರಹ. 'ಪ್ರಾಚೀನ ವಸ್ತುಸಂಗ್ರಹಕ್ಕಾಗಿ ನಾವು ಸಂಚಾರ ಹೊರಟ ಕಾಲದಲ್ಲಿ (ನಾವು ಅಂದರೆ, ಡೈರೆಕ್ಟರು, (ನರಸಿಂಹಾಚಾರ್ಯರು,) ನಾನು, ಪಂಡಿತ ಕೋಗಿರೆ ನಂಜುಂಡ ಶಾಸ್ತ್ರಿಗಳು, ಇಬ್ಬರು ಆಳುಗಳು) ಪ್ರಾತಃಕಾಲ ೫ ಗಂಟೆಗೆ-(ಕಾಫಿ ತಿಂಡಿ ಮೊದಲಾದ ಯಾವ ಸೇವನೆಯಿಲ್ಲದೆ— ನರಸಿಂಹಾಚಾರ್ಯರಿಗೆ ಕಾಫಿಯ ಅಭ್ಯಾಸವೇ ಇರಲಿಲ್ಲ—ನಾವೂ ಅವರನ್ನು ಅನುಸರಿಸಬೇಕಾಗಿತ್ತು) ಕಾಲುನಡಿಗೆಯಲ್ಲಿಯೇ ಪ್ರಾಚೀನವಸ್ತು ಸಂಗ್ರಹಗಳಿಗಾಗಿ— ವೀರಗಲ್ಲು, ಮಾಸ್ತಿಕಲ್ಲು, ಸಪ್ತಮಾತೃಕಾ ಶಿಲೆ, ಮುರುಕಲು ಗೃಹಗಳು, ಹಳೆಯ ದೇವಾಲಯಗಳು, ಮಾರಿಗುಡಿಗಳು, ಕೆರೆಯ ಕೋಡಿಗಳು, ಪ್ರಾಚೀನ ನಿವೇ

ಶನಗಳು) ಹೊರಡುತ್ತಿದ್ದೆವು. ದಾರಿಯಲ್ಲಿ ಸಿಕ್ಕಿದ ಪ್ರತಿಯೊಂದು ವಿಷಯವನ್ನೂ ಕುರಿತು ಟಿಪ್ಪಣಿಗಳನ್ನು ಗುರುತು ಮಾಡಿಕೊಳ್ಳುತ್ತಿದ್ದೆವು. ಅವಶ್ಯಕವಿದ್ದರೆ ಅದರ ನಕ್ಷೆಯನ್ನು ತಯಾರಿಸುತ್ತಿದ್ದೆವು. ಶಾಸನಗಳಾದರೆ ಅವುಗಳನ್ನು ನಾವು ತೆಗೆದು ಕೊಂಡು ಹೋಗಿದ್ದ 'ಎಪಿಗ್ರಾಫಿಯ ಕರ್ನಾಟಿಕದ' ಸಂಪುಟಗಳ ಶಾಸನ ಗಳೊಡನೆ ಹೋಲಿಸುತ್ತಿದ್ದೆವು. ಅದರ ಪ್ರತಿ (Estampage) ನಮ್ಮಲ್ಲಿದ್ದರೆ ಸರಿ ಇಲ್ಲವಾದರೆ ಹೊಸಪ್ರತಿಯನ್ನು ತೆಗೆದುಕೊಳ್ಳುತ್ತಿದ್ದೆವು. ಪುಸ್ತಕದ ಪಾಠಕ್ಕೂ ಕಲ್ಲಿನಲ್ಲಿರುವ ಭಾಗಕ್ಕೂ ಹೋಲಿಸಿ ಪ್ರಕಟವಾಗಿರುವ ಭಾಗಗಳಲ್ಲಿರಬಹುದಾದ ತಪ್ಪುಗಳನ್ನು ತಿದ್ದಿಕೊಳ್ಳುತ್ತಿದ್ದೆವು. ಪ್ರಕಟವಾಗದ ಹೊಸ ಶಾಸನವಾಗಿದ್ದರೆ ಅದನ್ನು ನೆಲದಲ್ಲಿರುವುದಾದರೆ ಅಗೆಸಿ ಮೇಲಕ್ಕೆ ತೆಗೆದು ಗೋಡೆಯಲ್ಲಿದ್ದರೆ ಸುತ್ತುಮುತ್ತಲಿನ ಭಾಗದಿಂದ ಪ್ರತ್ಯೇಕಿಸಿ ಕುಂಚದಿಂದ ಚೆನ್ನಾಗಿ ತೊಳೆದು ಶಾಸ್ತ್ರೀಯವಾಗಿ ಅದರ ಕಾಗದ ಪ್ರತಿಕೃತಿ (Estampage) ಯನ್ನು ತೆಗೆದು ಆಮೇಲೆ ಕಲ್ಲಿಗೆ ಚಂಪ್ರದ ಅಥವಾ ಸೀಮೆಸುಣ್ಣದ ಪುಡಿಯನ್ನು ಬಳಿದು ಒರೆಸಿ ಕಣ್ಣಿನಿಂದ ಕಲ್ಲಿನ ಮೇಲೆ ಓದಿ ಅದರ ಪ್ರತಿಮಾಡಿಕೊಂಡು ಕಾಗದ ಪ್ರತಿಕೃತಿಗೆ ತಾಳೆ ನೋಡಿ ವ್ಯತ್ಯಾಸವಿದ್ದರೆ ಗುರುತು ಮಾಡಿಕೊಂಡು ಅಲ್ಲಿಯ ಶಾಸನ ಸಿಕ್ಕಿದ ಸ್ಥಳ, ವಿವರ, ವಿಳಾಸ ಮೊದಲಾದವುಗಳನ್ನು ಗುರುತುಮಾಡಿಕೊಂಡು ಸುಮಾರು ೧೨ ಅಥವಾ ಮಧ್ಯಾಹ್ನ ಒಂದು ಗಂಟೆಗೆ ನಾವಿಳಿದುಕೊಂಡ ಸ್ಥಳಕ್ಕೆ ಬಂದು ಆಹಾರಾದಿಗಳನ್ನು ಮುಗಿಸಿಕೊಂಡು ಮಧ್ಯಾಹ್ನ ನಾವು ಬೆಳಗ್ಗೆ ತಂದ ವಸ್ತುಗಳ ಸರಿಯಾದ ಪಟ್ಟಿಯನ್ನು ಮಾಡಿ ಅದಕ್ಕೆ ಸೂಕ್ತ ವಿವರ ಸಹಿತವಾದ ಚೀಟಿ ಗಳನ್ನು ಅಂಟಿಸಿ ಸಿದ್ಧಪಡಿಸುತ್ತಿದ್ದೆವು. ಈ ಕಾರ್ಯವು ಪ್ರತಿದಿನವೂ ಪುನರಾ ವರ್ತನೆಯಾಗುತ್ತಿತ್ತು. ಕಚೇರಿಗೆ ತಿರುಗಿದ ಮೇಲೆ ಪಂಡಿತರು ಶಾಸನಗಳ ಸಂಪೂ ರ್ಣ ಪ್ರತಿಯನ್ನು ಸಿದ್ಧಪಡಿಸಿ, ಅದನ್ನು ಭಾಷಾಂತರಿಸಿ, ರೋಮನ್ ಲಿಪಿಯಲ್ಲಿ ಅದರ ಮೂಲವನ್ನು ಸಿದ್ಧಪಡಿಸಿ ಪ್ರತಿಕೃತಿಗಳೊಡನೆ ಸರಿಯಾಗಿ ಡೈರೆಕ್ಟರಿಗೆ ಸಲ್ಲಿಸಬೇಕಾಗಿತ್ತು. ವಿವರಣೆ 'ಟಿಪ್ಪಣಿ' ವ್ಯಾಖ್ಯಾನಗಳನ್ನು ಮಾತ್ರ ಅವರೇ ಮಾಡಬೇಕಾಗಿತ್ತು. ಆದಾದ ಮೇಲೆ ಅಂತ್ಯ ಪ್ರತಿ ಮುದ್ರಣಕ್ಕೆ ಸಿದ್ಧವಾಗುತ್ತಿತ್ತು. ವಾಸ್ತು ಶಿಲ್ಪಕ್ಕೆ ಸಂಬಂಧ ಪಟ್ಟ ವಿಷಯವಾದರೆ ಕೆಲವು ಸಲ ಕಚೇರಿಯ ಛಾಯಾ ಗ್ರಾಹಕ ಮತ್ತು ಅವರ ಸಹಾಯಕರು ಡೈರೆಕ್ಟರ ಜೊತೆಯಲ್ಲಿಯೂ ಮತ್ತೆ ಕೆಲವು ಸಲ ಪ್ರತ್ಯೇಕವಾಗಿಯೂ ಹೋಗಿ ಕಲಾಕೃತಿಗಳ ಛಾಯಾಚಿತ್ರವನ್ನು ತೆಗೆದುಕೊಂಡು

ನಕ್ಷೆಯನ್ನು ಗುರುತಿಸಿಕೊಂಡು ಕಛೇರಿಗೆ ಬಂದು ಅವನ್ನು ಪೂರ್ಣಗೊಳಿಸಿ ವಿಮರ್ಶೆ ಮತ್ತು ಟಿಪ್ಪಣಿಗಳಿಗಾಗಿ ಡೈರೆಕ್ಟರಿಗೆ ನಿವೇದಿಸಬೇಕಾಗಿತ್ತು. ವಿಮರ್ಶೆ ಮಾಡುವ ಸಂದರ್ಭದಲ್ಲಿ ನರಸಿಂಹಾಚಾರ್ಯರ ಅಗಾಧ ಪಾಂಡಿತ್ಯವೂ ಅನುಭವವೂ ಎಂತಹವರನ್ನೂ ದಂಗುಬಡಿಸುತ್ತಿತ್ತು. ಯಾವ ಸಿದ್ಧಾಂತವನ್ನೂ ಅವರು ಅಸಂದಿಗ್ಧವಾದ ಸಂಪೂರ್ಣ ಸಾಧನಗಳಿಲ್ಲದೆ ಅಂಗೀಕರಿಸುತ್ತಿರಲಿಲ್ಲ. ಅಲ್ಲದೆ ಅವರಲ್ಲಿದ್ದ ಉತ್ತಮಗುಣವೆಂದರೆ ತಮ್ಮ ಅಧಿಕಾರಿಗಳಲ್ಲಿ ಪ್ರತ್ಯೇಕವಾಗಿ ಸ್ವತಃ ನಡಸಿದ ಕಾರ್ಯವನ್ನು ಅವರವೇ ಎಂದು ನಿರ್ದೇಶಿಸಿ ಅವರ ಭಾಗಕ್ಕೆ ಸೂಕ್ತ ಮರ್ಯಾದೆಗಳನ್ನು ಸಲ್ಲಿಸುತ್ತಿದ್ದರು. ತಮ್ಮ ನೇತೃತ್ವದಲ್ಲಿ ನಡೆದಿದ್ದರೂ ಇದು ಇಂತಹವರಿಂದ ಮಾಡಿದುದು ಎಂಬುದನ್ನು ಖಚಿತವಾಗಿ ತಿಳಿಯಪಡಿಸುತ್ತಿದ್ದರು. ತಾವು ಬರೆದ ವಿಷಯದಲ್ಲಿಯೇ ಮುಂದೆ ತಪ್ಪುಗಳು ಕಂಡು ಬಂದರೆ ತಿದ್ದಿಕೊಳ್ಳುತ್ತಿದ್ದರಲ್ಲದೆ ಅಷ್ಟೇ ನಿರ್ದಾಕ್ಷಿಣ್ಯದಿಂದ ಎಲ್. ಡಿ. ಬಾರ್ನೆಟ್ ಅಂತಹ ಪರೋಕ್ಷ ವಿದ್ವಾಂಸರ ಸ್ಖಾಲಿತ್ಯಗಳನ್ನೂ ಸಾಧಾರಣವಾಗಿ ಗುರುತಿಸುತ್ತಿದ್ದರು. ಅಂತಹ ಸಂದರ್ಭದಲ್ಲಿ ಅವರು ಆಚಾರ್ಯರನ್ನು ಮುಕ್ತಕಂಠದಿಂದ ಕೃತಜ್ಞತಾಪೂರ್ವಕವಾಗಿ ಶ್ಲಾಘಿಸಿದ್ದಾರೆ.'

ಆಚಾರ್ಯರು ತಾವು ವಿಶ್ರಾಂತಿಯನ್ನು ಪಡೆಯುವುದಕ್ಕೆ ಪೂರ್ವಭಾವಿಯಾಗಿ ೧೯೨೨ರಲ್ಲಿ ಪ್ರಕಟಿಸಿದ ತಮ್ಮ ಕೊನೆಯ ವರದಿಯಲ್ಲಿ ತಮ್ಮ ಸಿಬ್ಬಂದಿಯ ಒಬ್ಬೊಬ್ಬರಿಂದ ಆದ ಸಹಾಯವನ್ನು ಕೃತಜ್ಞತೆಯಿಂದ ಸ್ಮರಿಸಿದ್ದಾರೆ.

ಆರ್. ನರಸಿಂಹಾಚಾರ್ಯರು ಬಹು ಉದಾರಿಗಳು. ಅವರ ಮನೆಯಲ್ಲಿ ಯಾವಾಗಲೂ ೩-೪ ಜನ ವಾರದ ಭೋಜನವನ್ನು ಪಡೆಯುತ್ತಿದ್ದ ವಿದ್ಯಾರ್ಥಿಗಳಿರುತ್ತಿದ್ದರು. ಅವರ ಬಂಧುಪ್ರೇಮ ಅನ್ಯಾದೃಶ್ಯವಾದುದು. ತಮ್ಮ ಷಷ್ಟ್ಯಬ್ದಿ ಶಾಂತಿ ಸಂದರ್ಭದಲ್ಲಿ ತಮ್ಮ ಬಂಧು ಮಿತ್ರವರ್ಗಕ್ಕೆ ಸೇರಿದ ೬೦ ದಂಪತಿಗಳಿಗೆ ತಲಾ ಒಂದು ಬೆಳ್ಳಿಯ ಚೊಂಬನ್ನೂ ಪ್ರತಿ ವರ್ಷವೂ ದೀಪಾವಳಿಯಂದು ಹೊಸ ವಸ್ತ್ರ ಧಾರಣೆಗೆ ಅನುಕೂಲವಾಗುವಂತೆ ಒಬ್ಬೊಬ್ಬರಿಗೂ ೧೦೦ ರೂಪಾಯಿನ ಸರ್ಕಾರಿ ಬಾಂಡನ್ನೂ (ಸಾಲದ ಪತ್ರ) ದಾನ ಮಾಡಿದರಂತೆ.

ಅವರು ಸಾಮಾಜಿಕ ದೃಷ್ಟಿಯಿಂದ ಅನೇಕ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಬೆಳಸಿದ್ದಾರೆ. ಬೆಂಗಳೂರು ಮಲ್ಲೇಶ್ವರದ ವೇಣುಗೋಪಾಲಸ್ವಾಮಿ ದೇವಸ್ಥಾನ, ಮೈಸೂರು ಮಂಡ್ಯಂ ಅಸೋಸಿಯೇಷನ್, ಮೇಲುಕೋಟೆಯ ಉಭಯ ವೇದಾಂತ

ಪ್ರವರ್ತನ ಸಭೆ ಮತ್ತು ಯತಿರಾಜಮಠ—ಇವುಗಳಿಗೆ ಆಚಾರ್ಯರಿಂದ ವಿಶೇಷ ಸೇವೆ ಸಂದಿದೆ. ಉಭಯ ವೇದಾಂತ ಪ್ರವರ್ತನ ಸಭೆಯ ಸ್ಥಾಪಕಸದಸ್ಯರಾಗಿ ಪ್ರಾರಂಭ ಮಾಡಿ ಅವರ ಆಜೀವಪರ್ಯಂತ ಅದರ ಕಾರ್ಯದರ್ಶಿಗಳಾಗಿದ್ದುಕೊಂಡು ಪ್ರತಿ ವರ್ಷವೂ ಶ್ರೀ ರಾಮಾನುಜಾಚಾರ್ಯರ ತಿರುನಕ್ಷತ್ರದ ಕಾಲದಲ್ಲಿ ವೇದಶಾಸ್ತ್ರಗಳ ಪರೀಕ್ಷೆಗಳನ್ನೇರ್ಪಡಿಸಿ ಅನೇಕ ವಿದ್ಯಾರ್ಥಿಗಳಿಗೆ ಉದಾರ ಬಹುಮಾನಗಳನ್ನು ನೀಡುತ್ತಿದ್ದುದಲ್ಲದೆ ಬಹುಮಾನ ಸಭೆಗೆ ಉದ್ದಾಮ ವಿದ್ವಾಂಸರನ್ನು ಆಹ್ವಾನಿಸಿ ಅವರಿಂದ ಅಮೋಘ ಭಾಷಣಗಳನ್ನೇರ್ಪಡಿಸಿದ್ದಾರೆ. ಅಲ್ಲದೆ ಆ ಪರೀಕ್ಷಾ ವಿದ್ಯಾರ್ಥಿಗಳ ಸಹಾಯಕ್ಕಾಗಿ ವೇದ ಮತ್ತು ಸ್ತೋತ್ರಗಳಿಗೆ ಸಂಬಂಧಪಟ್ಟಂತೆ ಅನೇಕ ಕಿರುಹೊತ್ತಗೆಗಳನ್ನು ಪ್ರಕಟಪಡಿಸಿದ್ದಾರೆ. ಅಲ್ಲದೆ ಬೆಂಗಳೂರಿನಲ್ಲಿ ವೇದ ಶಾಸ್ತ್ರಗಳ ಶಿಕ್ಷಣಕ್ಕಾಗಿ ಪ್ರತ್ಯೇಕ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿ ನಡೆಸಿಕೊಂಡು ಬಂದಿದ್ದಾರೆ.

ಆಚಾರ್ಯರ ನಿಧನ ಮತ್ತು ಅವರ ಅಂತ್ಯಸ್ಮರಣೆ

ಆಚಾರ್ಯರು ಬಹು ವೃದ್ಧರಾಯಿದರು. ಕ್ರಮಬದ್ಧವಾದ ಜೀವನವನ್ನು ನಡೆಸುತ್ತಿದ್ದರು. ತಾರುಣ್ಯದಲ್ಲಿ ಚೆನ್ನಾಗಿ ಅಂಗಸಾಧನೆಯನ್ನು ಮಾಡಿದವರು. ಬಹು ಭಾರವಾದ ಕರೇಲಾ(ಗದೆ)ಗಳನ್ನು ತಿರುಗಿಸುತ್ತಿದ್ದರು. ಕ್ರಿಕೆಟ್ ಆಟದಲ್ಲಿ ನಿಷ್ಣಾತರು. ತಮ್ಮ ಅಂತ್ಯಕಾಲದ ವೃದ್ಧಾಪ್ಯದಲ್ಲಿಯೂ ನಿತ್ಯವಾದ ಪ್ರಾತಃಕಾಲದ ದೀರ್ಘಸಂಚಾರವನ್ನು ತಪ್ಪಿಸುತ್ತಿರಲಿಲ್ಲ. ಅಂತಹ ಒಂದು ದಿನದ ಸಂಚಾರ ಕಾಲದಲ್ಲಿಯೇ ೧೯೩೬ನೆಯ ಡಿಸೆಂಬರ್ ೬ನೆಯ ತಾರೀಖು ಅವರು ದಿವಂಗತರಾದರು. ಅದರಿಂದ ಕನ್ನಡನಾಡಿಗೇ ಅಲ್ಲದೆ ಭರತಖಂಡಕ್ಕೆ ದೊಡ್ಡ ನಷ್ಟ ಸಂಭವಿಸಿತು. ಆ ಸಂದರ್ಭದಲ್ಲಿ ಕನ್ನಡನಾಡಿನ ಸಂಘಸಂಸ್ಥೆಗಳನೇಕವು ಅವರ ಗುಣಗಾನ ಮಾಡಿ ಕಂಬನಿಯಿಟ್ಟವು. ಅವುಗಳಲ್ಲಿ ಒಂದೆರಡನ್ನು ಅನುವಾದಮಾಡಿ ಈ ಪ್ರಬಂಧವನ್ನು ಮುಗಿಸುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯದ ಸುಪ್ರಸಿದ್ಧವಾದ ಕನ್ನಡ ಪತ್ರಿಕೆಯಾದ ಪ್ರಬುದ್ಧ ಕರ್ಣಾಟಕವು ತನ್ನ ಸಂಪಾದಕೀಯದಲ್ಲಿ ಹೀಗೆಂದು ಬರೆದಿಟ್ಟಿದೆ- 'ನರಸಿಂಹಾಚಾರ್ಯರಂಥ ವಿದ್ವಾಂಸರು ದೊರೆಯುವುದು ದುರ್ಲಭ. ವಿದ್ವತ್ತು, ಅನೇಕ ಭಾಷೆಗಳಲ್ಲಿ ಇದ್ದ ಸಲಿಗೆ, ವಿಷಯವಿಮರ್ಶೆ, ನಿಷ್ಕೃಷ್ಟವಾದ ಪರಿಜ್ಞಾನ, ತಿಳಿಯದಿದ್ದಾಗ ತಿಳಿದಿಲ್ಲವೆಂದು ಒಪ್ಪಿಕೊಳ್ಳುವ ಪ್ರಾಮಾಣಿಕತೆ, ತಿಳಿದಮೇಲೆ ಅವರಿಗಾಗುತ್ತಿದ್ದ ಸಂತೋಷ, ತಿಳಿಸಿದವರನ್ನು ಮೆಚ್ಚಿಕೊಳ್ಳುತ್ತಿದ್ದ ಬಗೆ—ಇವೆಲ್ಲ ಶ್ರೀಮಾನ್ ಆಚಾರ್ಯರ ಗುಣಗಳಲ್ಲಿ ಮುಖ್ಯವಾದುವು. ಅವರನ್ನು ಒಂದು ಸಲ ನೋಡಿ ಮಾತಾಡಿದವರು ಅವರ ಸೌಜನ್ಯವನ್ನು ಎಂದೂ ಮರೆಯಲಾರರು. ಸುಮಾರು ಅಯ್ವತ್ತು ವರ್ಷಗಳ ಕಾಲ ಅವರು ಕನ್ನಡ ಭಾಷಾ ಸಾಹಿತ್ಯಗಳಿಗೆ ದುಡಿದಿದ್ದಾರೆ. ಕನ್ನಡಕ್ಕೆ ಬಂದಿರುವ ಪ್ರಾಶಸ್ತ್ಯ ಗೌರವಗಳಿಗೆ ಬಹುಮಟ್ಟಿಗೆ ಕಾರಣರಾದವರಲ್ಲಿ ಶ್ರೀಮಾನ್ ಆಚಾರ್ಯರು ಅಗ್ರಗಣ್ಯರು. ಕನ್ನಡದಲ್ಲಿಯೂ ವಿದ್ವತ್ತಿಗೆ ಅವಕಾಶವಿದೆ ಎಂಬುದನ್ನು ತೋರಿಸಿಕೊಟ್ಟವರು ಅವರು. ಕನ್ನಡವನ್ನು ಕಣ್ಣೆತ್ತಿಕೂಡ ನೋಡಲು ಹಿಂಜರಿಯುತ್ತಿದ್ದ ಕಾಲದಲ್ಲಿ ಬೇರೆ ಮುಖದಲ್ಲಿ ಹರಿದು ಸುಲಭವಾಗಿ ಖ್ಯಾತಿಯನ್ನು ಪಡೆಯುವ ಶಕ್ತಿಯಿದ್ದ ಅವರ ಪಾಂಡಿತ್ಯವು ಕನ್ನಡಕ್ಕೆ ಮೀಸಲಾಗಿ ತಿರುಗಿ ಆ ಭಾಷಾ ಸಾಹಿತ್ಯಗಳ

ಹಿಂದಿನ ಚರಿತ್ರೆಯನ್ನು ಕೂಲಂಕಷವಾಗಿ ವಿಮರ್ಶೆಮಾಡಿ ಮುಂದಿನವರ ಕಟ್ಟಡಕ್ಕೆ ತಳಹದಿ ಹಾಕಿದ್ದು ಕನ್ನಡಿಗರ ಪುಣ್ಯ. ಅದಕ್ಕಾಗಿ ಕನ್ನಡನಾಡೇ ಚಿರಕಾಲ ಅವರಿಗೆ ಋಣಿಯಾಗಿರಬೇಕಾಗಿದೆ. ಅವರು 'ಸ್ವರ್ಗಾಗ್ರಮಾಸೇದುಷಾಮ್' ಎಂಬುದನ್ನು ನೆನೆದುಕೊಂಡರೆ 'ಗುರು ವಿಯೋಗ, ಭರಂ ಗುರುವಾಗದಿರ್ಕೆಮೆ' ಎಂದು ಸಮಾನ ಕನ್ನಡಿಗನೂ ಮರುಗದಿರನು.'

ಆಚಾರ್ಯರು ಸ್ವರ್ಗಸ್ಥರಾದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರೂ ಸಂಪಾದಕ ಮಂಡಲಿಯ ಅಧ್ಯಕ್ಷರೂ ಆದ ಶ್ರೀಮಾನ್ ಡಿ. ವಿ. ಗುಂಡಪ್ಪನವರು ಒಂದು ಸ್ಥಳೀಯ ಪತ್ರಿಕೆಗೆ ಈ ರೀತಿಯ 'ಬಾಷ್ಪಾಂಜಲಿ'ಯನ್ನು ಕಳುಹಿಸಿದರು. "ನರಸಿಂಹಾಚಾರ್ಯರ ವಿದ್ವತ್ತಿನ ವಿಷಯದಲ್ಲಿ ನಾನು ಪ್ರಶಂಸೆ ಮಾಡಹೊರಡುವುದು ಅಧಿಕಪ್ರಸಂಗವಾದೀತು. ಅವರು ಕನ್ನಡ, ತಮಿಳು, ಸಂಸ್ಕೃತ,—ಈ ಮೂರು ಭಾಷೆಗಳಲ್ಲಿಯೂ ಸಂಪೂರ್ಣಪಂಡಿತರಾಗಿದ್ದರು. ಇದರ ಜೊತೆಗೆ ಪಾಶ್ಚಾತ್ಯ ಸಾಹಿತ್ಯದಿಂದ ಸಂಪಾದಿಸಲಾಗುವ ವಿಮರ್ಶನ ಕ್ರಮವನ್ನೂ ಉದಾರ ಚಿತ್ತತೆಯನ್ನೂ ಅವರು ಸಂಪೂರ್ಣವಾಗಿ ಪಡೆದಿದ್ದರು. ಅವರ ಪ್ರಜ್ಞೆ ಸರ್ವತೋಮುಖವಾದುದು. ಅಗಾಧವಾದ ಸಾಹಿತ್ಯ ಜ್ಞಾನದ ಜೊತೆಗೆ ಅವರಿಗೆ ನೈಜವಾದ ಧರ್ಮಶ್ರದ್ಧೆಯೂ ಸೇರಿತ್ತು. ಅವರು ವಂಶಾನುಗತವಾಗಿ ಬಂದ ಶ್ರೀವೈಷ್ಣವ ಮತದಲ್ಲಿ ಪರಮಶ್ರದ್ಧಾಳುಗಳಾಗಿದ್ದಾಗ್ಯೂ ಅನ್ಯ ಮತಗಳ ವಿಷಯದಲ್ಲಿ ಪರಿಪೂರ್ಣವಾದ ಸಹಾನುಭೂತಿಯನ್ನು ತಾಳಿದ್ದರು. ನಮ್ಮ ವೀರಶೈವ ವಚನಸಾಹಿತ್ಯದ ದಿವ್ಯರತ್ನಗಳನ್ನು ಬಹು ವರ್ಷಗಳ ಹಿಂದೆ ಮೊದಲು ಪ್ರಕಾಶಕ್ಕೆ ತಂದವರು ನರಸಿಂಹಾಚಾರ್ಯರವರು. ಇದರಿಂದಲೇ ಅವರ ಮನೋವೈಶಾಲ್ಯವೆಂಥಾದ್ದೆಂಬುದು ಹೊರಪಡುತ್ತದೆ.

ಪ್ರಾಚೀನ ಚರಿತ್ರ ಶೋಧನೆಯಲ್ಲಿ ನರಸಿಂಹಾಚಾರ್ಯರು ತೋರಿದ ದಾರಿ ಎಲ್ಲ ಕಾಲಕ್ಕೂ ಮೇಲ್ಪಂಕ್ತಿಯಾಗಿರುತ್ತದೆ. ಎಲ್ಲ ವಿಚಾರಗಳನ್ನೂ ಆಮೂಲಾಗ್ರವಾಗಿ ಶೋಧಕ ಬುದ್ಧಿಯಿಂದ ನೋಡುವುದೂ, ಪಕ್ಷ ಪ್ರತಿಪಕ್ಷಗಳನ್ನೂ ಜಾಗರೂಕತೆಯಿಂದ ತೂಕಮಾಡುವುದೂ, ತಮ್ಮ ಪ್ರತಿಕಕ್ಷಿಗಳನ್ನೂ ಮರ್ಯಾದೆಯಿಂದ ಕಾಣುವುದೂ, ಸ್ವಸಿದ್ಧಾಂತವನ್ನು ಹೇಳುವುದರಲ್ಲಿ ಹಟವನ್ನು ತೋರದೆ ಪುನರಾಲೋಚನೆಯನ್ನು ಬೇಡವೆನ್ನದೆ ಇರುವ ಊಹನ ನ್ಯಾಯವನ್ನು ಅನುಸರಿಸುವುದೂ-ಇವು ಆಚಾರ್ಯರ ಸತ್ಯಾನ್ವೇಷಣ ಕ್ರಮದ ಲಕ್ಷಣಗಳು. ಅವರು

ಹೇಳಿರುವುದನ್ನೆಲ್ಲಾ ಒಂದು ಪರೀಕ್ಷಾನ್ವಯದಿಂದ ಒಂದು ಸಮರಸ ದೃಷ್ಟಿಯಿಂದ ಯಾವ ಉದ್ವೇಗ ಆವೇಶಗಳೂ ಇಲ್ಲದೆ ಹೇಳಿರುತ್ತಾರೆ.

ಅವರ ಪಾಂಡಿತ್ಯವು ಹೇಗೆ ಅಗಾಧವೂ ವಿಸ್ತಾರವೂ ಆಗಿತ್ತೋ ಹಾಗೆಯೇ ಅವರ ಸೌಜನ್ಯವೂ ನಾನಾ ವಿಧಗಳಲ್ಲಿ ಲೋಕರಂಜಕವಾಗಿತ್ತು. ಎಲ್ಲರಲ್ಲಿಯೂ ಮರ್ಯಾದೆ, ಎಲ್ಲ ಸಂದರ್ಭಗಳಲ್ಲಿಯೂ ತಾಳ್ಮೆ, ಎಲ್ಲ ಮಾನವ ವಿಚಾರಗಳಲ್ಲಿಯೂ ಕುತೂಹಲ ಮತ್ತು ಸಹಾನುಭೂತಿ, ರಸಿಕತೆ, ಲಘುಹಾಸ್ಯ ಪರತೆ, ಸಂಗೀತ ಪ್ರೀತಿ—ಇವೇ ಮೊದಲಾದ ಅವರ ಸದ್ಗುಣಗಳು ಆದರ್ಶಪ್ರಾಯ ವಾಗಿದ್ದುವು.

ಸಾಹಿತ್ಯಪರಿಷತ್ತಿಗೂ ಕನ್ನಡಸಮಾರಂಭಕ್ಕೂ ಅವರು ಒಂದು ಆಧಾರ ಸ್ತಂಭದಂತಿದ್ದರು. ನಮ್ಮ ವ್ಯಾಕರಣದ ವಿಷಯದಲ್ಲಿಯೇ ಆಗಲಿ, ಭಾಷಾ ಪ್ರಯೋಗಗಳ ವಿಷಯದಲ್ಲಿಯೇ ಆಗಲಿ, ಸಾಹಿತ್ಯ ಚರಿತ್ರೆಯ ವಿಷಯದಲ್ಲಿಯೇ ಆಗಲಿ, ಸಂಸ್ಕೃತಿ ವಿವರಗಳ ವಿಷಯದಲ್ಲಿಯೇ ಆಗಲಿ ನಮಗೆ ಯಾವ ಸಂಶಯ ತರ್ಕಗಳು ಒದಗಿದರೂ ಅವರು ಅದನ್ನು ಪರಿಹರಿಸಬಲ್ಲವರಾಗಿದ್ದರು. ಸಾಹಿತ್ಯ ರಚನೆಯಲ್ಲಿ ಅವರು ಬಹು ಮಟ್ಟಿಗೆ ಪುರಾತನ ಸಂಪ್ರದಾಯವನ್ನು ಅನುಸರಿಸಿದವರಾಗಿದ್ದರೂ ನವೀನ ಮಾರ್ಗದವರ ವಿಷಯದಲ್ಲಿ ಅವರು ಮೈತ್ರಿಯನ್ನೂ ಸಹಾನುಭೂತಿಯನ್ನೂ ತೋರಿಸುತ್ತಿದ್ದರು. ಅವರು ನಮ್ಮ ಕಡೆ ಇರುವರೆಂಬ ಒಂದು ಸಂಗತಿಯೇ ನಮಗೆ ಎಷ್ಟೋ ನೆಚ್ಚು ಬೆಂಬಲವಾಗಿ ಧೈರ್ಯಕಾರಕವಾಗಿತ್ತು. .... ವಿಧಿ ಕನ್ನಡನಾಡಿಗೆ ಒದಗಿಸಿರುವ ಅಪಾರವಾದ ಕಷ್ಟಗಳ ಜೊತೆಗೆ ಈ ಅಪರಿಮೇಯವಾದ ನಷ್ಟವನ್ನೂ ಈಗ ಹೊಸದಾಗಿ ಸೇರಿಸಿದೆ. ಕನ್ನಡವು ಅಪ್ರಸಿದ್ಧವಾಗಿ ಪ್ರೋತ್ಸಾಹವಿಲ್ಲದ್ದಾಗಿ ಅಡಗಿಕೊಂಡಿದ್ದ ಕಾಲದಲ್ಲಿ ಮುಂದೆ ಬಂದು ಅದನ್ನು ಕೈ ಹಿಡಿದು ಮೇಲಕ್ಕೆ ಎತ್ತಿದ ನಾಲ್ವರೈವರಲ್ಲಿ ನರಸಿಂಹಾಚಾರ್ಯರೂ ಒಬ್ಬರು. ಅವರು ಕನ್ನಡಕ್ಕಾಗಿ ಪಟ್ಟ ಶ್ರಮವೂ ಕನ್ನಡದಲ್ಲಿ ಅವರು ಇಟ್ಟಿದ್ದ ಶ್ರದ್ಧೆ ನಂಬಿಕೆಗಳೂ ನಮ್ಮಗಳ ಮನಸ್ಸಿನಲ್ಲಿ ಉಳಿದು ನಮ್ಮ ಜೀವನದಲ್ಲಿ ಜೊತೆಸಡುವುದಾದರೆ ನಾವು ಆ ಮಹನೀಯರನ್ನು ನಮ್ಮವರೆಂದು ಹೆಮ್ಮೆ ಪಟ್ಟುಕೊಳ್ಳುವುದು ಸಾರ್ಥಕವಾಗುತ್ತದೆ. ಅವರು ಸಲಸಲವೂ ಕನ್ನಡದ ಅವಸ್ಥೆಯನ್ನು ಕುರಿತು ನನ್ನೊಡನೆ ಶೋಕಿಸುತ್ತಿದ್ದರು. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಸಹ ಅದರ ಜೊತೆ ಇನ್ನೂ ಹೀನವಾಗಿರುವುದಲ್ಲಾ ಎಂದು ಅವರು ಪದೇ ಪದೇ ಮರುಗಿ

ನಮ್ಮ ಈ ದುಃಖವನ್ನು ನಮ್ಮ ಮಹಾಪ್ರಭುಗಳಲ್ಲಿ ಬಿನ್ನಯಿಸುವ ಏರ್ಪಾಟು ಮಾಡಬೇಕೆಂದು ಸೂಚನೆಯನ್ನು ತಿಳಿಸಿದ್ದರು. ಇಂಥ ದೇಶಭಾಷಾಭಿಮಾನಿಗಳಾದ ಮಹಾನುಭಾವರ ಸಂತತ ಸ್ಮರಣೆ ಈ ಕಾಲದಲ್ಲಿ ನಮಗೆ ಅತ್ಯಂತ ಅವಶ್ಯವಾದ ತಾರಕಮಂತ್ರದಂತೆ ಇರುತ್ತದೆ. ಇವರು ಅನ್ವರ್ಥಬಿರುದರಾದ ಮಹಾಮಹೋಪಾಧ್ಯಾಯರು. ಇವರ ದಿವ್ಯ ತೇಜಸ್ಸು ಸರ್ವದಾ ಕನ್ನಡಿಗರ ಮನೋನಯನಗಳಿಗೆ ಗೋಚರವಾಗಿ ಅವರು ನಡೆಯುವ ದಾರಿಯನ್ನು ಬೆಳಗುತ್ತಿರಲಿ."

ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ಅವರು ಮರಣ ಹೊಂದಿದ ತರುಣದಲ್ಲಿ ಅಧಿವೇಶನ ಸೇರಿ (೧೩–೧೨–೩೬) ಕಾರ್ಯಾರಂಭಕ್ಕೆ ಮೊದಲು ಒಂದು ಸಂತಾಪ ಸೂಚಕ ನಿರ್ಣಯವನ್ನು ಸರ್ವಾನುಮತದಿಂದ ಒಪ್ಪಿ ಆಚಾರ್ಯರ ಕುಟುಂಬಕ್ಕೆ ಕಳುಹಿಸಿಕೊಟ್ಟರು. ಅಲ್ಲದೇ ಇದೇ ಉದ್ದೇಶದಿಂದ ಪರಿಷತ್ತಿನ ಆಶ್ರಯದಲ್ಲಿ ಬೆಂಗಳೂರ ಮಹಾಜನರೂ ಒಂದು ಸಭೆಯನ್ನು ನಡೆಸಿದರು (೧೩–೧–೧೯೩೭). ಅಂದು ರಾಜಸಭಾ ಭೂಷಣ ದಿವಾನ್ ಬಹದ್ದೂರ್ ಸರ್. ಕೆ. ಪಿ. ಪುಟ್ಟಣ್ಣಶೆಟ್ಟಿ, ಕೆಟಿ. ಸಿ. ಐ. ಇ, ಎಲ್ ಎಲ್ ಡಿ , ಅವರು ಅಧ್ಯಕ್ಷರಾಗಿದ್ದರು. ರಾಜಕಾರ್ಯ ಪ್ರಸಕ್ತ ರಾವ್‌ಬಹದ್ದೂರ್ ಎಂ. ಶ್ಯಾಮರಾಯರು, ಸರ್ಪಭೂಷಣ ಮಠದ ಶ್ರೀ ಮಹದೇವ ಸ್ವಾಮಿಗಳವರೂ, ಪಂಡಿತ ಮಲ್ಲಪ್ಪನವರೂ, ಶ್ರೀ ಬಿ. ಪುಟ್ಟಯ್ಯನವರೂ ಪ್ರೊ. ಬಿ. ಎಂ. ಶ್ರೀಕಂಠಯ್ಯನವರೂ ಶ್ರೀ. ಡಿ. ವಿ. ಗುಂಡಪ್ಪನವರೂ ಭಾಷಣ ಮಾಡಿದರು.

ಅಂದು ಶ್ರೀಮಾನ್ ಡಿ. ವಿ. ಗುಂಡಪ್ಪನವರು "ಶ್ರೀ. ಆರ್. ನರಸಿಂಹಾಚಾರ್ಯರು ಕನ್ನಡಕ್ಕೆ ಮಾಡಿರುವ ಉಪಕಾರವನ್ನು ಜೈನರು, ವೀರಶೈವರು, ಬ್ರಾಹ್ಮಣರು ಆದಿಯಾಗಿ ಸಕಲ ಪಂಗಡದವರೂ ನೆನೆಯತಕ್ಕದ್ದು ನ್ಯಾಯವಾಗಿದೆ. ಶ್ರೀಮಾನ್ ಆಚಾರ್ಯರು ತಮ್ಮ ಕವಿಚರಿತ್ರೆಯಲ್ಲಿ ಜೈನ, ವೀರಶೈವ, ಬ್ರಾಹ್ಮಣ ಸಾಹಿತ್ಯಗಳನ್ನು ಕುರಿತು ಬರೆದಿದ್ದನ್ನು ಸತ್ಯದೃಷ್ಟಿಯಿಂದ ನಿಷ್ಪಕ್ಷಪಾತವಾಗಿ ಬರೆದಿರುವುದಲ್ಲದೆ ಆ ಪಂಗಡದ ಜನರಲ್ಲಿಯೂ ಅದೇ ವಿಧವಾಗಿ ವಿಶ್ವಾಸದಿಂದಲೂ ಅಭಿಮಾನದಿಂದಲೂ ವರ್ತಿಸುತ್ತಿದ್ದರು. ಇದು ಕನ್ನಡದಲ್ಲಿ ಕೆಲಸ ಮಾಡುತ್ತಿರುವ ಎಲ್ಲರಿಗೂ ಮೇಲ್ಪಂಕ್ತಿಯಾದ ಮತ್ತು ಶ್ರೇಯಸ್ಕರವಾದ "ಮಾರ್ಗವಾಗಿದೆ." ಆದುದರಿಂದ ದಿವಂಗತ ಆಚಾರ್ಯರಿಗೆ ಸ್ಮಾರಕವಾಗಿರುವಂತೆ,

೧. ಪರಿಷನ್ಮಂದಿರದಲ್ಲಿ ಒಂದು ಭಾವಚಿತ್ರವನ್ನಿಡಬೇಕು.

೨. ಅವರ ಹೆಸರಿನಲ್ಲಿ ಪರಿಷತ್ಪತ್ರಿಕೆಯ ವಿಶೇಷ ಸಂಚಿಕೆಯನ್ನು ಹೊರಡಿಸಬೇಕು.

೩. ಪರಿಷತ್ತಿನಲ್ಲಿ ಅವರ ಹೆಸರುಳ್ಳ ಒಂದು ಗ್ರಂಥಭಂಡಾರವನ್ನು ನಿರ್ಮಿಸಬೇಕು.

೪. ಅವರ ಹೆಸರಿನಲ್ಲಿ ಕನ್ನಡ ಸಂಶೋಧನ ಕಾರ್ಯಕ್ಕಾಗಿ ಒಂದು ವಿದ್ಯಾರ್ಥಿ ವೇತನವನ್ನು ಸ್ಥಾಪಿಸಬೇಕು"–ಎಂಬ ಸೂಚನೆಗಳನ್ನು ಕೊಟ್ಟು ಇದಕ್ಕಾಗಿ ಮಹಾಜನರ ಸಹಾಯವನ್ನು ಬೇಡಿದರು. ಈ ಸೂಚನೆಗಳು ಸರ್ವಸಮ್ಮತವಾಗಿ ಅಂಗೀಕೃತವಾದದ್ದಲ್ಲದೆ ಶ್ರೀ ವರ್ಮಾ ಪಂಡಿತ ಎಲ್ಲಪ್ಪನವರು ಕೂಡಲೇ ಎದ್ದು ನಿಂತು ತಮ್ಮಲ್ಲಿರುವ ಓಲೆಯ ಗ್ರಂಥಗಳನ್ನೆಲ್ಲ ಈ ಸ್ಮಾರಕಕ್ಕೆ ಅನುಕೂಲವಾಗಿರುವಂತೆ ದಾನ ಮಾಡುವುದಾಗಿ ಅಪ್ಪಣೆ ಕೊಡಿಸಿದರು. ಅದಕ್ಕಾಗಿ ಪರಿಷತ್ತು ಶ್ರೀ ವರ್ಮಾ ಪಂಡಿತರಿಗೆ ವಿಶೇಷ ಕೃತಜ್ಞತೆಯನ್ನು ಸಲ್ಲಿಸಿತು. ಆದರೆ ಸೂಚನೆಯ ಬಹು ಭಾಗ ಸರಸ್ವತೀಪ್ರಸನ್ನವಾಗಿಯೇ ಉಳಿಯಿತು. ಸೂಚನೆಗಳಾಗಿ ಈಗಾಗಲೆ ೨೫ ವರ್ಷಗಳಾದುವು. ಈಗಲಾದರೂ ಏಕೀಕೃತ ಸ್ವತಂತ್ರ ಕರ್ನಾಟಕದ ಎಚ್ಚೆತ್ತ ಕನ್ನಡಿಗರು ತಮ್ಮ, ತಮ್ಮ ನಾಡಿನ, ತಮ್ಮ ಸಂಪ್ರದಾಯದ ಹಿರಿಮೆಗಾಗಿ, ಅಭಿವೃದ್ಧಿಗಾಗಿ, ಮುಂದಿನ ಸಂಶೋಧನಾಕಾರ್ಯಗಳ ಬೆಳವಣಿಗೆಗಾಗಿ, ತಮ್ಮ ಋಣವಿಮೋಚನೆಗಾಗಿ ಮೇಲಿನ ಸೂಚನೆಗಳನ್ನು ಸಂಪೂರ್ಣವಾಗಿ ಕಾರ್ಯಗತವನ್ನಾಗಿಸುತ್ತಾರೆಂದು ಹಾರೈಸೋಣ.

ಓಂ ತತ್ಸತ್

ಸೂಚನೆ :— ಈ ಪ್ರಬಂಧರಚನೆಗೆ ಸಹಾಯವಾಗುವಂತೆ ಸಹಾಯ ಸಾಮಗ್ರಿಗಳನ್ನೊದಗಿಸಿದ ಆಚಾರ್ಯರ ಪೌತ್ರರಾದ ಶ್ರೀ ಆರ್. ರಾಮಸ್ವಾಮಿಯವರಿಗೂ ಅವರ ಸಹಾಯಾಧಿಕಾರಿಗಳಾಗಿದ್ದ ಶ್ರೀ ಆರ್. ರಾಮರಾಯರಿಗೂ ಅವರ ಅಭಿಮಾನಿಗಳಾದ ಶ್ರೀ ತಿರುಮಲೆ ತಾತಾಚಾರ್ಯಶರ್ಮರಿಗೂ ನಾನು ಕೃತಜ್ಞನಾಗಿದ್ದೇನೆ.

ಶ್ರೀ ಆರ್. ನರಸಿಂಹಾಚಾರ್ಯರ ಕೃತಿಗಳು ಮತ್ತು ಸಂಶೋಧನಾ ಲೇಖನಗಳು

ಅ ಕೃತಿಗಳು

೧:—(ಸ್ವತಂತ್ರವಾಗಿ)

ನೀತಿ ವಾಕ್ಯ ಮಂಜರಿ

ಶಬ್ದರೂಪಾವಳಿಯ ಸಂಶೋಧಿತ ಮುದ್ರಣ (ಸಂಸ್ಕೃತ)

ಚಂಪೂರಾಮಾಯಣದ ಕೆಲವು ಭಾಗಗಳ ಸುಸಂಸ್ಕೃತ ಪ್ರಕಟಣ (ಸಂಸ್ಕೃತ)

ವಸ್ತುಪಾಠಗಳು—೨ ಭಾಗಗಳು.

ಬಣ್ಣಗಳು ಮತ್ತು ಆಕಾರಗಳು.

ನಗೆಗಡಲು.

ಕರ್ಣಾಟಕ ಕವಿಚರಿತ್ರೆ—ಮೂರು ಸಂಪುಟಗಳು.

ಶಾಸನಪದ್ಯಮಂಜರಿ.

ನೀತಿ ಮಂಜರಿ—೧, ೨ ನೆಯ ಭಾಗಗಳು.

ನೂಟ್ರೆಟ್ಟುತ್ತಿರುಪ್ಪತಿಯಂದಾದಿ. (ತಮಿಳು—ಸಂಪಾದಿತ)

ತಿರುವಾಯ್ ಮೊಳಿ ನೂಟ್ರಂದಾದಿ (ತಮಿಳು—ಸಂಪಾದಿತ)

History of Kannada Language.

History of Kannada Literature.

ಪುರುಷಾರ್ಥ ಕಲ್ಪದ್ರುಮವೆಂಬ ಕಿರುಹೊತ್ತಿಗೆಗಳು—(ವೇದ ಮತ್ತು ಸ್ತೋತ್ರಗಳ ಸಂಗ್ರಹ) (ಉಭಯ ವೇದಾಂತ ಪ್ರವರ್ತನ ಸಭೆಯ ಪರವಾಗಿ).

೨:—ಇಲಾಖಾ ಪರವಾಗಿ

೧೯೦೬ ರಿಂದ ೧೯೨೨ ರವರೆಗಿನ ೧೬ ವರ್ಷಗಳ ಇಲಾಖೆಯ ವರದಿ.

'ಎಪಿಗ್ರಾಫಿಯಾ ಕರ್ಣಾಟಕ'ದ ವಿಸ್ತಾರವಾದ ಅಕಾರಾದಿ.

ಇಲಾಖಾ ವರದಿಗಳ ಅಕಾರಾದಿ.

ಐತಿಹಾಸಿಕ ಮತ್ತು ಸಾಮಾಜಿಕ ಪ್ರಾಮುಖ್ಯವನ್ನುಳ್ಳ ಶಾಸನಗಳ ಸಂಗ್ರಹ.

ಶ್ರವಣ ಬೆಳುಗೊಳದ ಶಾಸನಗಳ ಸಂಶೋಧಿತ ಪುನರ್ಮುದ್ರಣ.

ಸೋಮನಾಥ ಪುರ, ಬೇಲೂರು, ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮೀ ದೇವಾಲಯಗಳ ಶಿಲ್ಪಗಳನ್ನು ಪರಿಚಯ ಮಾಡುವ ಮೂರು ಕೈಪಿಡಿಗಳು

ಭಟ್ಟಾಕಳಂಕನ 'ಶಬ್ದಾನುಶಾಸನ'ದ ಸಂಶೋಧಿತ ಪುನರ್ಮುದ್ರಣ.

ಹಳೆಬೀಡು ಮತ್ತು ಅದರ ದೇವಾಲಯದ ವಿಷಯವಾಗಿ ಪಟೇಲ್ ನಂಜೇಗೌಡರಿಂದ ರಚಿತವಾದ ಕನ್ನಡ ಕೃತಿಯ ಸಂಪಾದಿತ ಮುದ್ರಣ.

ಮೈಸೂರು, ತುಮಕೂರು, ಹಾಸನ, ಕೋಲಾರ ಜಿಲ್ಲೆಗಳ ಎಪಿಗ್ರಾಫಿಯ ಕರ್ನಾಟಿಕದ ಸಂಪುಟಗಳ ಅನುಬಂಧ.

ಮೈಸೂರು ಹಾಸನ ಅನುಬಂಧಗಳ ಕನ್ನಡ ಪಾಠ.

ಬೆಂಗಳೂರು ತುಮಕೂರುಗಳ ಅನುಬಂಧ.

(ಕೊನೆಯ ಮೂರು ಕೃತಿಗಳು ಮ| ಮ| ಡಾ. ಶಾಮಶಾಸ್ತ್ರಿ ಮತ್ತು ಡಾ|| ಎಂ. ಎಚ್. ಕೃಷ್ಣ ಅವರಿಂದ ಪ್ರಕಟವಾದವು).

ಆ. ಲೇಖನಗಳು :—

1. 'ಹಿತಬೋಧಿನಿ'ಯಲ್ಲಿ

ಸಂಗೀತಶಾಸ್ತ್ರ ವಿಷಯಕವಾಗಿ—

2. ಮಿಥಿಕ್ ಸೊಸೈಟಿಯ ತ್ರೈಮಾಸಿಕ ಪತ್ರಿಕೆಯಲ್ಲಿ :—

1. Andhra and Roman coins in Chitaldroog.
2. Talkad.
3. Magadi and its neighbourhood.
4. Bababudan giri.
5. A reply to V. Subrahmanya Iyer's articles.
6. The Mysore Royal Insignia
7. The story of Jivandhara in Kannada Literature.
8. The Western Gangas of Talkad.

3 ಇಂಡಿಯನ್ ಆಂಟಿಕ್ವರಿ ಪತ್ರಿಕೆಯಲ್ಲಿ

1. Chaitra–Pavitra (Ind. Ant. Vol. 38–P 52).
2. The Chalukyan Geneology as given by the Kannada Poct Ranna (Ind. Ant. Vol. 40, P. 41)
3. Bhamaha and Dandi (Ind. Ant. Vol. 45, P. 90).
4. Shankaracharya and Balavarma (Ind. Ant. Vol. 42, P. 53).
5. A Few remarks on prof. Pathaks paper on Dandi, Nyasakara and Bbamaha (Ind. Ant. Vol. 42 P 204).
6. Kayatha (Ind. Ant. Vol. 44. P 11)
7. Shandy (Ind Ant. Vol. 44 P. 132)
8. Madhavacharya and his younger brothers (Ind. Ant. Vol. 45. P. 1–17).

ಶ್ರೀಮಾನ್. ಆರ್. ನರಸಿಂಹಾಚಾರ್ಯರ ಜೀವನದಲ್ಲಿ ಪ್ರಧಾನವಾದ ಘಟನೆಗಳು

೧೮೬೦ ಜನನ.

೧೮೭೩ ವಿವಾಹ.

೧೮೭೮ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪ್ರಥಮಸ್ಥಾನವನ್ನು ಪಡೆದು ತೇರ್ಗಡೆ.

೧೮೭೯ ಎಫ್. ಎ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಜಯ.

೧೮೮೨ ಬಹುಮಾನ ಮತ್ತು ಪಾರಿತೋಷಕಗಳೊಡನೆ ಪದವೀಧರರಾದರು.

೧೮೮೨-೯೪ ವಿವಿಧ ಶಾಲೆಗಳಲ್ಲಿ ಉಪಾಧ್ಯಾಯ ವೃತ್ತಿ.

೧೮೯೨ ಕನ್ನಡ ಎಂ.ಎ. ಪದವೀಧರರಾದುದು.

೧೮೯೪ ವಿದ್ಯಾಇಲಾಖೆಯಲ್ಲಿ ಭಾಷಾಂತರಕಾರರಾಗಿ ನೇಮಕ.

೧೮೯೯ ರೈಸರ ಸಹಾಯಾಧಿಕಾರಿಯಾಗಿ ಅಂಗೀಕಾರ.

೧೯೦೩ 'ಕಾವ್ಯಾವಲೋಕನ' ಮತ್ತು 'ಭಾಷಾಭೂಷಣ'ಗಳ ಪ್ರಕಾಶನ.

೧೯೦೬ ಪ್ರಾಚ್ಯಸಂಶೋಧನ (ಶಾಸನದ ಇಲಾಖೆ) ಇಲಾಖೆಯ ಮುಖ್ಯಾಧಿಕಾರಿಗಳಾಗಿ ಅಧಿಕಾರ ಸ್ವೀಕಾರ.

೧೯೦೭ 'ರಾಯಲ್ ಏಷ್ಯಾಟಿಕ್ ಸೊಸೈಟಿ'ಯ ಸದಸ್ಯತ್ವ.

" 'ಕರ್ನಾಟಕ ಕವಿಚರಿತ್ರೆ'ಯ ಪ್ರಥಮ ಸಂಪುಟದ ಪ್ರಕಟಣ.

೧೯೧೩ 'ಪ್ರಾಕ್ತನ ವಿಮರ್ಶವಿಚಕ್ಷಣ' ಪ್ರಶಸ್ತಿಯ ಲಾಭ.

೧೯೧೬ ಸರ್ಕಾರದಿಂದ 'ರಾವ್‌ಬಹದ್ದೂರ್' ಪ್ರಶಸ್ತಿ.

೧೯೧೮ ಧಾರವಾಡದಲ್ಲಿ ನಡೆದ ಕರ್ನಾಟಕ ಸಾಹಿತ್ಯಪರಿಷತ್ತಿನ ಅಧ್ಯಕ್ಷಪೀಠ.

೧೯೧೯ ಪ್ರಥಮ ಪ್ರಾಚ್ಯವಿದ್ಯಾಸಮ್ಮೇಳನದ (Oriental Conference) ಮೈಸೂರಿನ ಪ್ರತಿನಿಧಿಯಾಗಿ ಆಯ್ಕೆ.

" 'ಕರ್ನಾಟಕ ಕವಿಚರಿತ್ರೆ'ಯ ದ್ವಿತೀಯ ಸಂಪುಟದ ಬಿಡುಗಡೆ

೧೯೨೨ ಪ್ರಾಚ್ಯವಿದ್ಯಾಸಮ್ಮೇಳನದ ಇತಿಹಾಸ ಮತ್ತು ಪ್ರಾಚ್ಯವಿದ್ಯಾ ಭಾಗದ ಅಧ್ಯಕ್ಷರಾಗಿ ಚುನಾವಣೆ.

" ಸರ್ಕಾರಿ ಕೆಲಸದಿಂದ ವಿಶ್ರಾಂತಿ

೧೯೩೦ ‘ಪ್ರಾಚ್ಯವಿದ್ಯಾವೈಭವ’ ವೆಂಬ ಬಿರುದಿನ ಸನ್ಮಾನ.

೧೯೩೧ ಸೆಂಟ್ರಲ್ ಕಾಲೇಜಿನ ವಾರ್ಷಿಕೋತ್ಸವದ ಅಧ್ಯಕ್ಷತೆ.

೧೯೩೨ ‘ಕರ್ಣಾಟಕ ಕವಿಚರಿತ್ರೆ’ಯ ತೃತೀಯ ಸಂಪುಟದ ಪ್ರಕಟಣೆ

೧೯೩೩ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯ ಪಾರಿತೋಷಕ ವಿನಿಯೋಗ ಸಮಾರಂಭದ ಅಧ್ಯಕ್ಷತೆ.

೧೯೩೪ ಕೇಂದ್ರಸರ್ಕಾರದಿಂದ ‘ಮಹಾಮಹೋಪಾಧ್ಯಾಯ’ ಎಂಬ ಮಹತ್ಪ್ರಶಸ್ತಿಯ ಲಾಭ.

" ಮೈಸೂರು ವಿದ್ಯಾಶಾಲಾ ಪಂಡಿತಮಂಡಲಿಯ ಪ್ರಥಮ ಸಮ್ಮೇಳನದ ಅಧ್ಯಕ್ಷತೆ.

೧೯೩೫ ಧರ್ಮಸ್ಥಳದಲ್ಲಿ ನಡೆದ ‘ಸಕಲಧರ್ಮಸಮ್ಮೇಳನ’ದ ಅಗ್ರಾಸನತ್ವ.

೧೯೩೬ ಆಚಾರ್ಯರ ನಿಧನ—